ಸಜ್ಜನರ ಸಂಗಾತಿ
www.sanmarga.com

ಸಂಪುಟ: 33
ಸಂಚಿಕೆ: 01
ಬೆಲೆ ರೂ. 8.00
ಮಂಗಳೂರು

# ಸನ್ಮಾರ್ಗ ವಾರಪತ್ರಿಕೆ

2010 ಮಾರ್ಚ್ 21 – 27
1431 ರಬೀಉಲ್ ಆಖಿರ್ 03 – 09

Crafting the Ancient Tradition....
PARADISE
Burkha House
Estd. in 1992
Kunil Centre, Shop # 124, Hampankatta
Mangalore-1. INDIA
Ph: +91 824 2441742, 2445540
Fax: +91 824 4277887
e-mail:burkhaparadise@yahoo.com
Web:www.paradiseburkhahouse.com

Manufacturers & Exporters of: World Class BURKHA, HIJAB, SHAWLS & SCARF

## ಸಂಪಾದಕರ ಕೊಠಡಿಯೂ ಎಕ್ಸ್‌ಪೋಸ್ ಆಗಲಿ

ವಿಶೇಷ ಸಂಪಾದಕೀಯ

ಮಾಧ್ಯಮ ಜಗತ್ತು ಔದ್ಯಮೀಕರಣಗೊಂಡಿದೆ ಎಂಬ ಬಗ್ಗೆ ಇವತ್ತು ಯಾರಲ್ಲೂ ಅನುಮಾನ ಇರುವ ಸಾಧ್ಯತೆ ಇಲ್ಲ. ಸತ್ಯ, ನ್ಯಾಯ, ನೈತಿಕತೆ, ಪ್ರಾಮಾಣಿಕತೆ ಮುಂತಾದ ಮೌಲ್ಯಗಳು ಸಂಪಾದಕರ ಕೊಠಡಿಯಲ್ಲಿ, ಉಪ ಸಂಪಾದಕರ ಡೆಸ್ಕ್‌ನಲ್ಲಿ ಮತ್ತು ಪತ್ರಕರ್ತರ ಕೈಯಲ್ಲಿ ಈಗಾಗಲೇ ಬಹುತೇಕ ಅಕಾಲ ಮೃತ್ಯು ಗೀಡಾಗಿವೆ. ಓರ್ವ ಪತ್ರಕರ್ತನನ್ನೋ ಸಂಪಾದಕನನ್ನೋ ತೋರಿಸಿ, 'ಆತ ಭಾರೀ ಪ್ರಾಮಾಣಿಕ' ಎಂದು ಯಾರಾದರೂ ಹೇಳಿ ಬಿಟ್ಟರೆ ಅದನ್ನು ನಂಬುವುದು ಬಿಡಿ, ಅದನ್ನೇ ದಿನದ ಜೋಕಾಗಿ ಎಸ್‌ಎಂಎಸ್ ಮಾಡುವಷ್ಟು ಆ ಹುದ್ದೆಯ ಇಮೇಜು ಕೆಟ್ಟು ಹೋಗುತ್ತಿದೆ. ತಿಂಗಳ ಹಿಂದೆ 'ದಿ ಹಿಂದೂ ಪತ್ರಿಕೆಯ ಸಾಯಿನಾಥ್‌ರು ಪೇಯ್ಡ್ ನ್ಯೂಸ್ ಎಂಬೊಂದು ಸುದ್ದಿಯನ್ನು ಸ್ಫೋಟಿಸಿದ್ದರು. ಮಹಾರಾಷ್ಟ್ರದ ಅಸೆಂಬ್ಲಿ ಚುನಾವಣೆಯ ಸಂದರ್ಭದಲ್ಲಿ ವಿವಿಧ ಪತ್ರಿಕೆಗಳ ಮಾಲಿಕರು, ಸಂಪಾದಕರು ಮತ್ತು ಪತ್ರಕರ್ತರು, ರಾಜಕಾರಣಿಗಳಿಂದ ದುಡ್ಡು (2ನೇ ಪುಟಕ್ಕೆ)

# ಅಲ್ಲ, ಬುರ್ಖಾ ಬಿಸಾಕಿದರೆ ಶೋಷಣೆ ತಪ್ಪುತ್ತಾ?



ರಹೀನಾ

ಬುರ್ಖಾಧಾರಿಣಿಯ ಬಿಚ್ಚು ಮಾತು



ಒಂದು ವರ್ಷದ ಹಿಂದೆ I P.U.C. ದಾಖಲಾತಿ ಸಂದರ್ಭದಲ್ಲಿ 'ತಲೆಯನ್ನು ಮರೆಸಲು ಅವಕಾಶ ಮಾಡಿಕೊಡಿ ಸಿಸ್ಟರ್' ಎಂದು ಮಂಗಳೂರಿನ ಪ್ರತಿಷ್ಠಿತ ಕ್ರೈಸ್ತ ವಿದ್ಯಾಸಂಸ್ಥೆಯೊಂದರ ಪ್ರಾಂಶುಪಾಲರಲ್ಲಿ ವಿನಂತಿಸಿದಾಗ, 'ಇಲ್ಲ ಅದು ಸಾಧ್ಯವಿಲ್ಲ. ಬೇಕಿದ್ದರೆ ಹಾಗೆ ಬರಬೇಕು. ಇಲ್ಲವಾದರೆ ಬೇರೆ ಕಾಲೇಜಿಗೆ ಸೇರಿಕೊಳ್ಳಿ' ಎಂದಾಗ, 'ಹಾಗಾದ್ರೆ ನೀವು ತಲೆಗೆ ಬಟ್ಟೆ ಹಾಕಿದ್ದೀರಲ್ಲಾ, ಅದ್ಯಾಕೆ? ನಿಮಗೂ ಸಾರಿ ಉಟ್ಟು, ತಲೆ ತೆರೆದು ಇರಬಹುದಲ್ವೆ' ಎಂದು ಪ್ರಶ್ನಿಸಿದಾಗ, 'ಸಾಕು ಸಾಕು. ಹೈಲೆವೆಲ್‌ನ ನನ್ನ ನೀತಿಗೆ ನೀನು ಕೈ ಹಾಕಬೇಡ' ಎಂದು ತಮ್ಮ ಅಲ್ಪತನದ ದರ್ಶನವನ್ನು ಮಾಡಿದ್ದರು. ಜವಾಬ್ದಾರಿಯುತ ಸ್ಥಾನದಲ್ಲಿರುವ ಶಿಕ್ಷಕರ ಅತ್ಯಂತ ಅಲ್ಪತನದ ಮಾತಿಗೆ ನಾನು ಉತ್ತರಿಸಲು ಹೋಗಲಿಲ್ಲ. ಪ್ರಾಂಶುಪಾಲರು, ವಿದ್ಯಾವಂತರೆಂಬ ಹೆಸರು ಗಳಿಸಿಕೊಂಡ ಇಂತಹ ಮಂದಿಯ ನೈತಿಕ ಮಟ್ಟದ ಅರಿವನ್ನು ನಾವು ಈ ಮಾತಿನಿಂದ ಅಳೆಯಬಹುದು.

ಸಿಸ್ಟರ್ಸ್ (ನನ್) ಎಂದು ಹೇಳಿಕೊಂಡು ಸ್ತ್ರೀ ವಿಭಾಗದಿಂದಲೇ ಮೇಲ್ವರ್ಗ, ಕೆಳವರ್ಗ ಎಂಬ ತಾರತಮ್ಯವನ್ನು ಸಂಪ್ರದಾಯವಾಗಿ ಮಾಡಿಕೊಂಡು ಬಂದ ಒಂದು ಸಮುದಾಯದ ಮೈ ಮುಚ್ಚುವ ಬಟ್ಟೆ ಯಾರ ಕೆಂಗಣ್ಣಿಗೂ ಹೇತುವಾಗಲಿಲ್ಲ, ಹೇತುವಾಗಬಾರದು. ಅದನ್ನು ಧಾರ್ಮಿಕ ವಿಧಿಯೆಂಬಂತೆ ಎಲ್ಲಾ ಸಮುದಾಯ ಗೌರವಿಸುತ್ತದೆ. ಆದರೆ ಇಸ್ಲಾಮ್ ಧರ್ಮ ಪ್ರತಿಪಾದಿಸುವ ಎಲ್ಲಾ ಮಹಿಳೆಯರು ಸರಿಸಮಾನರು, ಗೌರವಾರ್ಹರು, ಯಾರು ಮೇಲೂ ಅಲ್ಲ, ಯಾರೂ ಕೀಳೂ ಅಲ್ಲ, ಯಾರೂ ತಮ್ಮ ಅಂಗ ಪ್ರದರ್ಶನ ಮಾಡಬಾರದು, ಆ ಮೂಲಕ ನೀವು ದೇವ ಸಂಪ್ರೀತಿ ಗಳಿಸಬಹುದು ಎಂಬ ದೇವಾಜ್ಞೆಯು, ಅಂಧಕಾರದ, ಶೋಷಣೆಯ, ಮೌಢ್ಯದ ಪರಮಾವಧಿಯಾಗಿ ಬಿಂಬಿಸುವವರ ಅವಸ್ಥೆಯಂತೂ ಅರ್ಥವಾಗದು. ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ಒಂದು ಸಮುದಾಯದ ಆದರ್ಶವನ್ನೇ ಕೆಟ್ಟದಾಗಿ ಚಿತ್ರಿಸುವ ಈ ಪರಿಪಾಠಕ್ಕೆ ಕೊನೆ ಎಂದು?

ಕನ್ನಡ ಪ್ರಭದಂತಹ ಜಾತ್ಯತೀತ ನಿಲುವಿನ ಪತ್ರಿಕೆಯೊಂದು (11ನೇ ಪುಟಕ್ಕೆ)

# ಬುರ್ಖಾದ ಕುರಿತು ಚರ್ಚೆ ನಡೆಸೋಣ



ಅರಫಾ ಮಂಚಿ

'ಬುರ್ಖಾ'ದ ವಿವಾದ ಏನೇ ಇರಲಿ, ಪ್ರಜಾವಾಣಿಯ ತನ್ನ ಅಂಕಣದಲ್ಲಿ ದಿನೇಶ್ ಅಮೀನ್ ಮಟ್ಟು ಮುಸ್ಲಿಮರಿಗೆ 'ಉದಾರವಾದಿ ನಾಯಕರು ಸಿಗಲಿ' ಎಂದು ಹಾರೈಸುತ್ತಾ ಆರೋಗ್ಯಕರವಾದ ಒಂದು ಚರ್ಚೆಗೆ ನಾಂದಿ ಹಾಡಿದ್ದಾರೆಂದು ಅನ್ನಿಸುತ್ತದೆ. ಬುರ್ಖಾ ಎನ್ನುವುದು ನಿಜವಾಗಿ ಕೋಮುಗಲಭೆ ಸೃಷ್ಟಿಸುವಂತಹ ಸ್ಫೋಟಕ ವಸ್ತುವೇ? ತಮ್ಮ ಧರ್ಮದ ಆಚರಣೆಗಳ ಬಗ್ಗೆ ಚರ್ಚೆಯನ್ನು ಮುಸ್ಲಿಮರು ಇಷ್ಟಪಡುವುದಿಲ್ಲವೇ? ಅವರಲ್ಲಿ ಅಷ್ಟೊಂದು ಅಸ್ಥೈರಣೆ ಇದೆಯೇ? ಎಂಬಿತ್ಯಾದಿ ಪ್ರಶ್ನೆಯನ್ನು ಮಟ್ಟು ಮುಸ್ಲಿಮ್ ಸಮಾಜದ ಮುಂದೆ ಇಟ್ಟಿದ್ದಾರೆ. (5ನೇ ಪುಟಕ್ಕೆ)

# ಇಷ್ಟಕ್ಕೂ ಜೀವಕ್ಕಿಂತ ಉಗುರು, ಕೂದಲು ಮುಖ್ಯನಾ?

ಎ.ಕೆ. ಕುಕ್ಕಿಲ



ಲಿಸಾ ರೇ

"ಅಕ್ಟೋಬರ್ 12, 2009

ನಾನು, 'ಎ ಮೂವೆಬಲ್ ಫೀಸ್ಟ್' ಎಂಬ ಹೆಮಿಂಗ್ವೆಯ ಕತೆ ಓದತೊಡಗಿದೆ. ಇಂಥದ್ದೊಂದು ಕತೆಯನ್ನು ಓದುವೆನೆಂದು ಕೆಲವು ತಿಂಗಳುಗಳ ಹಿಂದೆ ನಾನು ಊಹಿಸಿಯೇ ಇರಲಿಲ್ಲ. ರೋಗ ಮನುಷ್ಯನನ್ನು ಎಷ್ಟೊಂದು ಬದಲಿಸುತ್ತದಲ್ಲವೇ? ಆ ಕತೆಯ ಪಾತ್ರಗಳಿಗೆ ನನ್ನನ್ನು ನಾನು ಹೋಲಿಸಿಕೊಳ್ಳತೊಡಗಿದೆ. ನಾನು ಸಾಯುತ್ತೇನೆಯೇ? ಎಲ್ಲರನ್ನೂ ಬಿಟ್ಟು ನಾನು ಒಂಟಿಯಾಗಲಿದ್ದೇನೆಯೇ? ಕ್ಯಾನ್ಸರಿನ ಕುರಿತಂತೆ ನಾನು (3ನೇ ಪುಟಕ್ಕೆ)

# 1 CAD COMPANY IN ASIA
CADD CENTRE
UDUPI
0820 - 2522741
0820 - 2521374
MANGALORE
0824 - 3256070
0824 - 4285772
INDUSTRY SPECIFIC SPECIALIZED COURSES
• Mechanical CADD • Civil CADD • Architectural CADD • Electrical CADD • Interior Architecture & Design • 3DS Max • Project Planning & Management using Primavera / M.S. Project. ANSYS
L.C.C. Building Opp. M.G.M. College, Kunjibettu, Udupi - 576102
Ist flr, Prime Towers, Opp. Mangalore Nursing Home, Bendoorwell, Mangalore - 3

ಪರಮ ದಯಾಮಯ-ಕರುಣಾಳುವಾದ ಅಲ್ಲಾಹನ ನಾಮದಿಂದ

## ಸಂಪಾದಕೀಯ

# ಸಂಪಾದಕರ ಕೊಠಡಿಯೂ ಎಕ್ಸ್‌ಪೋಸ್ ಆಗಲಿ

(ಮುಖಪುಟದಿಂದ)

ಪಡೆದುಕೊಂಡು, ಹೇಗೆ ಅವರ ಪರವಾಗಿ ಸುದ್ದಿ ಬರೆದಿದ್ದರು ಎಂಬುದನ್ನು ಪುರಾವೆ ಸಮೇತ ಅವರು ಬಹಿರಂಗಪಡಿಸಿದ್ದರು. ಅದು ಎಷ್ಟು ದೊಡ್ಡ ಪರಿಣಾಮ ಬೀರಿತೆಂದರೆ ಪತ್ರಿಕೆಗಳ ಆರೋಗ್ಯದ ಬಗ್ಗೆ ಚಿಂತಿಸಲು ರಚಿಸಲಾದ ಎಡಿಟರ್ಸ್ ಗಿಲ್ಡ್ ಎಂಬ ಸಮಿತಿಯೇ ಪತ್ರಿಕಾ ಕಚೇರಿಗಳ ಈ ರೋಗಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿತ್ತು. ಪ್ರಜಾತಂತ್ರದ ಆರೋಗ್ಯದ ಬಗ್ಗೆ ತೀವ್ರ ನಿಗಾ ಇಟ್ಟು ಆಗಾಗ ಔಷಧ ಕೊಡುತ್ತಾ ಎಚ್ಚರಿಸುತ್ತಿರಬೇಕಾದ ಪತ್ರಿಕೆಗಳೇ ರೋಗಕ್ಕೆ ತುತ್ತಾದರೆ, ಮತ್ತೆ ಮದ್ದು ಕೊಡುವವರಾದರೂ ಯಾರು? ಮೂರೋ, ಐದೋ ರೂಪಾಯಿಯನ್ನು ಕೊಟ್ಟು ಪತ್ರಿಕೆಯೊಂದನ್ನು ಖರೀದಿಸುವ ಓದುಗನೊಬ್ಬನಿಗೆ, ತಾನು ಓದುವ ಸುದ್ದಿ ಸುಳ್ಳು, ಇದು ಪೇಯ್ಡ್ ನ್ಯೂಸ್ ಎಂದು ಗೊತ್ತಾದರೆ ಏನಾದೀತು? ಆಘಾತವಾಗದೇ? ಇಷ್ಟಕ್ಕೂ ಇವತ್ತು ಓದುಗರು ರಾಜಕಾರಣಿಗಿಂತ ಹೆಚ್ಚು ನಂಬುವುದು ಪತ್ರಿಕೆಗಳನ್ನೇ. ಯಾಕೆಂದರೆ ರಾಜಕಾರಣಿಗಳು ಹೇಳುವ ಸುಳ್ಳು ಮತ್ತು ತೋರುವ ಅಪ್ರಾಮಾಣಿಕತೆಯನ್ನು ಎಕ್ಸ್‌ಪೋಸ್ ಮಾಡಿ ಇವೇ ಪತ್ರಿಕೆಗಳು ಓದುಗರನ್ನು ಜಾಗೃತಗೊಳಿಸಿವೆ. ಕೊಲೆಪಾತಕಿ, ಭ್ರಷ್ಟಾಚಾರಿ, ವಚನಭಂಗಿ, ಅತ್ಯಾಚಾರಿ ಮುಂತಾದ ಜನ ಪ್ರತಿನಿಧಿಗಳನ್ನು ವ್ಯಂಗ್ಯ ಚಿತ್ರಗಳಲ್ಲಿ, ಲೇಖನಿಗಳಲ್ಲಿ, ಸಂಪಾದಕೀಯಗಳಲ್ಲಿ ಹಿಗ್ಗಾ ಮುಗ್ಗಾ ಚಿತ್ರಿಸಿ, ಪತ್ರಿಕೆಗಳು ಪುಟ ತುಂಬಿಸಿಕೊಂಡಿವೆ. ಬಹುತೇಕ ಪತ್ರಿಕೆಗಳು ರಾಜಕಾರಣಿಗಳ ಕೈಯಲ್ಲಿ ಇಲ್ಲದಿರುವುದರಿಂದ ಅನೇಕ ಸಂದರ್ಭಗಳಲ್ಲಿ ಪ್ರಾಮಾಣಿಕ ರಾಜಕಾರಣಿಗಳಿಗೂ ಅನ್ಯಾಯ ಆದದ್ದಿದೆ. ಇಷ್ಟಕ್ಕೂ ಸ್ಪಷ್ಟೀಕರಣವನ್ನೇ ತಿರುಚುವ ಸಾಮರ್ಥ್ಯವುಳ್ಳ ಪತ್ರಕರ್ತರು ಧಾರಾಳ ಇರುವಾಗ ಪ್ರಾಮಾಣಿಕ ಸ್ಪಷ್ಟೀಕರಣವೊಂದು ಅದೇ ಧಾಟಿ, ಸ್ವರೂಪದಲ್ಲಿ ಮುದ್ರಣಗೊಳ್ಳುತ್ತದೆಂದು ನಂಬುವುದಾದರೂ ಹೇಗೆ? ದುರಂತ ಏನೆಂದರೆ, ಮಾಧ್ಯಮಗಳ ಹಪಾಹಪಿ, ಅನೈತಿಕತೆ, ದಗಲ್ಬಾಜಿ, ಸುಳ್ಳನ್ನು ಗ್ರಹಿಸಿಕೊಳ್ಳುವುದಕ್ಕೆ ಓದುಗರ ಪಾಲಿಗೆ ಸೂಕ್ತ ವೇದಿಕೆಗಳಿಲ್ಲ ಎಂಬುದು. ಒಂದು ಪತ್ರಿಕೆಯ ಸುದ್ದಿ ಸುಳ್ಳು ಎಂಬುದನ್ನು ಇಲ್ಲವೇ ಲೇಖನದ ವಿಶ್ಲೇಷಣೆಗಳು ಯಾವುದೋ ಪಟ್ಟಭದ್ರರ ಪ್ರಭಾವಕ್ಕೆ ಒಳಗಾದವು ಎಂಬುದನ್ನು ಓದುಗರಿಗೆ ತಿಳಿಸುವುದಕ್ಕೆ ಇನ್ನೊಂದು ಪತ್ರಿಕೆ ಮುಂದಾಗುವುದು ತೀರಾ ಕಮ್ಮಿ. ಎಲ್ಲಿ ತಮ್ಮ ಸಂಬಂಧಕ್ಕೆ ಧಕ್ಕೆಯಾಗುತ್ತದೋ ಎಂಬ ಭೀತಿಯಿಂದ ಪತ್ರಿಕೆಗಳು ಪರಸ್ಪರ ಕಣ್ಣು ಮುಚ್ಚಿ ಓದುಗರನ್ನು ವಂಚಿಸುತ್ತಿರುತ್ತವೆ. ಆದ್ದರಿಂದಲೇ ರಾಜಕಾರಣಿ ತನ್ನ ಸುಳ್ಳಿನ ಸಮೇತ ಇಲ್ಲಿ ಎಕ್ಸ್‌ಪೋಸ್ ಆಗುತ್ತಾನೆ. ಆತನನ್ನು ಹಿಗ್ಗಾಮುಗ್ಗಾ ಎಳೆಯುವುದಕ್ಕೆ ಎಲ್ಲ ಪತ್ರಿಕೆಗಳು ಧಾರಾಳ ಅಕ್ಷರಗಳನ್ನು ಖರ್ಚು ಮಾಡುತ್ತವೆ. ಆದರೆ ರಾಜಕಾರಣಿಯಿಂದ ಇಲ್ಲವೇ ಬಹುರಾಷ್ಟ್ರೀಯ ಕಂಪೆನಿಗಳಿಂದ ಒಂದು ಪತ್ರಿಕೆ ದುಡ್ಡು ಪಡೆದುಕೊಂಡು ಪ್ರಕಟಿಸುವ ಸುದ್ದಿಗಳನ್ನು ಬಹಿರಂಗಪಡಿಸುವುದಕ್ಕೆ, ಇನ್ನೊಂದು ಪತ್ರಿಕೆ ಮುಂದಾಗುವುದೇ ಇಲ್ಲ. ಅಪರೂಪಕ್ಕೆ ಸಾಯಿನಾಥ್‌ರಂಥವರು ಮತ್ತು ದಿ ಹಿಂದೂವಿನಂಥ ವಿರಳ ಪತ್ರಿಕೆಗಳು ಸಂಬಂಧ, ಮುಲಾಜು ಮುಂತಾದ ವೈರಿಗಳನ್ನೆಲ್ಲಾ ಪಕ್ಕಕ್ಕಿಡದೇ ಇರುತ್ತಿದ್ದರೆ, 'ಹಣ ಕೊಟ್ಟು ಸುದ್ದಿ ಬರೆಸುವ' ಅಕ್ಷರೋದ್ಯಮವೂ ಇತರ ಬಹಿರಂಗವಾಗದ ಅನೇಕಾರು ಅಕ್ಷರೋದ್ಯಮಗಳಂತೆ ಸಮಾಧಿಯಾಗುತ್ತಿತ್ತಲ್ಲವೇ?

ನಿಜವಾಗಿ, ರಾಜಕಾರಣಿಗಳನ್ನು ದೂರಲು ಕಲಿಸಿದ್ದೇ ಪತ್ರಿಕೆಗಳು. ಅವುಗಳು ಜನಪ್ರತಿನಿಧಿಗಳ ಮನುಷ್ಯ ವಿರೋಧಿ ನಿಲುವುಗಳನ್ನು ಮತ್ತು ಹೊಟ್ಟೆಬಾಕತನವನ್ನು ಎಕ್ಸ್‌ಪೋಸ್ ಮಾಡಿದುವು. ಖಂಡಿತ ಇದನ್ನು ಹೊಗಳಲೇಬೇಕು. ಆದರೆ ಬರಬರುತ್ತಾ, ಮಾಧ್ಯಮ ಲೋಕ ಔದ್ಯಮೀಕರಣಗೊಳ್ಳತೊಡಗಿತು. ಉದ್ಯಮಿಗಳು ತಮ್ಮ ಹಿತಾಸಕ್ತಿಯನ್ನು ಕಾಪಾಡುವ ಉದ್ದೇಶದಿಂದ ಒಂದೋ ಪತ್ರಿಕೆಯನ್ನು ಇಲ್ಲವೇ ಅಕ್ಷರಗಳನ್ನು ಖರೀದಿಸತೊಡಗಿದರು. ರಾಜಕಾರಣಿಗಳು ಕೂಡ ತಮ್ಮ ಇಮೇಜನ್ನು ಮತ್ತು ಸೈದ್ಧಾಂತಿಕ ನಿಲುವುಗಳನ್ನು ನಾಗರಿಕರ ಮೇಲೆ ಬಿತ್ತುವುದಕ್ಕಾಗಿ ಸಂಪಾದಕರ ಕೊಠಡಿಯನ್ನು ಬಳಸತೊಡಗಿದರು. ಅದಕ್ಕೆ ಪೂರಕವಾಗಿ ಪತ್ರಕರ್ತರ ನೇಮಕ, ಸುದ್ದಿ ವಿಶ್ಲೇಷಣೆ, ವರದಿಗಳು ಕೂಡ ಕ್ರಮೇಣ ಬರತೊಡಗಿದುವು. ಇವತ್ತು ಈ ಅವ್ಯವಹಾರ ಯಾವ ಮಟ್ಟಕ್ಕೆ ಮುಟ್ಟಿದೆಯೆಂದರೆ, ಓದುಗನೊಬ್ಬ ಪ್ರತಿ ಪತ್ರಿಕೆಯನ್ನೂ ಅದು ಇಂಥ ರಾಜಕೀಯ ಪಕ್ಷದ, ಉದ್ಯಮದ ಪರವಾಗಿದೆ ಎಂದು ವರ್ಗೀಕರಿಸುವಷ್ಟು. ಯಾವುದೇ ಒಂದು ಸುದ್ದಿಯನ್ನು ಓದುವ ಮೊದಲು ಅದು ಯಾವ ಪತ್ರಿಕೆಯಲ್ಲಿ ಬಂದಿದೆ ಎಂಬುದನ್ನು ಖಚಿತಪಡಿಸಿಕೊಂಡು, ಅದರ ಸತ್ಯಾಸತ್ಯತೆಯನ್ನು ವಿಶ್ಲೇಷಿಸುವಷ್ಟು ಓದುಗ ವಲಯಗಳಲ್ಲಿ ಪತ್ರಿಕೆಗಳು ವಿಶ್ವಾಸವನ್ನು ಕೆಡಿಸಿಕೊಂಡಿವೆ.

ನಿಜವಾಗಿ ರಾಜಕಾರಣಿಗಳು, ಭ್ರಷ್ಟಾಚಾರಿಗಳು, ದರೋಡೆಕೋರರು ಹೇಗೆ ಮಾಧ್ಯಮಗಳ ಕೈಯನ್ನು ಎಕ್ಸ್‌ಪೋಸ್ ಆಗುತ್ತಾರೋ, ಹಾಗೆಯೇ ಅಕ್ಷರೋದ್ಯಮ ನಡೆಸುವ, ಕೋಮುವಾದಿ ಒಲವಿನ ಮತ್ತು ಪ್ರಚಾರಕ್ಕಾಗಿ ಸುಳ್ಳನ್ನೇ ಪ್ರಸಾರ ಮಾಡುವ ಪತ್ರಿಕೆಗಳು ಕೂಡ ಎಕ್ಸ್‌ಪೋಸ್ ಆಗಬೇಕು. ಅವುಗಳ ಬಣ್ಣವನ್ನು ಓದುಗರ ಮುಂದೆ ಬಹಿರಂಗಪಡಿಸುವುದಕ್ಕೆ ಪ್ರಾಮಾಣಿಕ ಪತ್ರಿಕೆಗಳು ಧೈರ್ಯ ತೋರಬೇಕು. ಇಲ್ಲದಿದ್ದರೆ ಹಾನಿಗೀಡಾದ ನಾಣ್ಯವೊಂದರ ಒಂದು ಭಾಗ ಮಾತ್ರ ಸದಾ ಎಕ್ಸ್‌ಪೋಸ್ ಆಗುತ್ತಾ, ಇನ್ನೊಂದು ಭಾಗ ಯಾರ ಕಣ್ಣಿಗೂ ಬೀಳದೆ ಸುಸ್ಥಿತಿಯಲ್ಲಿರುವಂತೆ ಗೋಚರವಾದೀತು. ಓದುಗರ ಆರೋಗ್ಯದ ದೃಷ್ಟಿಯಿಂದ ಇಂಥದ್ದೊಂದು ವಾತಾವರಣ ನಿರ್ಮಾಣವಾಗುವುದು ತೀರಾ ಅಪಾಯಕಾರಿಯಾದದ್ದು. ಸಮಾಜದ ಇತರೆಲ್ಲ ವಲಯಗಳಲ್ಲಿರುವ ಹಿಪಾಕ್ರಸಿ, ಕೆಡುಕುಗಳು ಸುದ್ದಿಯಾಗುವಂತೆ ಮಾಧ್ಯಮಗಳೊಳಗಿನ ಸಣ್ಣತನ, ಸುಳ್ಳು, ಪ್ರಚಾರದ ಹಪಾಹಪಿ, ಭ್ರಷ್ಟಾಚಾರ ಕೂಡ ಸುದ್ದಿಗೀಡಾಗಲಿ. ಸಮಾಜದ ನಡುವೆ ಸಂಘರ್ಷ ಹುಟ್ಟು ಹಾಕುವ ಮತ್ತು ಕೋಮುವಾದಿ ಒಳಉದ್ದೇಶದೊಂದಿಗೆ ಸೃಷ್ಟಿಯಾಗುವ ಸುದ್ದಿಗಳನ್ನು ಪುರಾವೆ ಸಮೇತ ಬಹಿರಂಗಪಡಿಸುವುದಕ್ಕೆ ಪ್ರಾಮಾಣಿಕ ಪತ್ರಿಕೆಗಳು ಮುಲಾಜು ಬಿಟ್ಟು ಮುಂದಾಗಲಿ. ಸತ್ಯ ಮತ್ತು ಗೆಳೆತನದ ನಡುವೆ ಆಯ್ಕೆಯ ಪ್ರಶ್ನೆ ಬಂದಾಗಲೆಲ್ಲಾ ಸಂಪಾದಕರ ಕೊಠಡಿ ಸತ್ಯವನ್ನೇ ಆಯ್ದುಕೊಳ್ಳಲಿ. ಹಣ ಕೊಟ್ಟು ಪತ್ರಿಕೆ ಖರೀದಿಸುವ ಓದುಗನಿಗೆ ಎಂದೂ ಮೋಸ ಆಗದಿರಲಿ.

ಖುಷಿಯ ಸಂಗತಿ ಏನೆಂದರೆ, ಸನ್ಮಾರ್ಗಕ್ಕೆ 32 ವರ್ಷಗಳು ತುಂಬಿದುವು. ಇದು 33ನೇ ವರ್ಷದ ಪ್ರಥಮ ಹೆಜ್ಜೆ. ಈ ಹೆಜ್ಜೆಯನ್ನು ದೃಢವಾಗಿಸಲು ಮತ್ತು ಹೆಜ್ಜೆ ತಪ್ಪದಂತೆ ನೋಡಿಕೊಳ್ಳಲು ಓದುಗರಾದ ನಿಮ್ಮ ಪ್ರೋತ್ಸಾಹ, ಸಹಕಾರ ಸದಾ ಅಗತ್ಯ. ಸದ್ಯ ಮಾಧ್ಯಮ ಕ್ಷೇತ್ರಕ್ಕೆ ತಟ್ಟಿರುವ ಕಳಂಕ ಮತ್ತು ಬಿಗಡಾಯಿಸಿರುವ ಅದರ ಆರೋಗ್ಯ ಶೀಘ್ರ ಸುಧಾರಿಸಲಿ ಎಂದು ಸನ್ಮಾರ್ಗ ಹಾರೈಸುತ್ತದೆ. ಮೌಲ್ಯಗಳಿಗೆ ತಟ್ಟಿರುವ ಹಾನಿಯನ್ನು ನೀಗಿಸಲು ಸರ್ವ ಮಾಧ್ಯಮ ಮಿತ್ರರೂ ಪ್ರಾಮಾಣಿಕವಾಗಿ ಮುಂದಾಗಲಿ ಎಂದೇ ಈ ಸಂದರ್ಭದಲ್ಲಿ ಸನ್ಮಾರ್ಗ ವಿನಂತಿಸುತ್ತದೆ.

## ವಿ ಚಾ ರ ಮ ಣಿ

ಪೈಗಂಬರರ ಪತ್ನಿಯರೇ, ನೀವು ಸಾಮಾನ್ಯ ಸ್ತ್ರೀಯರಂತಲ್ಲ. ನೀವು ಅಲ್ಲಾಹನನ್ನು ಭಯಪಡುವವರಾಗಿದ್ದರೆ ಮಾನಸಿಕ ಕೇಡಿ ಗೊಳಗಾದ ವ್ಯಕ್ತಿಯು ಪ್ರಲೋಭನಕ್ಕೊಳಗಾಗಿ ಬಿಡುವ ರೀತಿಯಲ್ಲಿ ಮೋಹಕ ದನಿಯಲ್ಲಿ ಮಾತಾಡಬೇಡಿರಿ. ನಿಖರವಾಗಿ ಮಾತಾಡಿರಿ. ನಿಮ್ಮ ಮನೆಗಳಲ್ಲೇ ಇದ್ದುಕೊಳ್ಳಿರಿ. ಗತ ಅಜ್ಞಾನ ಕಾಲದಂತಹ ಸೌಂದರ್ಯ ಪ್ರದರ್ಶನ ಮಾಡುತ್ತ ತಿರುಗಾಡಬೇಡಿರಿ. ನಮಾಝನ್ನು ಸಂಸ್ಥಾಪಿಸಿರಿ, ಝಕಾತ್ ಕೊಡಿರಿ, ಅಲ್ಲಾಹ್ ಮತ್ತು ಅವನ ರಸೂಲನ್ನು ಅನುಸರಿಸಿರಿ. ರಸೂಲರ ಮನೆಯವರಾದ ನಿಮ್ಮಿಂದ ಮಾಲಿನ್ಯವನ್ನು ದೂರೀಕರಿಸಿ ನಿಮ್ಮನ್ನು ಸಂಪೂರ್ಣ ವಾಗಿ ಶುದ್ಧಿಗೊಳಿಸಲು ಅಲ್ಲಾಹ್ ಇಚ್ಛಿಸುತ್ತಾನೆ. ನಿಮ್ಮ ಮನೆಗಳಲ್ಲಿ ಓದಿ ಹೇಳಲಾಗುತ್ತಿರುವ ಅಲ್ಲಾಹನ ಸೂಕ್ತ ಗಳನ್ನೂ ಯುಕ್ತಿಪೂರ್ಣ ಮಾತುಗಳನ್ನೂ ಚೆನ್ನಾಗಿ ನೆನಪಿಡಿರಿ. ನಿಶ್ಚಯವಾಗಿಯೂ ಅಲ್ಲಾಹ್ ಸೂಕ್ಷ್ಮಜ್ಞನೂ ವಿವರಪೂರ್ಣನೂ ಆಗಿರುತ್ತಾನೆ. (ಪವಿತ್ರ ಕುರ್‌ಆನ್: 33:32-34)

ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ




### ಸಮಯೋಚಿತ

ಸಂ. 51ರ 'ಪ್ರವಾದಿ ನಿಂದನೆ ಈಗ ಕನ್ನಡ ಪತ್ರಿಕೆಯಿಂದ' ಎನ್ನುವ ಅರಫಾ ಮಂಚಿಯವರ ಲೇಖನ ಅತ್ಯಂತ ಪ್ರಾಸಂಗಿಕವಾಗಿದೆ. ಪ್ರವಾದಿಯವರನ್ನು(ಸ) ಏಕ ವಚನದಿಂದ ನಿಂದಿಸಿ ಪರ್ದಾದ ಬಗ್ಗೆ ಅವಹೇಳನಕಾರಿ ಶಬ್ದಗಳನ್ನು ಉಪಯೋಗಿಸಿದ ತಸ್ಲೀಮಾರ ಲೇಖನವನ್ನು ಮುಸ್ಲಿಮ್ ಸಮಾಜದವರು ಸಹಿಸಲಾರರು. ಕನ್ನಡ ಪ್ರಭದ ಈ ಲೇಖನದ ಹಿಂದೆ ಯಾರ್‍ಯಾರಿದ್ದಾರೆ? ಯಾಕಾಗಿ ಪ್ರವಾದಿಯವರನ್ನು(ಸ) ಸ್ಮರಿಸುವ ದಿನಗಳಲ್ಲಿ ಅದು ತಸ್ಲೀಮಾಳನ್ನು ಮುಂದಿಟ್ಟುಕೊಂಡು ಈ ನೀಚ ಕೆಲಸಕ್ಕಿಳಿಯಿತು ಎನ್ನುವುದು ತನಿಖೆಯಿಂದ ಮಾತ್ರ ತಿಳಿಯಬಹುದಾಗಿದೆ.

'ಮುಹಮ್ಮದ್(ಸ) ಎಲ್ಲರಿಗಾಗಿ' ವಿವಿಧ ಧರ್ಮಗಳಿಂದ ಅಭಿಯಾನ ಕಾರ್ಯಕ್ರಮ ದೇಶಾದ್ಯಂತ ನಡೆದಿರುವುದು ಮುಸ್ಲಿಮ್ ಧರ್ಮದ ವಿಜಯವನ್ನು ಸೂಚಿಸುತ್ತದೆ. ಹಂಪಿ 'ಭೂ ಹಸ್ತಾಂತರ ತಂದ ಅವಾಂತರ' ಸಲೀಮ್ ಬೋಳಂಗಡಿಯವರ ಲೇಖನದಲ್ಲಿ ಕುಲಪತಿಗಳೂ ಆಗಿರುವ ಹಂಸರಾಜ್ ಭಾರದ್ವಾಜ್‌ರವರು ಮಧ್ಯ ಪ್ರವೇಶಿಸಿರುವುದು ಸ್ವಾಗತಾರ್ಹ ಎಂದಿರುವುದು ರಾಜ್ಯದ ಜನರೆಲ್ಲರ ಅನಿಸಿಕೆ. ಸಂಸ್ಕೃತಿಯ ಹೆಸರಿನಲ್ಲಿ ಕೃಷ್ಣದೇವರಾಯನ ಹೆಸರು ಹೇಳಿ ದಾನಿಗಳಿಂದ ಹಣ ಸಂಗ್ರಹಿಸಿ ಜೇಬಿಗಿಳಿಸುವ ಸರಕಾರದ ಹುನ್ನಾರವನ್ನು ತಡೆದು ರಾಜ್ಯಪಾಲರು ಈ ಟ್ರಸ್ಟ್‌ನವರ ಮೇಲೆ ಸೂಕ್ತ ಕ್ರಮ ಜರುಗಿಸಲಿ. ಶಿಕ್ಷಕರನ್ನು ಬೆದರಿಸುವ ಹಂತಕ್ಕೆ ಬಂದ ಶಿಕ್ಷಣ ಸಚಿವರ ಕ್ರಮವನ್ನು ಖಂಡಿಸಿರುವ ಸಾಹಿತಿಗಳು, ಕುಲಸಚಿವರು ಇವರ ಹೇಳಿಕೆಯನ್ನು ಖಂಡಿಸಿದ ಶಿಕ್ಷಣ ಸಚಿವರ ಮೇಲೆಯೂ ಸಹ ಸೂಕ್ತಕ್ರಮ ಜರುಗಿಸಲಿ.

ಅಬ್ದುಲ್ ವಹ್ಹಾಬ್ ಮುಲ್ಲಾ ಗಂಗಾವತಿ

### ವಿಷಾದ

ಸೀರತ್ ವಿಶೇಷಾಂಕ ಬಂದು ತಲುಪಿತು. ಸಂಪೂರ್ಣವಾಗಿ ಓದಿದೆ. ತುಂಬಾ ವಿಷಾದವೆನಿಸಿತು. ಏಕೆಂದರೆ ವಿಶೇಷಾಂಕದ ಒಳ ಪುಟ ಸಂಖ್ಯೆ 27ರ ಪಕ್ಕದ ಪುಟದಲ್ಲಿ Batca Footware, Nutan Footwareನ ಜಾಹೀರಾತಿನೊಡನೆ ಸ್ಲಿಪ್ಪರ್‌ನ ಭಾವ ಚಿತ್ರವನ್ನು ಮುದ್ರಿಸಿ ಆ ಭಾವ ಚಿತ್ರಗಳ ಮೇಲೆಯೇ ಪವಿತ್ರ ಕುರ್‌ಆನ್‌ನ 29ನೇ ಅಧ್ಯಾಯದ 58ನೇ ಸೂಕ್ತವನ್ನು ಮುದ್ರಿಸಿರುವುದು ಮನಸ್ಸಿಗೆ ತುಂಬಾ ನೋವಾಯಿತು. ಆದ್ದರಿಂದ ಜಾಹೀರಾತನ್ನು ಕಡಿಮೆ ಮಾಡಿ ಮೂಲ ಉದ್ದೇಶದ ಕಡೆಗೆ ಗಮನ ಹರಿಸಬೇಕೆಂದು ತಮ್ಮಲ್ಲಿ ವಿನಮ್ರತೆಯಿಂದ ವಿನಂತಿಸಿಕೊಳ್ಳುತ್ತೇನೆ.

ಬಿ.ಎಚ್. ಹುಮ್ನಾಬಾದ್ ಧಾರಾವಾಡ

### ಪ್ರವಾದಿಯ ನಿಂದನೆ

ಈಗಾಗಲೇ ಬಾಂಗ್ಲಾ ದೇಶ ಮಾತ್ರವಲ್ಲ, ನಮ್ಮ ದೇಶದಲ್ಲಿ ತಸ್ಲೀಮಾ ಮತ್ತು ಅವರ ಲೇಖನವನ್ನು ಬಹಿಷ್ಕರಿಸಲಾಗಿದ್ದು ಎಲ್ಲರಿಗೂ ತಿಳಿದಿರುವ ವಿಚಾರ. ಆದರೂ ಅವರ ಲೇಖನವನ್ನು ಕನ್ನಡ ಪ್ರಭವು ಪ್ರಕಟಿಸಿ ಒಂದು ಸಮುದಾಯದ ಭಾವನೆಯನ್ನು ಘಾಸಿಗೊಳಿಸುವುದರ ಹಿಂದೆ ಯಾರ ಕೈವಾಡವಿದೆ ಎಂದು ಸರಕಾರ ಉನ್ನತ ಮಟ್ಟದ ತನಿಖೆ ನಡೆಸಬೇಕು. ಸಿಂಧುರವರು ಪ್ರವಾದಿಯವರ(ಸ) ಜೀವನ ಚರಿತ್ರೆಯನ್ನು ಒಮ್ಮೆ ಅಧ್ಯಯನ ನಡೆಸುವುದು ಒಳಿತು ಎಂದು ಭಾವಿಸುತ್ತೇನೆ. ಸೀರತ್ ವಿಶೇಷಾಂಕದಲ್ಲಿ ಸಂಜೀವ ಬೋಳಾರರ ಬರಹ ನೋಡಿ ತುಂಬಾ ಸಂತೋಷವಾಯಿತು. ಇದು ನಿರಂತರ ಮುಂದುವರಿಯಲಿ. ಸಂಪಾದಕೀಯ ಉತ್ತಮವಾಗಿತ್ತು.

ಅಬ್ದುಲ್ಲ ಮಡಿಕೇರಿ

### ದಿಟ್ಟಹೆಜ್ಜೆ

ನಾನು ಸನ್ಮಾರ್ಗ ಪತ್ರಿಕೆಯನ್ನು ಆರಂಭದಿಂದಲೇ ಓದುತ್ತಿದ್ದೇನೆ. ಸನ್ಮಾರ್ಗವು ನನ್ನನ್ನು ಬಹಳಷ್ಟು ಪ್ರಭಾವಿತಗೊಳಿಸಿದೆ. ನನಗೆ ವಿದ್ಯಾಭ್ಯಾಸ ಕಮ್ಮಿಯಾಗಿದ್ದರೂ ಸನ್ಮಾರ್ಗ ಓದುವುದರಿಂದ ನಾನು ಬಹಳಷ್ಟು ಜ್ಞಾನವನ್ನು ಪಡೆದಿದ್ದೇನೆ.

ಇಂದಿನ ಯುವಕರನ್ನು ನೋಡಿದರೆ ಖೇದವಾಗುತ್ತದೆ. ಅವರು ನಡೆ-ನುಡಿ, ವ್ಯವಹಾರ, ವಂಚನೆ, ಮೋಸ, ದಗಲ್ಬಾಜಿ, ವೇಷ-ಭೂಷಣ ಎಲ್ಲವನ್ನು ಪಾಶ್ಚಾತ್ಯೀಕರಿಸಿಬಿಟ್ಟಿದ್ದಾರೆ. ಅವರ ಹಠಮಾರಿತನವೇ ಸಮಾಜಕ್ಕೆ ಕಂಟಕವಾಗುತ್ತಿದೆ. ಪ್ರವಾದಿಯ ನಿಂದನೆಯಾದಾಗ ಆವೇಶಕ್ಕೊಳಗಾಗಿ ಏನೂ ಮಾಡಲೂ ಹೇಸದವರಿಗೆ ಪ್ರವಾದಿಯವರು ತೋರಿದ ಆದರ್ಶವನ್ನು ತನ್ನ ಜೀವನದಲ್ಲಿ ಅಳವಡಿಸಲು ಸಾಧ್ಯವಾಗುವುದಿಲ್ಲ. ಪತ್ರಿಕೆಯೊಂದು ಇತ್ತೀಚೆಗೆ ಪ್ರವಾದಿ ನಿಂದನೆ ಮಾಡಿದ್ದು ನಿಜಕ್ಕೂ ಖಂಡನಾರ್ಹವೇ. ಅದನ್ನು ಕಾನೂನಿನ ಮೂಲಕ ಪ್ರಶ್ನಿಸಲೇ ಬೇಕು. ಆದರೆ ಮುಸ್ಲಿಮರು ಮಾಡಿದಂತಹ ಕೃತ್ಯ ಅದಕ್ಕಿಂತಲೂ ಖಂಡನೀಯ. ಯಾಕೆಂದರೆ ಅದು ಪ್ರವಾದಿಯವರ ಶಿಕ್ಷಣಕ್ಕೆ ತೀರಾ ವಿರುದ್ಧವಾದುದಾಗಿತ್ತು. ಪ್ರವಾದಿಯವರು(ಸ) ದಾರಿಯಲ್ಲಿರುವ ಉಪದ್ರವಗಳನ್ನು ನೀಗಿಸುವುದನ್ನು ಕೂಡಾ ಪುಣ್ಯವೆಂದು ಹೇಳಿದ್ದಾರೆ. ಅವರು ಶತ್ರುಗಳನ್ನು ಪ್ರೀತಿಸುತ್ತಿದ್ದರು. ಅವರು ಯುದ್ಧದ ಸಂದರ್ಭದಲ್ಲಿ ನೀವು ಮಕ್ಕಳನ್ನು ಕೊಲ್ಲಬಾರದು, ಮಹಿಳೆಯರಿಗೆ ಹೊಡೆಯಬಾರದು, ಪ್ರಾಣಿಗಳಿಗೆ ಉಪದ್ರವಿಸಬಾರದು, ಸಸ್ಯಗಳನ್ನು ನಾಶ ಮಾಡಬಾರದು ಎಂಬ ಆಜ್ಞೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ಪ್ರವಾದಿಯವರ(ಸ) ಬೋಧನೆಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಇತರರಿಗೆ ಮಾದರಿಯಾಗಲು ನಾವು ಪ್ರಯತ್ನಿಸಬೇಕು.

ಪಿ.ಜೆ. ಅಬ್ದುಲ್ ಕಾದರ್ ಪಾಣೆಮಂಗಳೂರು

**ಸನ್ಮಾರ್ಗ ಚಂದಾ ದರ**

| | | |
|---|---|---|
| ವಾರ್ಷಿಕ | ರೂ. | 390.00 |
| ಅರ್ಧವಾರ್ಷಿಕ | ರೂ. | 195.00 |
| ಗಲ್ಫ್ ರಾಷ್ಟ್ರಗಳಲ್ಲಿ | | |
| ವಾರ್ಷಿಕ | ರೂ. | 1,200.00 |
| ಅರ್ಧವಾರ್ಷಿಕ | ರೂ. | 650.00 |




ದಿ ಲಾಸ್ಟ್ ಲೆಕ್ಚರ್

# ಇಷ್ಟಕ್ಕೂ ಜೀವಕ್ಕಿಂತ ಉಗುರು, ಕೂದಲು ಮುಖ್ಯನಾ?

ಏ.ಕೆ. ಕುಕ್ಕಿಲ

(ಮುಖಪುಟದಿಂದ)

ಮಾಹಿತಿಗಾಗಿ ಸಿಕ್ಕಸಿಕ್ಕಲ್ಲಿ ಹುಡುಕಾಡಿದೆ. 'ಯೆಲ್ಲೋ ಬೋನ್'ಗೆ (ಎಲುಬಿನ ಕ್ಯಾನ್ಸರ್) ತುತ್ತಾದವರು, ಅದರಿಂದ ಪಾರಾಗಿ ಬಂದವರು, ನರಳಿ ನರಳಿ ಕನಸುಗಳ ಸಮೇತ ಸಮಾಧಿಯಾದವರ ಪಟ್ಟಿಗಳು...

ಒಂದು ದಿನ ನನ್ನಿಂದ ಹಳದಿ ಸ್ರಾವ ವಾಗತೊಡಗಿತು.

ಮಲ್ಟಿಪಲ್ ಮೆಲೋಮಾ ಚಿಕಿತ್ಸೆಗೆ ನಾನು ಒಳಗಾದ ಮೇಲೆ ನನ್ನ ದಿನಚರಿಯನ್ನೇ ಬದಲಿಸಿದೆ. ಮುಖದ ಕಾಂತಿಗೆ, ತುಟಿಗೆ, ಉಗುರಿಗೆ, ಕಣ್ಣ ರೆಪ್ಪೆಗೆ, ಕೂದಲಿಗೆ, ದೇಹಕ್ಕೆ ಎಷ್ಟೆಲ್ಲಾ ಗಮನ ಕೊಡುತ್ತಿದ್ದೆನೋ, ಅವನ್ನೆಲ್ಲಾ ಇವತ್ತು ಕ್ಯಾನ್ಸರಿನಿಂದ ಬಚಾವಾಗುವುದಕ್ಕಾಗಿ ಮೀಸಲಿಟ್ಟೆ. ಇಷ್ಟಕ್ಕೂ ಬದುಕುವುದೇ ಗ್ಯಾರಂಟಿ ಇಲ್ಲದಿರುವಾಗ, ತುಟಿ ಅಂದವಾಗಿ ಇದ್ದರೇನು ಬಿಟ್ಟರೇನು? ಕೂದಲನ್ನು ಗಾಳಿಯಲ್ಲಿ ಹಾರಾಡಿಸಬೇಕೆಂದರೆ ಮೊದಲು ಜೀವಂತವಾಗಿ ಇರಬೇಕಲ್ಲವೇ? ದೇಹ ಸಣ್ಣಗೆ ಬಳುಕುವುದು ಆರೋಗ್ಯ ಇದ್ದಾಗ ತಾನೇ? ಸೌಂದರ್ಯ ಎಂಬ ಅತಿ ವೈಯಕ್ತಿಕ ಮತ್ತು ಬಹುಬೇಡಿಕೆಯ ಸಂಗತಿ ನನ್ನನ್ನು ಹೊಸ ಮಜಲಿನಲ್ಲಿ ತಾಕಿತು..."

ಹಾಗಂತ ಲಿಸಾರೇ ಅಕ್ಟೋಬರ್ 12ರಂದು ಬರೆಯುತ್ತಾ ಹೋಗುತ್ತಾರೆ. ಹಿಂದಿ ಮತ್ತು ಕನ್ನಡ ಸಿನಿಮಾಗಳಲ್ಲಿ ನಟಿಸುತ್ತಾ ಸುದ್ದಿಯಲ್ಲಿದ್ದಾಗಲೇ ಎರಡು ವರ್ಷಗಳ ಹಿಂದೆ ಆಕೆ ಎಲುಬಿನ ಕ್ಯಾನ್ಸರಿಗೆ ತುತ್ತಾದಳು. ದಿನದ 24 ಗಂಟೆಗಳಲ್ಲಿ ಹೆಚ್ಚಿನ ಅವಧಿಯನ್ನು ಕನ್ನಡಿ, ಕ್ಯಾಮರಾಗಳ ಮುಂದೆ ನಿಂತು ಕಳೆಯುತ್ತಿದ್ದ ಆಕೆ ಕ್ಯಾನ್ಸರಿಗೆ ತುತ್ತಾದ ಬಳಿಕ ಸೌಂದರ್ಯದ ನಶ್ವರತೆಯ ಬಗ್ಗೆ ತನ್ನ 'ಯೆಲ್ಲೋ ಡಯರೀಸ್' ಎಂಬ ಬ್ಲಾಗಿನಲ್ಲಿ ಧಾರಾಳ ಬರೆಯುತ್ತಾಳೆ. ಒಂದು ಕಾಲದಲ್ಲಿ ಸೌಂದರ್ಯ ಉಳಿಸಿಕೊಳ್ಳುವುದಕ್ಕಾಗಿ ಹೆಣಗಾಡುತ್ತಿದ್ದ ಹುಡುಗಿ, ಇದೀಗ ದೇಹ ಉಳಿಸಿಕೊಳ್ಳುವುದಕ್ಕಾಗಿ ಸೌಂದರ್ಯ ಸಹಿತ ಎಲ್ಲವನ್ನೂ ಕಡೆಗಣಿಸಲು ಸಿದ್ಧವಾಗುತ್ತಾಳೆ. ಉದುರಿಕೊಳ್ಳುವುದು, ತೂಕ ಕಳಕೊಳ್ಳುವುದು, ತಲೆ ಬೋಳಾಗುವುದು... ಮುಂತಾದುವುಗಳನ್ನೆಲ್ಲಾ ಆಕೆ ಎಷ್ಟು ಸಲೀಸಾಗಿ ಸ್ವೀಕರಿಸುತ್ತಾಳೆಂದರೆ, ಸೌಂದರ್ಯ ಒಂದು ಹಂತದ ವರೆಗೆ ಮಾತ್ರ ಅಗತ್ಯ ಎಂದೇ ತೀರ್ಮಾನಿಸುತ್ತಾಳೆ.

"ವೈದ್ಯರು ಹೇಳಿದ್ರು,

ಲಿಸಾ, ನೀನೊಂದು ಹುಲ್ಲುಗಾವಲು. ಆದರೆ ಆ ಹುಲ್ಲುಗಾವಲಿನ ತುಂಬಾ ಕಸಕಡ್ಡಿಗಳಿವೆ. ಅದನ್ನು ನಿವಾರಿಸಬೇಕೆಂದರೆ ಕೀಮೋಥೆರಪಿ ಚಿಕಿತ್ಸೆಗೆ ಒಳಗಾಗಲೇ ಬೇಕು. ಇಷ್ಟಕ್ಕೂ ಕೀಮೋಥೆರಪಿಗೆ ಗುರಿಯಾಗುವುದು, ದೇಹವನ್ನು ಅದಕ್ಕೊಪ್ಪಿಸಿ ಫಲಿತಾಂಶಕ್ಕಾಗಿ ಕಾಯುವುದು ಎಂಥ ಭೀಕರ ಅನುಭವ ಗೊತ್ತಾ? ಆದರೆ ನಾನು ಕಾಯಲೇಬೇಕಿತ್ತು. ಯಾಕೆಂದರೆ, ಬದುಕಬೇಕಲ್ಲವೇ? ಒಂದು ದಿನ, ನಾನು ಆ ವರೆಗೂ ಬಹಳ ಪ್ರೀತಿ, ಕಾಳಜಿಯಿಂದ ಪೋಷಿಸಿಕೊಂಡು ಬಂದ ಕೂದಲು ಉದುರತೊಡಗಿತು. ಉದುರುತ್ತಿರುವ ಪ್ರತಿಯೊಂದು ಕೂದಲೂ, ನನ್ನ ಸೌಂದರ್ಯದ ಇತಿ-ಮಿತಿ ಮತ್ತು ನಶ್ವರತೆಯನ್ನು ಹೇಳುತ್ತಿತ್ತು. ಇಷ್ಟಕ್ಕೂ ಓರ್ವ ನಟಿಯ ತಲೆ ಬೋಳಾಗುವುದೇ? ಈ ಕೂದಲಿನಿಂದಲೇ ನಾನು ಎಷ್ಟು ಮಂದಿಯನ್ನು ಮರುಳುಗೊಳಿಸಿಲ್ಲ? ಎಷ್ಟು ಬಾರಿ ಹಾರಾಡಿಸಿಲ್ಲ? ಎಷ್ಟು ಕಾಸ್ಮೆಟಿಕ್ಸ್‌ಗಳನ್ನು ಕೇವಲ ಕೂದಲಿಗಾಗಿಯೇ ಖರ್ಚು ಮಾಡಿಲ್ಲ?

ನಮ್ಮ 'ಕ್ಯಾನ್ಸರ್ ಕ್ಲಬ್ಬಿ'ನಲ್ಲಿ ಸಿಂಧಿ ಎಂಬ ಭಾರತೀಯ ಯುವತಿಯೊಬ್ಬಳಿದ್ದಳು. ಆಕೆಗೆ ಎಷ್ಟು ಸುಂದರ ಕೂದಲಿತ್ತು ಗೊತ್ತೇ? ಆಕೆ ಅದನ್ನು ಹಾರಾಡಿಸುತ್ತಿದ್ದಳು. ಆಕೆಗೆ ಅದರ ಬಗ್ಗೆ ಎಷ್ಟು ಹೆಮ್ಮೆಯಿತ್ತೆಂದರೆ, ಎಲ್ಲರೂ ಅದನ್ನು ನೋಡಬೇಕೆಂದು ಆಸೆ ಪಡುತ್ತಿದ್ದಳು. ಆದರೆ ಒಂದು ದಿನ ಆಕೆ ಬೋಳಾದಳು. ಉರುಟಾದ, ಕಪ್ಪು ಕಪ್ಪಾದ ಆ ಕೂದಲುಗಳು ಉದುರಿ ಬೀಳತೊಡಗಿದುವು.

ನಿಮಗೂ ಗೊತ್ತಿದೆ, ಮಹಿಳೆಯರು ಸೌಂದರ್ಯಕ್ಕೆ ಎಷ್ಟು ಮಹತ್ವ ಕೊಡುತ್ತಾರೆಂದು. ನೆತ್ತಿಯಲ್ಲಿ ಸಣ್ಣದೊಂದು ಬಿಳಿ ಕೂದಲು ಕಾಣಿಸಿದರೆ, ಲೈಫೇ ಹೋಯ್ತೆಂದು ತಲೆಗೆ ಕೈಯಿಡುವವರು ಎಷ್ಟಿಲ್ಲ ಹೇಳಿ? ಅಂಥಾದ್ದರಲ್ಲಿ ಸೌಂದರ್ಯದ ಒಂದೊಂದೇ ಅಂಗಗಳು ನಿಧಾನವಾಗಿ ಬಣ್ಣ ಹಿಂಜುತ್ತಾ ಹೋಗುವುದನ್ನು ಹೇಗೆ ಸಹಿಸಿಕೊಳ್ಳುವುದು? ನಿಜವಾಗಿ ಹೆಣ್ಣು ಮಕ್ಕಳಿಗೆ ಸೂಜಿ ಅಂದರೇನೇ ಭಯ. ಹೀಗಿರುವಾಗ ನವೆಂಬರ್ 26, 2009ರಂದು ನಿಯೋಪೋಗ್ನ್ ಇಂಜಕ್ಷನನ್ನು ಚುಚ್ಚಿಸಿಕೊಳ್ಳಲು ದೇಹ ಒಡ್ಡುವಾಗ, ನನ್ನ ಸ್ಥಿತಿ ಹೇಗಿದ್ದೀತು? ಪ್ರತಿನಿತ್ಯ ನರ್ಸ್ ಒಬ್ಬಳು ಮನೆಗೆ ಬಂದು ಸೂಜಿ ಚುಚ್ಚುವುದನ್ನು ಹೇಗೆ ಸಹಿಸಿಕೊಳ್ಳೋದು? ಇಷ್ಟಕ್ಕೂ ಎಲುಬಿನ ಕ್ಯಾನ್ಸರ್ ಎಂದರೇನು? ಅದು ಹೇಗಿರುತ್ತೇ? ಅದಕ್ಕೆ ತುತ್ತಾದವರು ಸತ್ತೇ ಹೋಗುತ್ತಾರಾ? ನನ್ನ ಈ ಸಣ್ಣ ವಯಸ್ಸಿನಲ್ಲೇ ನಾನು ಕ್ಯಾಮರಾ, ಕನ್ನಡಿ, ಅಭಿಮಾನಿಗಳು ಸಹಿತ ಎಲ್ಲವನ್ನೂ ಬಿಟ್ಟು ಒಂಟಿಯಾಗಿ ಹೋಗಬೇಕಾ? ಅಬ್ಬಾ! ಬಗ್ಗುವುದಕ್ಕಾಗುತ್ತಿಲ್ಲ. ಎಲುಬಲ್ಲಿ ಎಂಥದ್ದೋ ಚಳಕು, ನೋವು. ಇದೇ ಯೆಲ್ಲೋ ಬೋನಾ?"

ಕೆನಡಾ ಮೂಲದ ಲಿಸಾರೇಗೆ ಎಲುಬಿನ ಕ್ಯಾನ್ಸರ್ ಎಂದು ಗೊತ್ತಾದ ಕೂಡಲೇ ಅಸಂಖ್ಯ ಅಭಿಮಾನಿಗಳು ಇಂಟರ್‌ನೆಟ್ಟಲ್ಲಿ ಸಹಾನುಭೂತಿ ವ್ಯಕ್ತಪಡಿಸುತ್ತಾರೆ. ತನ್ನ ರೋಗದ ಕುರಿತು ಹೇಳಿಕೊಳ್ಳುವುದಕ್ಕಾಗಿಯೇ ಆಕೆ ಸ್ಥಾಪಿಸಿದ 'ಯೆಲ್ಲೋ ಡಯರೀಸ್' ಬ್ಲಾಗ್ ಎಷ್ಟು ಜನಪ್ರಿಯ ಆಗುತ್ತದೆಂದರೆ, ಅದರಲ್ಲಿ 353ರಷ್ಟು ಲೇಖನಗಳನ್ನು ಆಕೆ ಬರೆಯುತ್ತಾಳೆ. ಸೆಲೆಬ್ರಿಟಿಯೊಬ್ಬಳ ಆಲೋಚನೆ, ಸಾವು ಎದುರಾದಾಗ ಉಂಟಾಗುವ ತಳಮಳ, ಸೌಂದರ್ಯಕ್ಕೆ ಆಕೆ ಕೊಡುವ ವ್ಯಾಖ್ಯಾನ ಎಲ್ಲವೂ 'ಯೆಲ್ಲೋ ಡಯರೀಸ್'ನಲ್ಲಿದೆ. ಆ ಲೇಖನಗಳನ್ನು ಓದುವುದೆಂದರೆ, ಬದುಕಿನ ನಶ್ವರತೆಗೊಂದು ವ್ಯಾಖ್ಯಾನ ಕೊಟ್ಟಂತೆ. ಇಷ್ಟಕ್ಕೂ ಸೌಂದರ್ಯವನ್ನೇ ಬಂಡವಾಳ ಮಾಡಿಕೊಂಡು ಬದುಕುವ ಹೆಣ್ಣು ಮಕ್ಕಳು ಎಷ್ಟಿಲ್ಲ ಹೇಳಿ? ಪ್ರಸಾದನ ಸಾಮಗ್ರಿಗಳಿಗಾಗಿ ಲಕ್ಷಾಂತರ ಖರ್ಚು ಮಾಡುವವರು ನಮ್ಮಲ್ಲಿಲ್ಲವೇ? ನೆತ್ತಿಯಲ್ಲಿ ಸಣ್ಣದೊಂದು ನೆರಿಗೆ ಕಾಣಿಸಿಕೊಂಡರೂ ಹೌಹಾರಿ, ಬ್ಯೂಟಿ ಪಾರ್ಲರ್‌ಗೆ ಧಾವಿಸಿಯೋ ಸರ್ಜರಿ ಮಾಡಿಸಿಕೊಂಡೋ 'ಯುವತಿ' ಯರಾಗುವವರು ಧಾರಾಳ ಇಲ್ಲವೇ?

"ನನ್ನಪ್ಪನಿಗೆ ನನ್ನನ್ನು ಉಳಿಸಿಕೊಳ್ಳಲೇಬೇಕಿತ್ತು. ಅದಕ್ಕಾಗಿ ಮಲ್ಟಿಪಲ್ ಮೆಲೋಮಾದ ಬಗ್ಗೆ ಕಂಪ್ಯೂಟರ್ ಹರಡಿಕೊಂಡು ಮಾಹಿತಿಗಾಗಿ ಜಾಲಾಡುತ್ತಿದ್ದ. ಭೂಮಿಯ ಯಾವ ಮೂಲೆಯಲ್ಲಾದರೂ ನನ್ನ ಮಗುವನ್ನು ಉಳಿಸಿಕೊಳ್ಳುವ ಔಷಧಿ ಇದೆಯಾ ಎಂದು ತಡಕಾಡುತ್ತಿದ್ದ. ಈ ನಡುವೆ ನನ್ನ ಸ್ಟೆಮ್‌ಸೆಲ್ ವರ್ಗಾವಣಾ ಚಿಕಿತ್ಸೆ ಡಿಸೆಂಬರ್ 21, 2009ಕ್ಕೆಂದು ನಿಗದಿಯಾಯಿತು. ನಾನು ಈ ಬಗ್ಗೆ ವಿವರಿಸಬಹುದಾದ ಪುಸ್ತಕಕ್ಕಾಗಿ ಹುಡುಕಾಡಿದೆ. ಯಾಕೆ ಗೊತ್ತೇ? ಕಳೆದ ವಾರ ನಾನೆದುರಿಸಿದ ಪಲ್‌ಮೊನರಿ ಫಂಕ್ಷನ್ ಪರೀಕ್ಷೆಯೇ ನನ್ನನ್ನು ಕಂಗಾಲುಗೊಳಿಸಿತ್ತು. ಇನ್ನು, ಸ್ಟೆಮ್‌ಸೆಲ್ ಹೇಗೋ? ಅದರ ನೋವು ಯಾವ ಸ್ವರೂಪದ್ದೋ? ಇಷ್ಟಕ್ಕೂ ಕಳೆದುಕೊಳ್ಳುವುದಕ್ಕೆಂದು ನನ್ನ ದೇಹದಲ್ಲಿ ಇನ್ನು ಉಳಿದಿರುವುದಾದರೂ ಏನು? ಸ್ಟೆಮ್‌ಸೆಲ್ ಚಿಕಿತ್ಸೆಗೆ ಒಳಗಾದ ಅಬ್ರಿಯನ್ನು ಡಿ. 13ರಂದು ಭೇಟಿಯಾದೆ. ನನಗೀಗ ಸೌಂದರ್ಯ ಗೀಳು, ಕ್ಯಾಮರಾದ ಮುಂದೆ ಬಳುಕುವ ಆಸೆ ಯಾವುದೂ ಇಲ್ಲ. ನಾನು 'ಲುಕ್ ಗುಡ್, ಫೀಲ್ ಬೆಟರ್' ಎಂಬ ಸಂಸ್ಥೆಯೊಂದಿಗೆ ಎರಡು ಗಂಟೆ ಮಾತಾಡಿದೆ. ತಲೆ ಬೋಳಾಗಿತ್ತಲ್ಲವೇ! ಅವರು ಸಮಾಧಾನಿಸಿದರು. ಮಂಗೋಲಿಯನ್ನರು ಕೂದಲಿಲ್ಲದೆಯೂ ಚೆನ್ನಾಗಿ ಕಾಣುತ್ತಾರಲ್ಲವೇ? ಇಷ್ಟಕ್ಕೂ ಅವರು ವಿಗ್ಗೂ ಧರಿಸುವುದಿಲ್ಲ. ಸಮಾಧಾನಿಸಿಕೊಂಡೆ.

ಪುನರಾವರ್ತನೆಯಂತೆ ಕಂಡರೂ ಒಂದು ಸಂಗತಿಯನ್ನು ಹೇಳಲೇಬೇಕು.

ಎಲುಬಿನ ಕ್ಯಾನ್ಸರ್ ನನ್ನ ನೋಟದ, ಸೌಂದರ್ಯದ ಕಲ್ಪನೆಯನ್ನೇ ಬದಲಿಸಿಬಿಟ್ಟಿತು. ಮನಸು ಆಗಾಗ ತುಂಬಿ ಬರುತ್ತಿತ್ತು. ಆದ್ದರಿಂದಲೇ ನಾನು ನಗಬೇಕಿತ್ತು. ನಗದಿದ್ದರೆ ನೋವು ಇಮ್ಮಡಿಯಾಗುತ್ತದಲ್ಲವೇ? ನಿಮಗೆ ಗೊತ್ತೇ, ಕ್ಯಾಮರಾದ ಮುಂದೆ ನಾಟಕೀಯವಾಗಿ ನಗಲೂ ಅಳಲೂ ಗೊತ್ತಿರುವ ನಾನು, ನಿಜ ಜೀವನದ ನೋವನ್ನು ಮರೆತು ಬಿಡುವುದಕ್ಕಾಗಿ ನಗಲು ಬಯಸಿದರೂ ಅಳು ಬರುತ್ತಿತ್ತು. ನಾನು ಗೆಳೆಯರಿಗೆ ಫೋನ್ ಮಾಡಿದೆ. ನಕ್ಕೆ, ಭೇಟಿಯಾದೆ. ಮನಸ್ಸು ಹಗುರ ಮಾಡಿಕೊಂಡೆ. ಒಂಟಿಯಾಗಿ ಕೂತು ಸಾವಿನ ಬಗ್ಗೆ ಆಲೋಚಿಸುವುದು ಎಷ್ಟು ಹಿಂಸೆ ಗೊತ್ತಾ? ಅದಕ್ಕಿಂತ ದೊಡ್ಡ ದಣಿವು ಬೇರೆ ಯಾವುದಿದ್ದೀತು? ರೋಗ ನಿರೋಧಕ ಚುಚ್ಚು ಮದ್ದು ನನ್ನ ದೇಹದ ಮೇಲೆ ಮಾಡಿದ ಅಡ್ಡ ಪರಿಣಾಮದ ಫಲಿತಾಂಶವನ್ನು ನೋಡುತ್ತಾ ಕೊರಗುವುದಕ್ಕಿಂತ, ಚಟುವಟಿಕೆಯಿಂದಿರುವುದು ಉತ್ತಮವಲ್ಲವೇ? ನಾನು ಆಡಬೇಕಿತ್ತು. ಆಡಿದೆ. ಆ ಸಮಯದಲ್ಲಾದರೂ ನನ್ನ ಗಮನ ಎಲುಬಿನಿಂದ ದೂರ ಇರುತ್ತದಲ್ಲ?"

ಹೀಗೆ ಬರೆಯುತ್ತಾ ಹೋಗುತ್ತಾರೆ ಲಿಸಾ. ವಿಶೇಷ ಏನೆಂದರೆ, ಜನವರಿ 11, 2009ರಂದು ಆಕೆ, 'ತಾನು ಕ್ಯಾನ್ಸರಿನಿಂದ ಹೊರಬಂದೆ' ಎಂದು ಘೋಷಿಸುತ್ತಾಳೆ. ದುಬಾರಿ ಔಷಧವನ್ನು ಖರೀದಿಸುವ ಸಾಮರ್ಥ್ಯ, ಸೆಲೆಬ್ರಿಟಿ ಎಂಬ ನೆಲೆಯಲ್ಲಿ ಜಗತ್ತಿನ ಮೂಲೆ ಮೂಲೆಯಿಂದ ಸಿಕ್ಕ ಬೆಂಬಲ, ಪತ್ರಗಳು ಆಕೆಗೆ ಮಾನಸಿಕವಾಗಿ ಧೈರ್ಯ ಕೊಟ್ಟಿರಬಹುದು. ಆದರೆ ಲಿಸಾರಂಥ ಶ್ರೀಮಂತ ಅಪ್ಪ ಎಷ್ಟು ಮಂದಿ ಕ್ಯಾನ್ಸರ್ ಪೀಡಿತರಿಗಿದೆ? ಆದರೂ ಸೌಂದರ್ಯ ಮತ್ತು ಸಾವಿಗೆ ಲಿಸಾ ಹೊಸ ವ್ಯಾಖ್ಯಾನ ಕೊಟ್ಟರಲ್ಲವೇ? ಅದು ಮತ್ತೆ ಮತ್ತೆ ಮೆಲುಕುವಂಥದ್ದು.

ಇಷ್ಟಕ್ಕೂ ಅಮೇರಿಕದ ರ್‍ಯಾಂಡಿ ಪಾಶ್‌ನ ಬಗ್ಗೆ ನಿಮಗೆ ಹೇಳಲೇಬೇಕು.

ಕೇವಲ 47ನೇ ವಯಸ್ಸಿನಲ್ಲಿ ಪ್ಯಾಂಕ್ರಿಯಾಟಿಕ್ ಕ್ಯಾನ್ಸರ್‌ನಿಂದ 2008ರಲ್ಲಿ ಸಾವಿಗೀಡಾದ ಈ ರ್‍ಯಾಂಡಿ, ಜಗತ್ತಿನಲ್ಲಿಡೀ ಸುದ್ದಿಯಾದವ. ಆ ಸಣ್ಣ ವಯಸ್ಸಿನೊಂದಿಗೆ ಪಿಹೆಚ್‌ಡಿ ಮಾಡಿ, ಡಾಕ್ಟರೇಟು ಪಡೆದು ನಂತರ ಗಗನ ಯಾತ್ರಿಯಾದ. ಆ ಬಳಿಕ ವಿಜ್ಞಾನಿ ಎನಿಸಿಕೊಂಡ. ನಂತರ ಐಪಿಎಸ್ ಅಧಿಕಾರಿಯಾಗಿ, ಕೊನೆಗೆ ಉಪನ್ಯಾಸಕನಾದ. ಹೋದದಲ್ಲೆಲ್ಲಾ ಅಪಾರ ಯಶಸ್ಸು, ಕೀರ್ತಿ ಗಿಟ್ಟಿಸಿಕೊಂಡ. ಕೊನೆಗೊಂದು ದಿನ, 'ನೀನು ಮೂರರಿಂದ 6 ತಿಂಗಳು ಮಾತ್ರ ಬದುಕುವೆ' ಎಂದು ವೈದ್ಯರು ಹೇಳಿದಾಗ, ಆತ ಕೊನೆಯದಾಗಿ ತನ್ನ ಕಾರ್ನಿಗಿ ಮೆಲನ್ ವಿಶ್ವವಿದ್ಯಾಲಯದಲ್ಲಿ ಒಂದು ಉಪನ್ಯಾಸ ಕೊಡುತ್ತಾನೆ. The last lecture ಎಂಬ ಹೆಸರಲ್ಲಿ ಆ ಉಪನ್ಯಾಸ ಎಷ್ಟು ಪ್ರಸಿದ್ಧ ಆಗುತ್ತದೆಂದರೆ ಇವತ್ತು ಒಂದು ಕೋಟಿಗಿಂತ ಅಧಿಕ ಮಂದಿ ಅದನ್ನು ವೀಕ್ಷಿಸಿದ್ದಾರೆ. ಪುಸ್ತಕದ 35 ಲಕ್ಷ ಪ್ರತಿಗಳು ಈಗಾಗಲೇ ಖರ್ಚಾಗಿವೆ. ಸವಾಲುಗಳನ್ನು ಎದುರಿಸುವುದೇ ಬದುಕು ಅನ್ನುತ್ತಿದ್ದ ರ್‍ಯಾಂಡಿ, 'ತಾನಿನ್ನು ಮೂರೇ ತಿಂಗಳು' ಎಂದು ಖಚಿತವಾದ ಮೇಲೆ ಪಡುವ ವೇದನೆ, ಸಂಕಟ, ಆತಂಕ ಕಣ್ಣು ಒದ್ದೆ ಮಾಡುವಂಥದ್ದು. 'ದಿ ಲಾಸ್ಟ್ ಲೆಕ್ಚರ್' ಕೃತಿಯಲ್ಲಿ ಆತ ಒಂದು ಕಡೆ ಹೀಗೆ ಹೇಳಿಕೊಳ್ಳುತ್ತಾನೆ-

"ಎಷ್ಟೋ ದಿನಗಳು ನಾನು ಮತ್ತು ಪತ್ನಿ ಜೈ ಒಟ್ಟಾಗಿ ಕೂತು ಬಿಕ್ಕಿ ಬಿಕ್ಕಿ ಅಳುತ್ತಿದ್ದೆವು. ಒಬ್ಬರನ್ನೊಬ್ಬರು ಸಮಾಧಾನ ಪಡಿಸುತ್ತಿದ್ದೆವು. ಹಾಗೆಯೇ ಹಾಸಿಗೆಗೆ ಒರಗಿ ನಿದ್ದೆ ಹೋಗುತ್ತಿದ್ದೆವು. ಸ್ವಲ್ಪ ಸಮಯದ ನಂತರ ಎದ್ದು ಮತ್ತೆ ಅಳಲಾರಂಭಿಸುತ್ತಿದ್ದೆವು. ನಮ್ಮ ನೋವು, ದುಃಖ, ದುಗುಡ, ದುಮ್ಮಾನಗಳು ಎಷ್ಟೇ ಇದ್ದರೂ ನಾವು ರಾತ್ರಿ ನಿದ್ರೆ ಮಾಡಲೇಬೇಕಿತ್ತು. ಯಾಕೆಂದರೆ ಮರುದಿನ ಬೆಳಿಗ್ಗೆ ಬೇಗ ಎದ್ದು ಮಕ್ಕಳ ತಿಂಡಿ, ಊಟದ ವ್ಯವಸ್ಥೆ ಮಾಡಬೇಕಲ್ಲ?



ರ್‍ಯಾಂಡಿ ಪಾಶ್

ಪತ್ನಿ ಜೈ ಹೇಳುತ್ತಿದ್ದಳು,

ರ್‍ಯಾಂಡಿ, ನಾನು ಹಾಸಿಗೆಯಿಂದ ಪಕ್ಕಕ್ಕೆ ಹೊರಳಿದಾಗ ನೀನಿಲ್ಲದೆ ಇರುವ ಸ್ಥಿತಿಯನ್ನು ಊಹಿಸುವುದಾದರೂ ಹೇಗೆ? ನೀನಿಲ್ಲದೇ ಮಕ್ಕಳನ್ನು ಹೇಗೆ ವಿಹಾರಕ್ಕೆ ಕರೆದೊಯ್ಯಲಿ? ನೀನಿಲ್ಲದ ಜಗತ್ತನ್ನು ನಾನು ಹೇಗೆ ಊಹಿಸಿಕೊಳ್ಳಲಿ? ಹೇಗೆ ಎದುರಿಸಲಿ...?"

ನಿಜವಾಗಿ ಕ್ಯಾನ್ಸರಿಗೆ ತುತ್ತಾದವರು ಲಿಸಾ ಮತ್ತು ರ್‍ಯಾಂಡಿ ಇಬ್ಬರೇ ಅಲ್ಲ. ಆದರೆ ಅವರು ಬರೆದಿಟ್ಟ ಭಾವನೆಗಳು ನಮ್ಮನ್ನೊಮ್ಮೆ ಇಡಿಯಾಗಿ ಕಲಕಿಬಿಡುತ್ತದೆ. ಇಷ್ಟಕ್ಕೂ ಯಡಿಯೂರಪ್ಪರ ಆಡಳಿತದ ಬಗ್ಗೆ, ಗೋಹತ್ಯೆ, ಮೀಸಲಾತಿಯ ಬಗ್ಗೆ ಇಲ್ಲವೇ ಸಚಿನ್‌ನ ಸಾಧನೆಯ ಬಗ್ಗೆ ಗಂಭೀರವಾಗಿ ಚರ್ಚಿಸುವ ನಾವು, ಸಾವಿನ ಬಗ್ಗೆ ಅಷ್ಟೇ ಗಂಭೀರವಾಗಿ ಚರ್ಚಿಸಿದ್ದಿದೆಯೇ? ಯಾವಾಗ ಬೇಕಾದರೂ ಬರಬಹುದಾದ ಸಾವನ್ನು ಸ್ವೀಕರಿಸಲು ನಾವೆಷ್ಟು ತಯಾರಾಗಿದ್ದೇವೆ? ಸಾವು ಮತ್ತು ಸಾವಿನಾಚೆಗಿನ ಬದುಕಿನ ಬಗ್ಗೆ ಸುಮ್ಮನೆ ಒಮ್ಮೆ ಕೂತು ಯೋಚಿಸಿ. ಒಂಟಿಯಾಗಿ ಹೋಗುವುದನ್ನು ಕಲ್ಪಿಸಿಕೊಳ್ಳಿ. ಪತ್ನಿ, ಮಕ್ಕಳು, ಕುಟುಂಬಸ್ಥರು ಕಣ್ಣೀರಿಳಿಸುವುದನ್ನು ಊಹಿಸಿಕೊಳ್ಳಿ.

ಎದೆ ಭಾರವಾಗುವುದಿಲ್ಲವೇ?

akkukkila@gmail.com

**ವಿದೇಶರಂಗ**

# ಮಲೇಶ್ಯಾ: ವಿವಾದದಲ್ಲಿ ಅಲ್ಲಾಹ್?

**ಎ. ಆರ್. ಫಾರೂಕ್**

**ಮ**ಲೇಶ್ಯಾದಲ್ಲಿ 'ಅಲ್ಲಾಹ್' ಎಂಬುದು ಈಗ ದೊಡ್ಡ ವಿವಾದದ ವಿಷಯವಾಗಿದೆ. ಘಟನೆ ಹೀಗೆ ಪ್ರಾರಂಭವಾಗುತ್ತದೆ. ಕ್ಯಾಥೊಲಿಕ್ ವಿಭಾಗದ 'ಹೆರಾಲ್ಡ್' ಎಂಬ ದ್ವೈವಾರ ಪತ್ರಿಕೆಯೊಂದು ತನ್ನ ಮಲಯಾ ಭಾಷೆಯ ಆವೃತಿಯಲ್ಲಿ ದೇವನನ್ನು ಪರಾಮರ್ಶಿಸುವಲ್ಲೆಲ್ಲ 'ಅಲ್ಲಾಹ್' ಎಂದು ಪ್ರಯೋಗಿಸಲಾರಂಭಿಸಿದೆ. ಮಲಯನ್ ಭಾಷೆಯಲ್ಲಿ ದೇವನಿಗೆ




ತುಹಾನ್ ಎಂಬ ಪದವಿದ್ದರೂ ಸಂಪೂರ್ಣ ಮುಸ್ಲಿಮರೇ ಅಲ್ಲಿ 'ಅಲ್ಲಾಹ್' ಎಂದೇ ಉಪಯೋಗಿಸುತ್ತಾರೆ. ಆದುದರಿಂದ ಪತ್ರಿಕೆ 'ಅಲ್ಲಾಹ್' ಎಂದು ಬಳಸುವುದು 'ಮಲಯ್' ಮುಸ್ಲಿಮರನ್ನು ತಪ್ಪಭಿಪ್ರಾಯ ಹೊಂದುವಂತೆ ಮಾಡಬಹುದೆಂಬ ಕಾರಣ ತಿಳಿಸಿ ಸರಕಾರ ಈ ಪದಪ್ರಯೋಗವನ್ನು ನಿಲ್ಲಿಸುವಂತೆ ಪತ್ರಿಕೆಗೆ ಸೂಚಿಸಿತ್ತು. ಇದೇ ಪತ್ರಿಕೆಯ ಆಂಗ್ಲ ಪ್ರತಿಯಲ್ಲಿ God ಎಂದು ಮಾತ್ರ ಪರಾಮರ್ಶಿಸಲಾಗುತ್ತದೆ.

ಆದೇಶವನ್ನು ತಿರಸ್ಕರಿಸಿದುದಕ್ಕಾಗಿ ಪತ್ರಿಕೆಯ ಲೈಸನ್ಸನ್ನು ಸರಕಾರ ಅಮಾನತುಗೊಳಿಸಿತು. ಪ್ರಕಟನೆಯನ್ನು ನಿಷೇಧಿಸಿತು. ಪತ್ರಿಕೆ ಕೋರ್ಟಿನ ಮೆಟ್ಟಲೇರಿತು. 'ಅಲ್ಲಾಹ್' ಎಂಬ ಪದವನ್ನು ಮುಸ್ಲಿಮೇತರರಿಗೂ ಬಳಸಬಹುದೆಂದು ಕೋರ್ಟು ಹೇಳಿತು. ಕ್ರೈಸ್ತರು ಅವರ 'ಮಲಯ್' ಬೈಬಲ್‌ನಲ್ಲಿ 'ಅಲ್ಲಾಹ್' ಎಂದು ಉಪಯೋಗಿಸಬಹುದೆಂದು ಕೋರ್ಟು ಹೇಳಿತು. ಇಷ್ಟಾದಾಗ ವಿವಾದ ಹೊತ್ತಿ ಹರಡತೊಡಗಿತು. ಚಿಕ್ಕ ಪುಟ್ಟ ಘರ್ಷಣೆಗೂ ಹೇತುವಾಯಿತು. ಕೋರ್ಟು ತೀರ್ಪಿನ ವಿರುದ್ಧ ಬೃಹತ್ ರ‍್ಯಾಲಿಗಳು ನಡೆಯಿತು. 12ಕ್ರೈಸ್ತ ಚರ್ಚ್‌ಗಳು, 2ಮಸೀದಿಗಳು, 1ಸಿಕ್ಖ್ ಗುರುದ್ವಾರಕ್ಕೆ ಸಮಾಜ ವಿರೋಧಿಗಳು ಬೆಂಕಿ ಉಂಡೆಯನ್ನೆಸೆದು ಹಾನಿ ಮಾಡಿದರು. ಕೋಮು ಸಂಘರ್ಷ ಅಪರೂಪವಾಗಿದ್ದ ಮಲೇಶ್ಯಾದಲ್ಲಿ ಇಂತಹ ಚಿಕ್ಕ ಘರ್ಷಣೆಯೇ ದೊಡ್ಡ ಚರ್ಚೆಯಾಯಿತು. ಪ್ರಧಾನಿಯಿಂದ ಹಿಡಿದು ಎಲ್ಲ ಸಂಘಟನೆಗಳ ಮುಖ್ಯಸ್ಥರೂ ಒಗ್ಗೂಡಿ ಆಕ್ರಮಣವನ್ನು ಖಂಡಿಸಿದರು. ಮಾತ್ರವಲ್ಲ, ಇಸ್ಲಾಮೀ ಸಂಘಟನೆಗಳು ಅಲ್ಪಸಂಖ್ಯಾತ ಸಮುದಾಯದ ಆರಾಧನಾಲಯಗಳಿಗೆ ಕಾವಲು ನಿಲ್ಲಿಸಲು ಸ್ವಯಂ ಸೇವಕರನ್ನು ನೇಮಿಸಿದವು. ಅವುಗಳಿಗಾದ ಹಾನಿಯನ್ನು ಸರಿಪಡಿಸಲು ಆರ್ಥಿಕ ಸಹಾಯವನ್ನು ನೀಡಿದುವು. ಈ ರೀತಿ ನೆರವಿಗೆ 130 ಮುಸ್ಲಿಮ್ ಸಂಘಟನೆಗಳು ಮುಂದೆ ಬಂದವು.

ಆದರೂ ಬೌದ್ಧಿಕ ಕ್ಷೇತ್ರದಲ್ಲಿ 'ಅಲ್ಲಾಹ್' ವಿವಾದ ಈಗಲೂ ಮುಂದುವರಿಯುತ್ತಿದೆ. ಆಡಳಿತ ಪಕ್ಷವಾದ ವಿಮ್ನಾ ಕ್ರೈಸ್ತರ ಬೈಬಲಿನಲ್ಲಿ 'ಅಲ್ಲಾಹ್' ಎಂದು ದೇವನನ್ನು ಸಂಬೋಧಿಸಬಾರದೆಂಬುದರ ಪರವಾಗಿದೆ. ಇದು ಸಾಮಾನ್ಯ ಮುಸ್ಲಿಮರನ್ನು ಗೊಂದಲಕ್ಕೀಡುಗೊಳಿಸಬಹುದೆಂದು ಅದು ಹೇಳುತ್ತಿದೆ. ಹಾಗಿದ್ದರೆ ಇಂಗ್ಲಿಷ್ ಪ್ರಕಟನೆಗಳಲ್ಲಿ ಯಾಕೆ 'ಅಲ್ಲಾಹ್' ಎಂಬ ಪದಪ್ರಯೋಗಿಸುವುದಿಲ್ಲವೆಂದು ಅದು ಕೇಳುತ್ತಿದೆ.

ಆದರೆ ಅತಿ ದೊಡ್ಡ ಇಸ್ಲಾಮೀ ಪಕ್ಷವಾದ Pasನ ನೇತೃತ್ವದ ಪ್ರತಿಪಕ್ಷ ಕೂಟ ಈ ವಾದವನ್ನು ನಿರಾಕರಿಸುತ್ತಿದೆ. ಪಾಸ್‌ನ ಅಧ್ಯಕ್ಷ ಹಾದಿ ಅವಾಂಗ್, ಪಕ್ಷದ ನಿಲುವನ್ನು ಹೀಗೆ ವ್ಯಕ್ತಪಡಿಸಿದ್ದಾರೆ.

"ಅಬ್ರಹಾಮಿಕ್ ಸರಣಿಯ ಕ್ರೈಸ್ತರು, ಯಹೂದಿ ವಿಶ್ವಾಸಿಗಳು ದೇವನನ್ನು ಅಲ್ಲಾಹ್ ಎಂದು ಕರೆಯುವುದು ಇಸ್ಲಾಮೀ ನ್ಯಾಯದ ಪ್ರಕಾರ ಸ್ವಾಗತಾರ್ಹವಾಗಿದೆ. ಆದರೆ ತಪ್ಪಾಭಿಪ್ರಾಯ ಉಂಟಾಗದಂತೆ ಈ ಪದವನ್ನು ಬಳಸಬೇಕಾಗಿದೆ. ಪ್ರತಿಪಕ್ಷ ನಾಯಕರಲ್ಲೊಬ್ಬರಾಗಿರುವ ಅನ್ವರ್ ಇಬ್ರಾಹೀಮ್‌ರ ನಿಲುವು ಕೂಡಾ ಇದಾಗಿದೆ. ಅವರು ಹೇಳುತ್ತಾರೆ, "ಸೆಮಿಟಿಕ್ ಭಾಷೆಗಳಲ್ಲಿ ದೇವನನ್ನು ಅಭಿಸಂಬೋಧಿಸುವುದು ಅಲ್ಲಾಹ್ ಎಂದಾಗಿದೆ. ಅರಾಮಿಕ್ ಭಾಷೆಯಲ್ಲಿ 'ಇಲಾಹ' ಎಂದೂ 'ಹಿಬ್ರೂ'ವಿನಲ್ಲಿ 'ಇಲೋಹಿಮ್' ಎಂದೂ ಪ್ರಯೋಗಿಸಲಾಗುತ್ತದೆ. ಶತಮಾನಗಳಿಂದ ಅರಬರಾದ ಮುಸ್ಲಿಮ್, ಕ್ರೈಸ್ತ, ಯಹೂದಿ ವಿಭಾಗಗಳು ಇದನ್ನು ಮುಂದುವರೆಸುತ್ತಾ ಬರುತ್ತಿವೆ. ಇದರಿಂದಾಗಿ ಈ ವಿಚಾರದಲ್ಲಿ ಮಲೇಶ್ಯದ ಹೊರಗಿನ ವಿದ್ವಾಂಸರು ಈ ವಿವಾದಕ್ಕೆ ದೊಡ್ಡ ಪ್ರಾಮುಖ್ಯತೆ ಕಲ್ಪಿಸಿಲ್ಲ.

ರಾಜಕೀಯ ಹಿತಾಸಕ್ತಿ ಈ ವಿವಾದದ ವಿಜೃಂಭಣೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಕಳೆದ ಚುನಾವಣೆಯಲ್ಲಿ ಇಸ್ಲಾಮೀ ಪಕ್ಷ ಪಾಸ್‌ನ ನೇತೃತ್ವದಲ್ಲಿರುವ ಪ್ರತಿಪಕ್ಷ ಕೂಟ ಭಾರೀ ಜಯಗಳಿಸಿತ್ತು. ಪಾಸ್‌ನ ಪ್ರಭಾವ ಹೆಚ್ಚುತ್ತಿರುವುದು ಅಲ್ಪಸಂಖ್ಯಾತರಲ್ಲಿ ಪಾಸ್‌ನ ಕುರಿತು ಒಳ್ಳೆಯ ಅಭಿಪ್ರಾಯ ಹೆಚ್ಚುತ್ತಿರುವುದು ಆಡಳಿಕ ಪಕ್ಷವಾದ ವಿಮ್ನಾವನ್ನು ಅಸ್ವಸ್ಥಗೊಳಿಸಿದೆ. ಹೀಗಾಗಿ ಈ ವಿಚಾರದ ಮೂಲಕವಾದರೂ ಪ್ರಭಾವವನ್ನು ಹೆಚ್ಚಿಸಬಹುದು ಎಂಬ ಆಲೋಚನೆ ವಿಮ್ನಾಕ್ಕಿದ್ದಂತಿದೆ.

## ಯುರೋಪಿನಲ್ಲಿ ಜನಾಂಗೀಯ ತಾರತಮ್ಯ: ವರದಿ

ವಾಷಿಂಗ್ಟನ್: ಯುರೋಪಿಯನ್ ರಾಷ್ಟ್ರಗಳಲ್ಲಿ ಮುಸ್ಲಿಮರ ವಿರುದ್ಧ ತಾರತಮ್ಯ ಅತಿ ತೀವ್ರವಾಗಿದೆಯೆಂಬುದನ್ನು ಅಮೇರಿಕದ ರಾಜ್ಯಾಂಗ ಇಲಾಖೆಯ ಮಾನವ ಹಕ್ಕು ವಿಭಾಗವು ತನ್ನ ವರದಿಯಲ್ಲಿ ಸೂಚಿಸಿದೆ.

ಮಸೀದಿಗಳಲ್ಲಿ ಮಿನಾರ ನಿರ್ಮಾಣವನ್ನು ತಡೆದ ಸ್ವಿಝರ್‌ಲ್ಯಾಂಡಿನ ಕ್ರಮ ಮತ್ತು ಫ್ರಾನ್ಸ್‌ನಲ್ಲಿ ಪರ್ದಾ ನಿಷೇಧ, ಜರ್ಮನ್ ಮತ್ತು ನೆದರ್‌ಲ್ಯಾಂಡ್ ಸರಕಾರಗಳು ಮುಸ್ಲಿಮರ ವಿರುದ್ಧ ಸ್ವೀಕರಿಸಿದ ನೀತಿ ಮತ್ತು ತಾರತಮ್ಯಗಳನ್ನು ವರದಿಯಲ್ಲಿ ಉದಾಹರಣೆಯಾಗಿ ಎತ್ತಿಹಿಡಿಯಲಾಗಿದೆ. ಮುಸ್ಲಿಮರ ವಿರುದ್ಧ ಯುರೋಪ್‌ನಲ್ಲಿ ಹೆಚ್ಚಿರುವ ತಾರತಮ್ಯವು ಆತಂಕ ಪಡುವಂತಿದೆ ಎಂದೂ ವರದಿ ವಿವರಿಸಿದೆ. ಅಧ್ಯಾಪಕರು ಶಾಲೆಗಳಿಗೆ ಶಿರವಸ್ತ್ರ ಧರಿಸಿ ಹಾಜರಾಗುವಂತಿಲ್ಲವೆಂದು ಇತ್ತೀಚೆಗೆ ಜರ್ಮನಿ ಮತ್ತು ನೆದರ್‌ಲ್ಯಾಂಡ್‌ಗಳು ಕಾನೂನು ಜಾರಿಗೆ ತಂದವು. ಎಂಟೂವರೆ ಲಕ್ಷ ಮುಸ್ಲಿಮರನ್ನು ಹೊಂದಿರುವ ನೆದರ್‌ಲ್ಯಾಂಡ್‌ನಲ್ಲಿ ಮುಸ್ಲಿಮರು ಸಾಮಾಜಿಕ ಬಹಿಷ್ಕಾರವನ್ನು ಎದುರಿಸುತ್ತಿದ್ದಾರೆ. ಇಸ್ಲಾಮ್ ಪಾಶ್ಚಾತ್ಯ ಮೌಲ್ಯಗಳ ಶತ್ರುವೆಂದು ಜನರು ಭಾವಿಸುತ್ತಿರುವುದರಿಂದ ಮುಸ್ಲಿಮರನ್ನು ದೂರವಿರಿಸುವಂತೆ ಮಾಡಲಾಗುತ್ತಿದೆ. ಬಲಪಂಥೀಯ ರಾಜಕೀಯ ಪಕ್ಷಗಳ ನಾಯಕರು ಮುಸ್ಲಿಮರ ವಿರೋಧ ಹೆಚ್ಚುವಂತೆ ಮಾಡಲು ಪ್ರಯತ್ನಿಸುತ್ತಿದ್ದಾರೆ.

ಮುಸ್ಲಿಮರ ವಿರುದ್ಧ ದೊಡ್ಡ ಮಟ್ಟದ ಆಕ್ರಮಣ ನಡೆಯುವುದಿಲ್ಲವಾಗಿದ್ದರೂ ಸೂಕ್ಷ್ಮಸ್ತರಗಳಲ್ಲಿ ಅವರನ್ನು ಬೆದರಿಸುವುದು, ಜಗಳ, ನಾಶಮಾಡುವುದು, ಅಶ್ಲೀಲವಾಗಿ ಮಾತನಾಡುವುದು ಮುಂತಾದುದಕ್ಕೆ ಮುಸ್ಲಿಮರು ಹಲವಾರು ಬಾರಿ ಬಲಿಯಾಗಿದ್ದಾರೆ. ಮಾನವ ಹಕ್ಕುಗಳ ಹನನದ ಹೆಸರಿನಲ್ಲಿ ಇರಾನ್, ಚೈನಾ, ಕ್ಯೂಬಾ, ಮ್ಯಾನಮಾರ್, ಉತ್ತರ ಕೊರಿಯಾ, ಝಿಂಬಾಬ್ವೆ, ಸುಡಾನ್, ಸಿರಿಯಾ ಮುಂತಾದ ದೇಶಗಳನ್ನು ವರದಿಯು ತೀವ್ರವಾಗಿ ಟೀಕಿಸಿದೆ. ಮುಸ್ಲಿಮರು ಸಹಿತ ಅಲ್ಪಸಂಖ್ಯಾತರು ಚೀನಾದಲ್ಲಿ ಭಾರೀ ತಾರತಮ್ಯ ಅನುಭವಿಸುತ್ತಿದ್ದಾರೆ. ಆಡಳಿತ ಕೂಟದ ವಿರುದ್ಧ ಅಭಿಪ್ರಾಯ ಹೊಂದಿರುವ ಮುಸ್ಲಿಮರು ಇರಾನ್‌ನಲ್ಲಿ ವ್ಯಾಪಕವಾಗಿ ಪೀಡಿಸಲ್ಪಡುತ್ತಿದ್ದಾರೆ. ಪಾಕಿಸ್ತಾನದಲ್ಲಿ ಮಾನವಹಕ್ಕುಗಳ ವಿಷಯ ಗಂಭೀರವಾಗಿದ್ದು ನಿರಪರಾಧಿಗಳ ಜೀವ ಅಸುರಕ್ಷಿತವಾಗಿದೆ ಎಂದು ವರದಿ ಹೇಳಿದೆ.

# ಜಮಾಅತ್‌ನ ಸೇವೆ ಅನನ್ಯ

ಜಮಾಅತೆ ಇಸ್ಲಾಮೀ ಹಿಂದ್‌ಗೆ **60** ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ ಹಿರಿಯ ನಾಯಕರಾದ ಮೌಲಾನಾ ಅಬ್ದುಲ್ ಅಝೀಝ್‌ರವರೊಂದಿಗೆ ನಡೆಸಲಾದ ಸಂದರ್ಶನವನ್ನು ಇಲ್ಲಿ ಕೊಡಲಾಗಿದೆ. - ಸಂ

**● ಮೌಲಾನಾ ಮೌದೂದಿಯವರಿಗೆ ತಮ್ಮ ಕಲ್ಪನೆಗಳಿಗೆ ಮೂರ್ತರೂಪ ನೀಡುವಲ್ಲಿ ಹೈದರಾಬಾದ್ ಮಹತ್ತರ ಪಾತ್ರವಹಿಸಿತ್ತು ಎನ್ನಲಾಗುತ್ತದೆ. ಅವರು ಇಲ್ಲಿಂದಲೇ ಸುಹ್‌ಸ್ರಾಮ್‌ನ ಮೌಲಾನಾ ಅಬೂ ಮುಹಮ್ಮದ್ ಮುಸ್ಲಿಹುದ್ದೀನ್‌ರಿಂದ 'ತರ್ಜುಮಾನುಲ್ ಕುರ್‌ಆನ್' ಗಳಿಸಿಕೊಂಡಿದ್ದರಂತೆ. ಹಾಗಾಗಿ ಇಸ್ಲಾಮೀ ಆಂದೋಲನದ ಪ್ರಗತಿಯಲ್ಲಿ ಹೈದರಾಬಾದಿನ ಪಾತ್ರದ ಕುರಿತು ಒಂದಿಷ್ಟು ಬೆಳಕು ಚೆಲ್ಲುವಿರಾ?**

**○ ಮೌ| ಅಬೂ ಮುಹಮ್ಮದ್ ಮುಸ್ಲಿಹ್‌ರವರು ಹೈದಾರಾಬಾದಿನಿಂದಲೇ ಆಲಂಗೀರಿ ಕುರ್‌ಆನ್ ಆಂದೋಲನವನ್ನು ಆರಂಭಿಸಿದ್ದರು. ಅದರ ಕಚೇರಿಯು ಪ್ರಸಿದ್ಧ ಹುಸೈನ್ ಸಾಗರ್ ನದಿಯ ಪಶ್ಚಿಮ ತಟದಲ್ಲಿರುವ ಮಸ್ಜಿದುಲ್ ಆಲಂಗೀರಿಯಲ್ಲಿತ್ತು. ಅಲ್ಲಿಂದಲೇ ಅವರು 'ತರ್ಜುಮಾನುಲ್ ಕುರ್‌ಆನ್' ಎಂಬ ನಿಯತಕಾಲಿಕವನ್ನು ಹೊರತಂದಿದ್ದರು. ಅದರ ಆರು ಸಂಚಿಕೆಗಳಷ್ಟೇ ಹೊರಬಂದಿದ್ದುವು. ಅದೇ ವೇಳೆ ಮೌಲಾನಾ ಮೌದೂದಿಯವರು ಒಂದು ಒಪ್ಪಂದದ ಆಧಾರದಲ್ಲಿ ಆ ನಿಯತಕಾಲಿಕದ ಮಾಲಕತ್ವ ಮತ್ತು ಸಂಪಾದಕತ್ವವನ್ನು ಪಡೆದುಕೊಂಡರು. ಹೀಗೆ 1931ರಿಂದ ಅದು ಮೌ| ಮೌದೂದಿಯವರ ಮುಖಾಂತರವೇ ಪ್ರಕಟವಾಗತೊಡಗಿತು. ಅದರ ಕಚೇರಿಯನ್ನು ಕುರ್‌ಬಾನ್ ಹುಸೈನ್ ಬಿಲ್ಡಿಂಗ್ ಮುಅಝ್ಝಂ ಜಾಹಿ ರಸ್ತೆಗೆ ಸ್ಥಳಾಂತರಿಸಲಾಯಿತು. ಮೌಲಾನಾ ಮೌದೂದಿಯವರು 1928ರಲ್ಲಿ ದೆಹಲಿಯಿಂದ ಹೈದರಾಬಾದಿಗೆ ಬಂದು ನೆಲೆಸಿದ್ದರು. ಅಲ್ಲಿ ಅವರ ಹಿರಿಯ ಸಹೋದರ ಅಬುಲ್ ಖೈರ್ ಮೌದೂದಿಯವರು ಜಾಮಿಆ ಉಸ್ಮಾನಿಯಾದ ದಾರುಲ್ ತರ್ಜುಮದಲ್ಲಿ (ಭಾಷಾಂತರ ವಿಭಾಗದಲ್ಲಿ) ಸೇವೆ ಸಲ್ಲಿಸುತ್ತಿದ್ದರು. ಇದೇ ಭಾಷಾಂತರ ವಿಭಾಗದಲ್ಲಿ ಮೌಲಾನಾ ಸಯ್ಯದ್ ಅಬುಲ್ ಆಲಾ ಮೌದೂದಿಯವರು ಮುಲ್ಲಾ ಸದ್ರುದ್ದೀನ್ ಶೀರಾಝಿಯವರ 'ಇಸ್ಫಾರು ಅರ್ಬಅ'ದ ಎರಡು ಸಂಪುಟಗಳನ್ನು ಅನುವಾದಿಸಿದ್ದರು. 'ರಿಸಾಲಯೆ ದೀನಿಯಾತ್' ಕೃತಿಯನ್ನೂ ಇದೇ ಜಾಮಿಆ ಉಸ್ಮಾನಿಯಾದ ದೀನಿಯಾತ್ ವಿಭಾಗದ ಬೇಡಿಕೆಯಂತೆ ಬರೆದಿದ್ದರು. ಅದನ್ನು ಉಸ್ಮಾನಿ ಕಾಲದ ಸರಕಾರಿ ಶಾಲೆಯ ಹತ್ತನೇ ತರಗತಿಯ ಪಠ್ಯದಲ್ಲಿ ಶಾಮಿಲಾಗಿತ್ತು. ನಿಝಾಮರು ತಮ್ಮ ರಾಜ್ಯದ ಶೈಕ್ಷಣಿಕ ವ್ಯವಸ್ಥೆಯ ಸುಧಾರಣೆ ಮತ್ತು ಪ್ರಗತಿಗಾಗಿ ಆಯೋಗವೊಂದನ್ನು ನೇಮಿಸಿದ್ದರು. ಜಾಮಿಆ ಉಸ್ಮಾನಿಯಾದ ಉಪಕುಲಪತಿಯಾಗಿದ್ದ ಮೆಕೆಂಝಿಯವರೇ ಅದರ ಮೇಲ್ವಿಚಾರಕರಾಗಿದ್ದರು. ಪ್ರಸ್ತುತ ಆಯೋಗದ ಪ್ರಶ್ನಾವಳಿಗಳನ್ನು ಶಿಕ್ಷಣ ತಜ್ಞರ ಬಳಿಗೆ ಕಳುಹಿಸಿಕೊಡಲಾಗಿತ್ತು. ಅದಕ್ಕೆ ಉತ್ತರ ನೀಡಿದವರ ಪೈಕಿ 'ತರ್ಜುಮಾನುಲ್ ಕುರ್‌ಆನ್' ಪತ್ರಿಕೆಯ ಸಂಪಾದಕರಾಗಿದ್ದ ಅಬುಲ್ ಆಲಾ ಮೌದೂದಿಯವರೂ ಒಬ್ಬರಾಗಿದ್ದರು. ಈ 'ತರ್ಜುಮಾನುಲ್ ಕುರ್‌ಆನ್' 1937 ಡಿಸೆಂಬರ್‌ವರೆಗೂ ಹೈದರಾಬಾದಿನಿಂದಲೇ ಪ್ರಕಟವಾಗುತ್ತಲಿತ್ತು. ಬಳಿಕ 1938 ಜನವರಿಯಿಂದ ಪಠಾಣ್‌ಕೋಟ್‌ನ ದಾರುಸ್ಸಲಾಮ್ ಜಮಾಲ್‌ಪುರದಿಂದ ಪ್ರಕಟವಾಗತೊಡಗಿತು. 'ಅಲ್ ಜಮ್‌ಇಯ್ಯತ್'ನ ಸಂಪಾದಕತ್ವದಲ್ಲಿ ಸಯ್ಯದ್ ಮೌದೂದಿಯವರು ಬರೆದ ಪ್ರಬಂಧ ಮತ್ತು ಸಂಪಾದಕೀಯಗಳ ನಾಲ್ಕು ಸಂಕಲನಗಳು ಇತ್ತೀಚೆಗೆ ಪ್ರಕಟವಾಗಿದ್ದವು. ದೆಹಲಿಯಲ್ಲಿದ್ದಾಗ ಮೌದೂದಿಯವರು ಖಿಲಾಫತ್ ಚಳುವಳಿ ಮತ್ತು ಜಮ್‌ಇಯತುಲ್ ಉಲೆಮಾಗೆ ಹತ್ತಿರವಾಗಿದ್ದರು. ಆದರೆ ಹೈದರಾಬಾದ್‌ಗೆ ಬಂದ ಮೇಲೆ ಮುಕ್ತ ಚಿಂತನೆಯಲ್ಲಿ ತೊಡಗಿಕೊಳ್ಳಲು ಅವಕಾಶ ಒದಗಿತು. 'ರಿಸಾಲಯೆ ದೀನಿಯಾತ್', 'ಇಸ್ಲಾಮೀ ತಹ್‌ಝೀಬ್ ಔರ್ ಉಸ್‌ಕೆ ಉಸೂಲ್ ವ ಮುಬಾದಿ', 'ಕುರ್‌ಆನ್ ಕಿ ಚಾರ್ ಬುನಿಯಾದಿ ಇಸ್ತಿಲಾಹೇಂ' ಮತ್ತು 'ಇಸ್ಲಾಮೀ ಇಬಾದಾತ್ ಪರ್ ಏಕ್ ತಹ್‌ಕೀಕಿ ನಝರ್'ಗಳ ಅಧ್ಯಯನ ನಡೆಸಿದರೆ ಓರ್ವ ಯುವ ಇಸ್ಲಾಮೀ ಚಿಂತಕ ಬೆಳಕಿಗೆ ಬರುತ್ತಿದ್ದಾರೆ ಎಂದು ಅಂದಾಜಿಸುವುದು ಕಷ್ಟವೇನೂ ಅಲ್ಲ. ಮೌಲಾನಾ ಮೌದೂದಿಯವರು ಹೈದರಾಬಾದಿಗೆ ಬಂದು ನೆಲೆಸಿದ್ದ ವೇಳೆ ಅವರ ಪ್ರಾಯ ಸುಮಾರು 25 ವರ್ಷವಾಗಿದ್ದಿರಬಹುದಷ್ಟೇ. ತನ್ನ ಸಣ್ಣ ಪ್ರಾಯದಲ್ಲಿಯೇ ಓರ್ವ ಯುವಕ 'ಅಲ್ ಜಿಹಾದ್ ಫಿಲ್ ಇಸ್ಲಾಮ್' ಎಂಬ ಘನವಾದ ಗ್ರಂಥವನ್ನು ಬರೆಯುತ್ತಾರೆನ್ನುವಾಗ, ಅವರ ಚಿಂತನೆ, ದೃಷ್ಟಿಕೋನ ಹೇಗಿದ್ದಿರಬಹುದು ಎಂಬುದನ್ನು ಅಂದಾಜಿಸಬಹುದಾಗಿದೆ. ಈಗಾಗಲೇ ತಿಳಿಸಿದ ಕೃತಿಗಳ ಅಧ್ಯಯನವು ಮೌದೂದಿಯವರ ಚಿಂತನಾ ಶಕ್ತಿಯ ಪರಿಪಕ್ವತೆಯನ್ನು ಸೂಚಿಸುತ್ತದೆ. 'ಹುಕೂಕುಝ್ಝೌಜೈನ್', 'ಪರ್ದಾ', 'ತಂಕೀಹಾತ್' ಹೈದರಾಬಾದ್‌ನಲ್ಲಿ ನೆಲೆಸಿದ್ದ ವೇಳೆ ಹಾಗೂ 'ಮಸ್ಲಯೆ ಕೌಮಿಯತ್' ಮತ್ತು 'ಸಿಯಾಸಿ ಕಶ್ಮಕಶ್' ಗ್ರಂಥಗಳನ್ನು ಇಲ್ಲಿ ನೆಲೆಸಿದ್ದ ವೇಳೆಯೇ ಆರಂಭಿಸಲಾಗಿತ್ತು.**

**ಮೌದೂದಿಯವರು ಪಠಾಣ್‌ಕೋಟ್‌ನಲ್ಲಿದ್ದಾಗ ರಚಿಸಿದ್ದ ಇಸ್ಲಾಮೀ ಆಂದೋಲನದ ಆರಂಭಿಕ ರೂಪವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಆ ಕಲ್ಪನೆಗಳ ಕೊಂಡಿಯು ಹೈದರಾಬಾದ್‌ನ ವರೆಗೆ ತಲುಪುತ್ತದೆ. 'ಹುಕೂಕುಝ್ಝೌಜೈನ್' (1935) ಸ್ವಾವಲಂಬನೆಯ ಕಲ್ಪನೆಯ ಆರಂಭ ಕಾಲದಲ್ಲಾಗಿತ್ತು. 'ಸಿಯಾಸಿ ಕಶ್ಮಕಶ್' ಭಾಗ II (1939)ರಲ್ಲಿ ಭಾರತೀಯ ಮುಸ್ಲಿಮರಿಗಾಗಿ ಸಾಂಸ್ಕೃತಿಕ ಸ್ವಾಯತ್ತತೆಯ ಸಂಪೂರ್ಣ ಚಿತ್ರಣವಿದೆ. 1940ರಲ್ಲಿ ಅದರ ಮೂರನೇ ಭಾಗ ಪ್ರಕಟವಾಯಿತು. ಅದು ಒಂದು ಉತ್ತಮ ಸಂಘಟನೆಯ ಅಗತ್ಯದೊಂದಿಗೆ ಕೊನೆಗೊಂಡಿದೆ. ಅದರ ನಂತರವೇ ಜಮಾಅತೆ ಇಸ್ಲಾಮೀ ಆರಂಭವಾಯಿತು.**




# ಬುರ್ಖಾದ ಕುರಿತು ಚರ್ಚೆ ನಡೆಸೋಣ

ಅರಫಾ ಮಂಚಿ

(ಮುಖಪುಟದಿಂದ)

ಅವರು ಹೊಸ ಪ್ರಶ್ನೆಯನ್ನೇನೂ ಎತ್ತಿಲ್ಲ ಎಂದು ಯಾರಿಗೂ ಅನ್ನಿಸುವಷ್ಟು ಸಹಜವಾದ ಮತ್ತು ಇಂದು ಸಮಾಜದಲ್ಲಿ ಎದ್ದು ನಿಂತಿರುವ ಸಂದೇಹಗಳನ್ನೇ ವೈಚಾರಿಕ ಹಿನ್ನೆಲೆಯಲ್ಲಿ ಕೇಳಿದ್ದಾರೆ. ಪ್ರಜ್ಞಾವಂತ ವ್ಯಕ್ತಿಯೊಬ್ಬ ಆರೋಗ್ಯಪೂರ್ಣ ಚರ್ಚೆಯನ್ನು ಮತ್ತು ಸಾಮಾಜಿಕ ಕಳಕಳಿಯಿಂದ ಹೇಗೆ ಲೇಖನಿಯನ್ನು ದುಡಿಸಿಕೊಳ್ಳಬಹುದು ಎಂಬುದಕ್ಕೆ, ಮಾರ್ಚ್ 8ನೇ ತಾರೀಕಿನ ಅವರ ಪ್ರಜಾವಾಣಿಯ ಅಂಕಣವನ್ನು ಮಾದರಿಯಾಗಿ ಪರಿಗಣಿಸಬೇಕಾಗಿದೆ. ಇರಲಿ, ಹಾಸನ-ಶಿವಮೊಗ್ಗಗಳಲ್ಲಿ ನಡೆದ ಗಲಭೆಗಳಿಗೆ ಮುಸ್ಲಿಮರ ಅಸ್ಯೆರಣೆ ಕಾರಣವಾಗಿರಬಹುದಾ? ತಸ್ಲೀಮಾ ಬುರ್ಖಾವನ್ನು ಶೋಷಣೆಯ ಸರಕು ಎಂದು ಚಿತ್ರಿಸಿದ್ದಕ್ಕಾಗಿ ಮುಸ್ಲಿಮರು ಬೀದಿಗಿಳಿದು ಬಂದರೇ? ಎಂಬುದನ್ನು ಇಲ್ಲಿ ಮೊದಲು ಸ್ಪಷ್ಟಪಡಿಸಿಕೊಳ್ಳುವ ಅಗತ್ಯವಿದೆ. ಇಲ್ಲವೆಂದಾದರೆ ಬುರ್ಖಾ ಮುಸ್ಲಿಮರ ಧಾರ್ಮಿಕ ಆಚರಣೆಯಾದುದರಿಂದ ಅವರು ಬೀದಿಗಿಳಿದು ಪ್ರತಿಭಟಿಸಿದರು, ಒಂದೆರಡು ಜೀವ ಹೋದ ಮೇಲೆ ಸುಮ್ಮನಾದರು ಎಂಬ ಅಸಹಿಷ್ಣುತಾ ಸಿದ್ಧಾಂತ ಮಾತ್ರವಲ್ಲ, ಅವರ ಹೆಸರಿಗೆ ಅವಿವೇಕಿಗಳೆಂಬ ತಪ್ಪಭಿಪ್ರಾಯ ಕೂಡ ಇನ್ನಷ್ಟು ಬಲವಾಗಿ ಅಂಟಿಕೊಳ್ಳುತ್ತದೆ. ಅಸಂಘಟಿತರು ಅಥವಾ ಅವರಿಗೆ ನಾಯಕರಿಲ್ಲ ಎಂಬ ಇನ್ನೊಂದು ವಿಚಾರಕ್ಕೂ ಪುಷ್ಟಿ ದೊರೆಯುತ್ತದೆ.

ಮೊದಲನೆಯದಾಗಿ ಬುರ್ಖಾವನ್ನು ಧರ್ಮದ ಸಿಂಬಲೆಂದು ಒಪ್ಪಿಕೊಳ್ಳುವ ಅಗತ್ಯವಿಲ್ಲವೆಂಬ ವಿಚಾರವನ್ನು ಸ್ಪಷ್ಟಪಡಿಸಿಕೊಳ್ಳೋಣ. ಇಸ್ಲಾಮೀ ರೀತ್ಯಾ ಹಿಜಾಬ್ ಎಂಬ ವಸ್ತ್ರಸಂಹಿತೆ ಮುಸ್ಲಿಮರಿಗೆ ಕಡ್ಡಾಯವಾಗಿದೆ. ಆ ಪ್ರಕಾರ ಮುಖ, ಮುಂಗೈಗಳನ್ನು ಹೊರತುಪಡಿಸಿ ದೇಹದ ಎಲ್ಲ ಭಾಗಗಳನ್ನು (ಒಟ್ಟಾರೆ ಅಂಗಸೌಷ್ಠವವನ್ನು) ಹೊರಗೆ ವ್ಯಕ್ತವಾಗದಂತೆ ಮರೆಸಿಡುವುದಾದರೆ ಹಿಜಾಬ್‌ನ ಉದ್ದೇಶ ಪೂರ್ತಿಯಾಗುತ್ತದೆ. ಅದಕ್ಕಾಗಿ ನೀವು ಬುರ್ಖಾವನ್ನೇ ಧರಿಸಿ, ಹೊದಿಕೆಯನ್ನೇ ಹೊದ್ದುಕೊಳ್ಳಿ. ಅಥವಾ ದೈಹಿಕ ಸೌಷ್ಠವವನ್ನು ಮುಚ್ಚುವ ಸಲ್ವಾರ್, ಚೂಡಿದಾರ್ ಯಾವುದನ್ನೇ ಧರಿಸಿರಿ, ಹಿಜಾಬ್ ಪಾಲನೆಯಾಗುತ್ತದೆ. ಈ ನಿಟ್ಟಿನಿಂದ ಬುರ್ಖಾವನ್ನು ಕೋಮುಗಲಭೆ ಸೃಷ್ಟಿಸುವಂತಹ ಸ್ಫೋಟಕ ವಸ್ತುವಾಗಿ ವಿಂಗಡಿಸಲಾಗದು. ಹೀಗಿರುವುದರಿಂದ ಬುರ್ಖಾವನ್ನು ಕೇಂದ್ರೀಕರಿಸಿ ಪ್ಲೇಕಾರ್ಡ್ ಹಿಡಿಯುವ ಆವಶ್ಯಕತೆಯೇ ಖಂಡಿತ ಮುಸ್ಲಿಮರ ಮುಂದಿಲ್ಲ ಎನ್ನಬಹುದು.

ಹಾಗಾದರೆ ಶಿವಮೊಗ್ಗ ಹಾಸನದಲ್ಲಿ ನಡೆದದ್ದೇನು? ಎಂಬ ಪ್ರಶ್ನೆ ಉದ್ಭವಿಸುತ್ತದೆಯಲ್ಲವೇ? ಅಲ್ಲಿ ನಡೆದಿರುವ ಗಲಭೆಗೆ ಬುರ್ಖಾ ಕಾರಣವಲ್ಲ. ಬುರ್ಖಾವನ್ನು ವಿಮರ್ಶಿಸಿದ್ದೋ, ಟೀಕಿಸಿದ್ದೋ ಕಾರಣವಲ್ಲ. ಅಥವಾ ಹಿಜಾಬ್ ವಸ್ತ್ರ ಸಂಹಿತೆಯನ್ನು ಅಪಮಾನಿಸಲಾಗಿದೆ ಎಂಬ ಅಸಹಿಷ್ಣುತಾ ಭಾವನೆ ಕೂಡಾ ಗಲಭೆಗೆ ಹಿನ್ನೆಲೆಯಾಗಿಲ್ಲ. ತಸ್ಲೀಮಾ ಅನಾರೋಗ್ಯಕರವಾಗಿ ಪ್ರವಾದಿವರ್ಯರನ್ನು(ಸ) ವಿಮರ್ಶಿಸಿದ್ದಾರೆ ಎಂಬುದಷ್ಟೇ ಗಲಭೆ ಕಾರಣವಾಗಿತ್ತು. ವೈಚಾರಿಕವಾಗಿಯೇ ಆಲೋಚಿಸಿದರೂ ಇನ್ನೋರ್ವನ ಧಾರ್ಮಿಕ ಸಂಕೇತಗಳ ಮೇಲೆ ದಾಳಿ ನಡೆಸುವಂತಹ ಬರಹಗಳನ್ನು ಚರ್ಚೆಯೆನ್ನಲಾಗದು. ಸಂವಿಧಾನ ಕೂಡಾ ಇತರರ ಧಾರ್ಮಿಕತೆಯನ್ನು ಆಕ್ರಮಿಸುವುದನ್ನು ಶಿಕ್ಷಾರ್ಹವೆಂದೇ ಸೂಚಿಸಿದೆ ಎಂಬಂಶ ಎಲ್ಲರಿಗೂ ತಿಳಿದಿರುವ ವಿಚಾರವಾಗಿದೆ. ಆದುದರಿಂದ ಮುಸ್ಲಿಮರ ಪ್ರಶ್ನಾತೀತ ಆಧ್ಯಾತ್ಮಿಕ ನಾಯಕರಾಗಿರುವ ಪ್ರವಾದಿಯನ್ನು ಸ್ವಾರ್ಥಿಯೆಂದು ಸತ್ಯಕ್ಕೆ ದೂರವಾಗಿ ಚಿತ್ರಿಸುವುದಾದರೆ ಅದನ್ನು ಅಭಿವ್ಯಕ್ತಿ ಸ್ವಾತಂತ್ರ್ಯ ವ್ಯಾಪ್ತಿಯಲ್ಲಿದೆ ಎಂದು ಒಪ್ಪಿಕೊಳ್ಳಲು ಸಾಧ್ಯವಿದೆಯೇ? ಅದು ಮುಸ್ಲಿಮ್ ಆಸ್ತಿಕರ (ಭಕ್ತರ) ವಿಶ್ವಾಸವನ್ನೇ ಕೆಣಕುವಂತಹ ಅಪರಾಧವಾಗುತ್ತದೆ. ಈ ರೀತಿ ದಾಳಿ ನಡೆವಾಗ ಮುಸ್ಲಿಮರ ಬಳಿ ಸ್ವರಕ್ಷಣೆಗೆ ಪ್ರತಿಭಟನೆ ಬಿಟ್ಟು, ಯಾವ ಅಸ್ತ್ರವೂ ಇಲ್ಲ. ಆದುದರಿಂದ ಪ್ರತಿಭಟಿಸುವುದು ಸಹಜವಾಗಿತ್ತು. ಆದರೆ ಅದರ ವಿಧಾನ ಮಾತ್ರ ಸೂಕ್ತವಾಗಿರಲಿಲ್ಲ ಎಂದು ಹೇಳಲು ನಮ್ಮಿಂದ ಸಾಧ್ಯವಿದೆ ಅಷ್ಟೇ.

ಧರ್ಮದ ಆಚರಣೆ ಮತ್ತು ಧರ್ಮದ ಪ್ರತೀಕಗಳೆಂಬುದು ಎರಡು ಬೇರೆ ಬೇರೆ ವಿಚಾರವಾಗಿದೆ. ಧರ್ಮದ ಆಚರಣೆಯನ್ನು ಚರ್ಚಿಸಬಾರದು ಅಥವಾ ಇಷ್ಟವಿಲ್ಲದವರು ಆ ಆಚರಣೆಯಿಂದ ದೂರ ನಿಲ್ಲಬಾರದು ಎಂಬ ಅಸ್ಯೆರಣೆಗೆ ಮೂಲಭೂತವಾಗಿಯೇ ಇಸ್ಲಾಮ್ ಆಸ್ಪದ ನೀಡಿಲ್ಲ. ಧರ್ಮದಲ್ಲಿ ಬಲಾತ್ಕಾರವಿಲ್ಲವೆಂಬುದು ಪವಿತ್ರ ಕುರ್‌ಆನ್‌ನ ವಾಣಿ. ನೀವು ಚಿಂತಿಸುವುದಿಲ್ಲವೇ? ಎಂದು ಕೂಡಾ ಅದು ಹಲವಾರು ಕಡೆ ವ್ಯಕ್ತಪಡಿಸುತ್ತದೆ. ಈ ನಿಟ್ಟಿನಿಂದ ಆರೋಗ್ಯಕರವಾದ ಚರ್ಚೆಗೆ ಇಸ್ಲಾಮಿನಲ್ಲಿ ಮೂಲಭೂತವಾಗಿಯೇ ಅವಕಾಶವಿದೆ ಎಂದಾಯಿತು. ಹಾಗೆಂದು ಚರ್ಚೆ ಯಾರನ್ನೋ ಅಪಮಾನಿಸುವುದಕ್ಕಾಗಿ ಎತ್ತಿಕೊಳ್ಳುವ ನಿಂದನೆ ಮಾತ್ರ ಆಗಿರಬಾರದು. ಈ ಅರ್ಥದಲ್ಲಿ ಮಟ್ಟು ಅವರಂತೆ ಚರ್ಚಿಸುವವರಿಗೆ ಸದಾ ಬಾಗಿಲು ತೆರೆದ ಧರ್ಮ ಇಸ್ಲಾಮ್ ಆಗಿದೆ ಎಂಬುದು ಸ್ಪಷ್ಟವಾಗುತ್ತದೆ. ಮುಸ್ಲಿಮರೆಂದರೆ ಅಸಹಿಷ್ಣುತಾವಾದಿಗಳಾಗಲು ಸಾಧ್ಯವಿಲ್ಲ. ಈಗ ನೋಡಿ ಮಟ್ಟು ವಿವರಿಸಿದಂತೆ ಎಷ್ಟೋ ಮಂದಿ ಬುರ್ಖಾವನ್ನು ವಿರೋಧಿಸಿ ಲೇಖನಿ ಬರೆದಿದ್ದಾರೆ. ಅದು ವಿವಿಧ ಭಾಷೆಗಳಲ್ಲಿ ಪ್ರಕಟವಾಗಿದೆ. ಹಾಗೆಂದು ಯಾರೂ ಕೂಡಾ ದಂಗೆಯೇಳಲಿಲ್ಲ. ಅಂತಹವರ ವಾದವನ್ನು ಎತ್ತಿಕೊಂಡು ಅವರು ಚರ್ಚಿಸಿರಬಹುದು, ಪ್ರತಿಭಟನೆ ಸಲ್ಲಿಸಿರಬಹುದು. ಹೀಗಿರುವಾಗ ಕನ್ನಡ ಪತ್ರಿಕೆಯಲ್ಲಿ ತಸ್ಲೀಮಾರ ಪ್ರವಾದಿ ನಿಂದನೆ ಲೇಖನ ಬಂದಾಗಲೂ ಇಂತಹ ಸಂಯಮವನ್ನೇ ಮುಸ್ಲಿಮರು ಪಾಲಿಸಬೇಕಾಗಿತ್ತಲ್ಲವೇ ಎಂದರೆ ಅದನ್ನು ಸಂಪೂರ್ಣ ಸರಿಯಾದ ವಾದವೆಂದು ಹೇಳಲಾಗುವುದಿಲ್ಲ. ಯಾಕೆಂದರೆ ತಸ್ಲೀಮಾರ ಲೇಖನ ಆರೋಗ್ಯಕರವಾದ ಚರ್ಚೆಯನ್ನು ಪ್ರೇರೇಪಿಸುವ ಬದಲು ಆತ್ಮಸಾಕ್ಷಿಯನ್ನೇ ಪ್ರಶ್ನಿಸುವ ರೀತಿಯಲ್ಲಿತ್ತು. ಆದುದರಿಂದ ಸಾಮಾನ್ಯರನ್ನು ಕೆರಳಿಸುವ ಖಂಡನೀಯ ಕೆಲಸವನ್ನು ಅದು ಮಾಡಿತ್ತು. ಈ ಬೆಳವಣಿಗೆ ಆರೋಗ್ಯಕರವಾದ ಒಂದು ಚರ್ಚೆಗೋ, ಶೋಷಣೆಗೊಳಗಾದವರ ಕುರಿತು ಕಳಕಳಿಗೋ ದಾರಿ ಮಾಡುವಂತಹದ್ದಾಗಿರಲಿಲ್ಲ ಎಂಬಂಶವನ್ನು ನಾವು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕಾಗಿದೆ.

ಸಾಮಾನ್ಯವಾಗಿ ಮುಸ್ಲಿಮ್ ಹೆಸರಿಟ್ಟುಕೊಂಡೇ ಬುರ್ಖಾ ಧರಿಸದ (ಹಿಜಾಬ್ ಪಾಲಿಸದ) ಅಥವಾ ಅಂಗಾಂಗಗಳನ್ನು ಪ್ರದರ್ಶಿಸುವ ಮಹಿಳೆಯರು ನಮ್ಮ ನಡುವೆ ಇದ್ದಾರೆ. ಮುಸ್ಲಿಮ್ (ಹೆಸರಿರುವ) ನಟ ನಟಿಯರನ್ನು ಹಿಜಾಬ್ ಧರಿಸಿಲ್ಲವೆಂದು ಯಾರಾದರೂ ಓಡಿಸಿ ಹೋಗಿ ಚಚ್ಚಿ ಹಾಕಿಯೂ ಇಲ್ಲ. ಮುಸ್ಲಿಮ್ ಅಸ್ಮಿತೆಗೆ ಅವರಿಂದ ಹಾನಿಯಾಯಿತೆಂದು ಯಾರೂ ಕೂಗಾಡುವುದೂ ಇಲ್ಲ. ಮುಸ್ಲಿಮ್ ಎಂದರೆ ವಿಧೇಯ ಎಂಬ ಅರ್ಥವೂ ಇದೆ, ಶಾಂತಿ ಎಂಬ ಅರ್ಥವೂ ಅದಕ್ಕಿದೆ. ಇಸ್ಲಾಮೀ ಆಚರಣೆಗೆ ವಿಧೇಯವಾಗದವರು ಏನಾಗಿರುತ್ತಾರೆಂಬುದು ಮುಸ್ಲಿಮರಿಗೆ ಚೆನ್ನಾಗಿ ಗೊತ್ತಿದೆ. ಅದಕ್ಕಾಗಿ ಒಂದು ಗಲಭೆ ಹುಟ್ಟು ಹಾಕುವ ಅಗತ್ಯವೂ ಇಲ್ಲ. ಆದುದರಿಂದ ಶಿವಮೊಗ್ಗ ಹಾಸನದಲ್ಲಿ ನಡೆದ ಗಲಭೆಗೆ ಬುರ್ಖಾದ ಕುರಿತು ಬಂದ ಟೀಕೆ ಕಾರಣವಲ್ಲ, ಬದಲಾಗಿ ಇಸ್ಲಾಮಿನ ಪ್ರತೀಕವನ್ನು ನಿಂದಿಸುವ ಸಂವಿಧಾನಬಾಹಿರ ವರ್ತನೆಯೇ ಕಾರಣವಾಗಿತ್ತೆಂಬುದು ಸ್ಪಟಿಕದಂತೆ ಸ್ಪಷ್ಟವಾಗುತ್ತದೆ.

ಇಲ್ಲಿ ಚರ್ಚಿಸಲಾದ ವಿಚಾರಗಳು ಕೆಲವರಿಗೆ ಮೂಲಭೂತವಾದದಂತೆ ಅನ್ನಿಸಿದರೂ ಅಚ್ಚರಿಯೇನಲ್ಲ. ಯಾಕೆಂದರೆ, ಇವೆಲ್ಲವೂ ಇಸ್ಲಾಮಿನ ತತ್ವಗಳೇ ಆಗಿವೆ. ಹಾಗಿರುವಾಗ ಶಿವಮೊಗ್ಗದ ಪ್ರತಿಭಟನೆ ಆಕ್ರಮಣಾಸಕ್ತವಾಗಿದ್ದರೆ ಅದಕ್ಕೆ ಮೂಲಭೂತವಾದಿಗಳು ಕಾರಣವಾಗಿಲ್ಲ ಎಂದು ಸ್ಪಷ್ಟಗೊಳ್ಳುತ್ತದೆ. ತಸ್ಲೀಮಾರ ಲೇಖನದ ವಿಚಾರ ಅಲ್ಲಿರಲಿ. ನಾವೀಗ ಪ್ರತಿಭಟನೆಯ ವಿಚಾರವನ್ನು ಗಮನಿಸೋಣ. ಮುಸ್ಲಿಮರ ಮುಂದೆ ಯುದ್ಧದಂತಹ ಸಂದರ್ಭವಿದ್ದರೆ, ವೈರಿಗಳ ವಿರುದ್ಧ ಅವರು ಪ್ರತಿಕಾರಕ್ಕೆ ಸಿದ್ಧವಾದರೆ, ವೃದ್ಧರು, ಅಶಕ್ತರು, ದುರ್ಬಲರು, ಮಹಿಳೆಯರು, ಮಕ್ಕಳನ್ನು ವಧಿಸಬಾರದು, ಆಕ್ರಮಿಸಬಾರದು, ಮಠಗಳಲ್ಲಿ ಪ್ರಾರ್ಥನಾ ನಿರತರನ್ನು ಆಕ್ರಮಿಸಬಾರದು, ಜಾನುವಾರು, ಕೃಷಿ, ಫಲಭರಿತ ವೃಕ್ಷ ಇತ್ಯಾದಿಗಳನ್ನು ಹಾಳುಗೆಡಹಬಾರದೆಂಬ ಕಟ್ಟುನಿಟ್ಟಿನ ಆದೇಶ ಇಸ್ಲಾಮಿನಲ್ಲಿದೆ. ಇದು ಪ್ರತಿಭಟಿಸುವ ಮುಸ್ಲಿಮರಿಗೂ ಅನ್ವಯವಾಗುತ್ತದೆ. ಈ ಮೂಲಭೂತ ತಳಹದಿಯಲ್ಲಿ ದುಂಡಾವರ್ತಿ ವರ್ತನೆಗಳನ್ನೋ ಅಂತಹ ಪ್ರತಿಭಟನೆಯನ್ನೋ ಯಾವ ಮುಸ್ಲಿಮನಿಗೂ ಸಮರ್ಥಿಸಲು ಸಾಧ್ಯವಿಲ್ಲ. ಹೀಗಿರುವಾಗ ಮೂಲಭೂತವಾದಿಗಳೆಂದಾಗಿ ಮುಸ್ಲಿಮರು ಎಲ್ಲೆ ಮೀರುತ್ತಾರೆಂದು ಯೋಚಿಸುವ ಬದಲು ಮೂಲಭೂತವಾದಿಗಳ ಕೈಯಲ್ಲಿ ಮುಸ್ಲಿಮರ ನಾಯಕತ್ವವಿರುತ್ತಿದ್ದರೆ ಗಲಭೆಯೋ ದುಂಡಾವರ್ತಿ ವರ್ತನೆಯೋ ಅಸಹಿಷ್ಣುತೆಯೋ ಪ್ರದರ್ಶಿಸಲ್ಪಡುತ್ತಿರಲಿಲ್ಲ ಎಂದು ಅಭಿಪ್ರಾಯವನ್ನು ತಿದ್ದಿಕೊಳ್ಳುವ ಅಗತ್ಯವಿದೆ. ಈ ನಿಟ್ಟಿನಿಂದ ಯಾರಾದರೂ ಗಲಭೆಯಾಗುವ ಸಂದರ್ಭದಲ್ಲಿ ಅಥವಾ ಗಲಭೆಗೆ ಪ್ರಚೋದನೆ ನೀಡುವಂತಹ ಉತ್ಪ್ರೇಕ್ಷಿತ ಹೇಳಿಕೆಯನ್ನು ನೀಡಿದ್ದರೆ ಅಂಥವರನ್ನು ಮೂಲಭೂತವಾದಿಗಳೆಂದು ಅರ್ಥ ಮಾಡಿಕೊಳ್ಳುವುದು ಸರಿಯಲ್ಲ. ಇಂತಹವರನ್ನು ಮಾನದಂಡವಾಗಿಟ್ಟು ಇಸ್ಲಾಮನ್ನು ಮತ್ತು ಮುಸ್ಲಿಮರನ್ನು ಅರ್ಥೈಸುವುದು ಸರಿಯೂ ಅಲ್ಲ.

ಹಾಗಿದ್ದರೆ ಈಗ ಗಲಭೆ ಹೇಗಾಯಿತು? ದಿನೇಶ್ ಅಮೀನ್ ಮಟ್ಟು ಗುರುತಿಸಿರುವಂತೆ ಮುಸ್ಲಿಮರಲ್ಲಿ ಸಾಮೂಹಿಕ ನಾಯಕತ್ವದ ಅಭಾವವಷ್ಟೇ ಅಲ್ಲ, ಇಸ್ಲಾಮೀ ಆದರ್ಶವನ್ನು ಪಾಲಿಸುವುದರ ಕೊರತೆಯನ್ನು ಕೂಡಾ ನಾವು ಕಾರಣವೆಂದು ಗುರುತಿಸಬಹುದು. ಓರ್ವನಲ್ಲಿ ಧಾರ್ಮಿಕ ವಿವೇಕ ಜಾಗೃತವಾಗಬೇಕಾದರೆ ಅವನಿಗೆ ಸರಿಯಾದ ಇಸ್ಲಾಮೀ ಮೂಲಭೂತ ಶಿಕ್ಷಣ ಸಿಕ್ಕಿರಬೇಕು ಎಂಬುದು ಇಲ್ಲಿ ನಮೂದಿಸಬೇಕಾದ ಸುಸ್ಪಷ್ಟ ವಿಚಾರವಾಗಿದೆ. ಯಾಕೆಂದರೆ ನಾಯಕನೇ ಇದ್ದರೆ ಸಾಲದು, ಅನುಸರಿಸುವವರೂ ತಯಾರಾಗಬೇಕಲ್ಲ. ಅನುಸರಿಸುವವರೂ ಇದ್ದರೆ ಸಾಲದು, ನಾಯಕನಲ್ಲಿ ನೇತೃತ್ವದ ಹೊಣೆಗಾರಿಕೆ ಪ್ರಜ್ಞೆ, ಪ್ರಸಂಗಾವಧಾನತೆ ಮತ್ತು ಸಾಕಷ್ಟು ತಿಳುವಳಿಕೆಯೂ ಇರಬೇಕಾಗಿದೆ.

ಇಷ್ಟು ಹೇಳುವಾಗ ವ್ಯಾಪಕ ಟೀಕೆಗೊಳಗಾಗುವ ಮೂಲಭೂತವಾದಿ ಮತ್ತು ಪುರೋಹಿತಶಾಹಿ ಎಂಬೆರಡು ಪದಗಳನ್ನು ಕೂಡಾ ಚರ್ಚಿಸಬೇಕಾಗಿದೆ. ಮೂಲಭೂತವಾದಿ ಎಂಬುದು ಇಲ್ಲಿ ಈವರೆಗೂ ಚರ್ಚಿಸಿರುವ ಆಶಯಗಳೇ ಆಗಿವೆ. ಆದರೆ ಇಸ್ಲಾಮಿನಲ್ಲಿ ಪುರೋಹಿತಶಾಹಿ ಎಂಬ ಒಂದು ಪದ್ಧತಿಯೆಂಬುದು ಖಂಡಿತಾ ಇಲ್ಲ. ಹಾಗೆಂದು ಪುರೋಹಿತಶಾಹಿಯನ್ನು ಪ್ರದರ್ಶಿಸುವವರೇ ಇಲ್ಲವೆಂದರ್ಥವಲ್ಲ. ಪುರೋಹಿತವಾದ ಇಸ್ಲಾಮಿನ ವಿಧಾನವಲ್ಲ ಎಂಬುದು ಮಾತ್ರ ಖಚಿತ ವಿಚಾರವಾಗಿದೆ. ಈ ಅರ್ಥದಲ್ಲಿ ಮೂಲಭೂತವಾದಿಗಳಿಗೆ ತಸ್ಲೀಮಾರ ಕುರಿತು ಅಸಹನೆಯಿದೆ ಎಂದು ತರ್ಕಿಸುವುದು ಸರಿಯಲ್ಲ ಎಂದೆನ್ನಿಸುತ್ತದೆ. ಆದರೆ ತಸ್ಲೀಮಾ ಇಸ್ಲಾಮಿನ ಆಚರಣೆಯನ್ನು (ಪರ್ದಾವನ್ನು) ಮಾತ್ರ ಟೀಕಿಸಿದ್ದಲ್ಲ, ಅವರು ತನ್ನ ಲೇಖನದಲ್ಲಿ ಪ್ರವಾದಿಯವರನ್ನು ಅಂದರೆ ಮುಸ್ಲಿಮರ ಧಾರ್ಮಿಕ ಪ್ರತೀಕವನ್ನೇ ನಿಂದಿಸಿದ್ದಾರೆ ಎಂಬಂಶ ಗಮನಿಸಬೇಕಾಗಿದೆ.

ಹೀಗಿರುವಾಗ ವಿಚಾರವೊಂದನ್ನು ಒತ್ತಿ ನೀಡಿ ಇಲ್ಲಿ ಪ್ರತಿಪಾದಿಸಬೇಕಾಗುತ್ತದೆ. ತಸ್ಲೀಮಾ ಲೇಖನದ ಮೂಲಕ ಮಹಿಳಾ ವಿರೋಧಿ, ತನ್ನ ಸ್ವಾರ್ಥಕ್ಕಾಗಿ ಪರ್ದಾವನ್ನು ಆಚರಣೆಗೆ ತಂದರೆಂದಿತ್ಯಾದಿಯಾಗಿ ನಿಂದಿಸುವ ಅದೇ ಪ್ರವಾದಿಯನ್ನು ಮಹಿಳಾ ವಿಮೋಚಕನೆಂದೇ ಇತಿಹಾಸ ಗುರುತಿಸುತ್ತಿದೆ. ಅವರ ಪ್ರವಾದಿತ್ವಕ್ಕಿಂತ ಮುಂಚಿನಿಂದಲೂ ಅರಬರಲ್ಲಿ ಹೆಣ್ಮಕ್ಕಳು ಅವಮಾನವೆಂದು ಬಗೆದು, ಜೀವಂತವಾಗಿ ಹೂಳುವ ಸಂಪ್ರದಾಯವಿತ್ತು. ಅಂತಹವರಿಗೆ ಇದೇ ಪ್ರವಾದಿ 'ಹೆಣ್ಣು ಮಗಳು ಮೋಕ್ಷದ ಸಾಧನವಾಗಿದ್ದಾಳೆಂದು' ಹೇಳಿಕೊಟ್ಟರು. ಹೆಣ್ಣು ಮಗುವನ್ನು ಉತ್ತಮ ರೀತಿಯಿಂದ ಸಾಕಿ ಸಲಹಿ ವಿದ್ಯೆ, ಬುದ್ಧಿ ಕಲಿಸಿ ಮದುವೆ ಮಾಡಿಕೊಡುವವನಿಗೆ ಸ್ವರ್ಗದ ಸುವಾರ್ತೆಯನ್ನು ನೀಡಿದರು. ಅಂದು ಮಹಿಳೆಯರನ್ನು ವೇಶ್ಯಾವಾಟಿಕೆಗೆ ಬಳಸಲಾಗುತ್ತಿತ್ತು. ತಂದೆ ಮೃತನಾದರೆ ಮಲತಾಯಿಯನ್ನೇ ಮದುವೆಯಾಗುವ ಸಂಪ್ರದಾಯವಿತ್ತು. ವ್ಯಕ್ತಿಯೊಬ್ಬನು, ನಾನೆಲ್ಲವನ್ನು ಬಿಟ್ಟುಬಿಡಬಲ್ಲೆ ಪ್ರವಾದಿವರ್ಯರೇ(ಸ), ಆದರೆ ವ್ಯಭಿಚಾರಕ್ಕೆ ಮಾತ್ರ ಅನುಮತಿಸಬೇಕೆಂದಾಗ, ನೀನು ವ್ಯಭಿಚರಿಸುವವರು ಯಾರದೇ ತಾಯಿ, ಮಗಳು, ಸಹೋದರಿ, ಪತ್ನಿಯಾಗಿರಬಾರದೆಂದು ಆದೇಶಿಸುವ ಮೂಲಕ ಅವನ ವಿವೇಕವನ್ನು ಬಡಿದೆಬ್ಬಿಸಿದರು. ಮಹಿಳೆಯರಿಗೆ ಗೌರವ, ಸುರಕ್ಷೆಯನ್ನು (14ನೇ ಪುಟಕ್ಕೆ)

# 'ನಾರೇ ತಕ್ಬೀರ್' ಎನ್ನುತ್ತಾ ಮುಗಿ ಬಿದ್ದರು

**ಆಂದೋಲನದ ಹರಿಕಾರರು - 4**

**ನಿರೂಪಣೆ: ನೂರುಲ್ ಅಮೀನ್, ಪಕ್ಕಲಡ್ಕ**



ಸಭೆ ಆರಂಭವಾಯಿತು. ಹಮ್ದ್ ಸಲಾತ್ (ಸುತ್ತಿ ಸ್ತೋತ್ರ) ಮುಗಿದ ಬಳಿಕ ಕಾಸಿಮ್ ಸಾಹೇಬರು ವಿಷಯಕ್ಕೆ ಪ್ರವೇಶಿಸಬೇಕಷ್ಟೇ. ಗುಂಪು ಗುಂಪಾಗಿ ಯುವಕರ ತಂಡ ಟೇಪ್ ರೆಕಾರ್ಡರ್ ಹಿಡಿದುಕೊಂಡು ನಾಲ್ಕು ಕಡೆಗಳಿಂದಲೂ ಸುತ್ತುವರಿದರು- ಟೇಪ್ ರೆಕಾರ್ಡರ್‌ನಲ್ಲಿ ಅಶ್ಲೀಲ ಹಾಡನ್ನು ಜೋರಾಗಿ ಇಟ್ಟು ಸದ್ದುಗದ್ದಲದೊಂದಿಗೆ ನಮ್ಮ ಸಭೆಯ ಹೊರಗಡೆ ನೃತ್ಯ ಮಾಡಲು ಆರಂಭಿಸಿದರು. ಹಿರಿಯರೆಲ್ಲರೂ ಹೊರಬಂದು ಶಬ್ದ ಕಡಿಮೆ ಮಾಡಿರಿ. ಒಳಗೆ ಧಾರ್ಮಿಕ ಕಾರ್ಯಕ್ರಮ ನಡೆಯುತ್ತಿದೆ ಎಂದಾಗ ಅವರಲ್ಲಿ ಕೆಲವರು ನೀವು ಸುನ್ನತ್ ಜಮಾಅತ್ ವಿರೋಧಿಗಳು, ನಿಮ್ಮನ್ನು ಕಾರ್ಯಕ್ರಮ ನಡೆಸಲು ನಾವು ಬಿಡುವುದಿಲ್ಲವೆಂದು ಸಂಗೀತವನ್ನು ಇನ್ನೂ ಜೋರಾಗಿ ಇಟ್ಟರು. ಡಾ। ಸಾಬ್‌ರು ನಮ್ಮ ಪೈಕಿಯ ಯುವಕರನ್ನು ಸಮಾಧಾನ ಪಡಿಸುತ್ತಿದ್ದರು. ಒಂದು ಹಂತದಲ್ಲಿ ಕಿಡಿಗೇಡಿಗಳ ಕೀಟಲೆ ವಿಪರೀತವಾದಾಗ ನಾವು ಕಾರ್ಯಕ್ರಮ ರದ್ದುಪಡಿಸಿ ಅಲ್ಲಿಂದ ನಿರ್ಗಮಿಸುವ ತೀರ್ಮಾನಕ್ಕೆ ಬಂದೆವು. ತಾವು ಯಾವುದನ್ನು ಘೋಷಣೆ ಎಂದು ಕೂಗುದ್ದರೋ ಕನಿಷ್ಠ ಅದರ ಅರ್ಥ ತಿಳಿಯದ ಮುಗ್ಧ ಯುವಕರಾಗಿದ್ದರು ಅವರು. 'ನಾರೇ ತಕ್ಬೀರ್' ಎಂದು ಹೇಳಿ ನಾವು ಕೊಠಡಿಯಿಂದ ಹೊರಬರುತ್ತಿದ್ದಂತೆ ನಮ್ಮ ಮೇಲೆ ಮುಗಿಬಿದ್ದರು. ಎಲ್ಲವೂ ಪೂರ್ವಯೋಜಿತವೆಂದು ನಮಗೆ ಬಳಿಕ ಅರ್ಥವಾಯಿತು. ಧಾರ್ಮಿಕ ನಾಯಕತ್ವ, ಶ್ರೀಮಂತ ಜನರ ಕೈಗೊಂಬೆಗಳಾಗಿ ಮುಗ್ಧ ಯುವಕರು ಬಲಿಪಶುಗಳಾಗಿದ್ದರು. ಯಾವುದೇ ಯೋಚನೆ, ಚಿಂತನೆಗೆ ಅವಕಾಶ ಕೊಡದೆ, ಧಾರ್ಮಿಕ ಶಿಕ್ಷಣ, ಲೌಕಿಕ ಶಿಕ್ಷಣ ಅಥವಾ ಸಾಮಾನ್ಯ ಜ್ಞಾನ ಎಲ್ಲದರಿಂದಲೂ ವಂಚಿತರನ್ನಾಗಿಸಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಧಾರ್ಮಿಕ ವರ್ಗವು ಈ ಯುವಕರನ್ನು ಹೀನ ಕೆಲಸಕ್ಕೆ ಬಳಸಿತ್ತು. ಡಾ। ಸಾಬರು ಇಬಾದುರ್ರಹ್ಮಾನ್‌ನ ಗುಣ ವಿಶೇಷವನ್ನು ಜ್ಞಾಪಿಸಿದರು. ನಮ್ಮ ಸಹನೆಗೆ ಪುಷ್ಟಿ ದೊರೆಯಿತು. ಸ್ಕೂಟರ್ ಹಿಂಬದಿಯಲ್ಲಿ ವಕೀಲ್ ಸಾಬ್ ಕೂತಿದ್ದರು. ಗೌಸ್ ಕನಗಿರಿಯ ಟೋಪಿ ಕಿತ್ತು ಹಲ್ಲೆ ನಡೆಸಿದ ಪುಂಡು ಪೋಕರಿಗಳು ಬಳಿಕ ವಕೀಲ್ ಸಾಬ್‌ರ ಮೇಲೆ ಸೆಗಣಿ ಎರಚಿದರು. ಕೈ ತುಂಬಾ ಸೆಗಣಿಯನ್ನು ಹಿಡಿಕೊಂಡು ಸಿಕ್ಕಾಪಟ್ಟೆ ಎರಚುತ್ತಿದ್ದರು. ಇನ್ನೊಬ್ಬನಿಗೆ ಎರಚುವ ಮುನ್ನ ಆ ಮಲವನ್ನೇ ತಾನು ಕೈಯಲ್ಲಿ ಹಿಡಿಯುತ್ತಿದ್ದೇನೆಂಬ ಪ್ರಜ್ಞೆಯೂ ಇಲ್ಲದ ಸಮುದಾಯದ ಯುವಕರು. ಮನೆಯಂಗಳದಲ್ಲಿ ಸೆಗಣಿ ಸಾರಿಕೆ ಮಾಮೂಲಿಯಾಗಿದ್ದ ಕಾಲವದು. ಧಾರ್ಮಿಕ ವರ್ಗ ದುಆಗಳಿಗೆಂದು ಮನೆ ಮನೆಗೆ ಭೇಟಿ ನೀಡುವ ಸಂಪ್ರದಾಯವಿತ್ತು. ಆದರೂ ಮನೆಯ ಒಳ ಹೊರಗೆ ಸೆಗಣಿ ಸಾರುತ್ತಿದ್ದ ಸಮುದಾಯದ ಜನರನ್ನು ದೇವಚರರು ಮನೆಗೆ ಪ್ರವೇಶಿಸಲಾರರೆಂಬ ಕನಿಷ್ಠ ವಿಷಯವನ್ನು ತಿಳಿಸಲು ಹಿಂಜರಿಯುತ್ತಿದ್ದರು. ಜನರಿಗನುಗುಣವಾದ ಧರ್ಮ ಮತ್ತು ಸಾಹಿತ್ಯದ ಕಾಲದಲ್ಲಿ ಜಮಾಅತ್‌ನ ಸಾಹಿತ್ಯ ವಿಚಾರಗಳು ಸ್ಥಳೀಯವಾಗಿ ಕ್ರಾಂತಿಯೆಬ್ಬಿಸಿತು. ದೇವುಬಂದ್‌ನ ಮೌಲಾನ ಅಮೀರ್ ಉಸ್ಮಾನಿ ಜಮಾಅತನ್ನು ಇಷ್ಟಪಡುತ್ತಿದ್ದರು. ಅವರು ಲೇಖನಿಯ ಮೂಲಕ ಜಮಾಅತ್ ವಿರುದ್ಧದ ಫತ್ವಾಗಳಿಗೆ ಉತ್ತರಿಸುತ್ತಿದ್ದರು.

1965ರ ಭಾರತ-ಪಾಕ್ ಯುದ್ಧ. ಜಮಾಅತ್ ಮೇಲೆ ಸರಕಾರದ ವಿಶೇಷ ಕಣ್ಣು ಬಿತ್ತು. ಶೇಖ್ ಸಾಬ್, ಡಾ। ಅಹಮ್ಮದ್ ಸಾಬ್, ಸಿರಾಜುಲ್ ಹಸನ್ ಹೀಗೆ ಹಿರಿಯ ನಾಯಕರನ್ನೆಲ್ಲಾ ಹಿಡಿದು ಜೈಲಿನಲ್ಲಿರಿಸಿದರು. 6 ತಿಂಗಳ ಜೈಲು ವಾಸದ ಬಳಿಕ ಒಂದು ಮುಸ್ಸಂಜೆಯಲ್ಲಿ ಕುರ್‌ಆನ್ ಅಧ್ಯಯನ ತರಗತಿ ಡಾ। ಸಾಬ್‌ರ ಮನೆಯಲ್ಲಿ ನಡೆಯಿತು. ಡಾ। ಸಾಬರು ದರ್ಸ್ ನೀಡುತ್ತಾ ಹೀಗೆಂದರು, "ಮುಸಲ್ಮಾನನ ಮುಖಾರವಿಂದ ಕನಿಷ್ಠ ಪಕ್ಷ ಮುಸಲ್ಮಾನನಂತಿರಬೇಕು. ನಾಳೆ ಪ್ರವಾದಿಯನ್ನು ಭೇಟಿಯಾಗುವ ಇಚ್ಛೆಯಿರುವವನು ಕ್ಲೀನ್ ಶೇವ್‌ನೊಂದಿಗೆ (ಹೌಲುಲ್ ಕೌಸರ್‌ನಲ್ಲಿ) ಪ್ರವಾದಿಯೊಂದಿಗೆ ಹೇಗೆ ಭೇಟಿಯಾದಾನೋ ಎಂಬ ವಿಚಾರವು ನನ್ನನ್ನು ಚುಚ್ಚಿತು. ಡೈಲಿ ಶೇವ್‌ನ ಮನುಷ್ಯನಾಗಿದ್ದ ನಾನು ಅಂದಿನಿಂದ ಪ್ರವಾದಿ ಪ್ರೇಮದ ದ್ಯೋತಕವೆಂಬ ನೆಲೆಯಲ್ಲಿ ಗಡ್ಡ ಬಿಡಲು ತೀರ್ಮಾನಿಸಿದೆ. (ಮುಂದುವರಿಯುವುದು)

# ಅಪ್ಪಾ; ದೇವನಿಂದ ಮಳೆ ನಮ್ಮನ್ನು ರಕ್ಷಿಸೀತೆ?

**ಅಬೂ ಫಾತಿಮಾ ಮವದ್ದ**



ಪ್ರತೀ ಶುಕ್ರವಾರ ಮಧ್ಯಾಹ್ನ ಜುಮಾ ನಮಾಝಿನ ಬಳಿಕ ಮಸೀದಿಯ ಇಮಾಮರು ಹಾಗೂ ಅವರ ಹನ್ನೊಂದು ವರ್ಷದ ಮಗ ನಗರಕ್ಕೆ ಹೋಗಿ ತಮ್ಮ ಕೈಯಲ್ಲಿದ್ದ ಇಸ್ಲಾಮೀ ಕೃತಿಗಳನ್ನು ಜನರಿಗೆ ಹಂಚಿ ಅವರಿಗೆ ಇಸ್ಲಾಮಿನ ಸಂದೇಶವನ್ನು ಮುಟ್ಟಿಸುವುದು ರೂಢಿಯಾಗಿತ್ತು. ಹೀಗೆ ಒಂದು ದಿನ ಜುಮಾ ನಮಾಝಿನ ಬಳಿಕ ಅವರು ರೂಢಿಯಂತೆ ಪುಸ್ತಕಗಳನ್ನು ಹಿಡಿದು ಹೊರಡಬೇಕು ಎನ್ನುವಷ್ಟರಲ್ಲಿ ಹೊರಗಿನಿಂದ ಶೀತಗಾಳಿ, ಸಾಲದ್ದಕ್ಕೆ ಜೋರಾಗಿ ಮಳೆಯೂ ಸುರಿಯಲಾರಂಭಿಸಿತು. ಇಮಾಮರ ಮಗ ಮಳೆಯ ನೀರು ತಾಗಬಾರದೆಂದು ಭಾವಿಸಿ ಕೈಯಲ್ಲಿದ್ದ ಪುಸ್ತಕಗಳನ್ನು ಅಂಗಿಯ ಒಳಗೆ ತುರುಕಿಸಿ, 'ನಾನು ರೆಡಿ ಹೊರಡುವ' ಎನ್ನುತ್ತಾನೆ. ಎಲ್ಲಿಗೆ ಎಂದು ತಂದೆ ಪ್ರಶ್ನಿಸುತ್ತಾರೆ. "ಅಪ್ಪಾ! ಇವತ್ತು ಇಸ್ಲಾಮೀ ಕೃತಿಗಳನ್ನು ವಿತರಿಸುವ ಸಮಯ." ತಂದೆ ಹೇಳುತ್ತಾರೆ, "ಇವತ್ತು ಹೊರಗಡೆ ತುಂಬಾ ಚಳಿ ಇದೆ. ಅದೂ ಅಲ್ಲದೇ ಮಳೆ ಕೂಡ ಬರುತ್ತದೆ. ಆದುದರಿಂದ ಇವತ್ತು ಹೋಗುವುದು ಸ್ವಲ್ಪ ಅಪಾಯಕಾರಿ." ಆತ ಪ್ರಶ್ನಿಸುತ್ತಾನೆ, "ಅಪ್ಪಾ! ಜನರು ನರಕದ ಕಡೆಗೆ ಧಾವಿಸುತ್ತಿರುವಾಗ ನಮಗೆ ಈ ಮಳೆಯ ಕಾರಣ ನೀಡಿ ದೇವನಿಂದ ತಪ್ಪಿಸಿಕೊಳ್ಳಲು ಸಾಧ್ಯವೇ?" ತಂದೆ ತುಸು ಹೊತ್ತು ಮೌನವಾಗಿ, "ನಿಜ. ಆದರೆ ನಾನು ಮುದುಕ ಈ ವಾತಾವರಣದಲ್ಲಿ ಹೊರಗಡೆ ಹೋಗುವುದು ನನ್ನಿಂದ ಸಾಧ್ಯವಿಲ್ಲ. ಆದರೆ ನೀನಗೆ ಹೋಗಬಹುದು" ಎನ್ನುತ್ತಾರೆ. ತುಂಬಾ ಜಾಗ್ರತೆ ವಹಿಸು ಎಂದು ಎಚ್ಚರಿಸುತ್ತಾರೆ.

ಆತ ನಗರದ ಪ್ರತಿಯೊಂದು ಮನೆಯವರನ್ನು ಭೇಟಿಯಾಗಿ ಅವರಿಗೆ ಇಸ್ಲಾಮೀ ಕೃತಿಗಳನ್ನು ಹಸ್ತಾಂತರಿಸುತ್ತಾನೆ. ಕೊನೆಗೆ ಒಂದು ಪುಸ್ತಕ ಮಾತ್ರ ಉಳಿಯುತ್ತದೆ. ಮಳೆಯ ತೀವ್ರತೆ ಹೆಚ್ಚಾದಾಗ ಅಂಗಡಿಯ ಬದಿಯಲ್ಲಿ ನಿಲ್ಲುತ್ತಾನೆ. ಕೊನೆಗೆ ಉಳಿದಿರುವ ಒಂದು ಕೃತಿಯನ್ನು ಯಾರಿಗೆ ಕೊಡುವುದೆಂದು ಅಲೋಚಿಸುತ್ತಿದ್ದಾಗ ದೂರದಲ್ಲೊಂದು ಮನೆ ಕಾಣಿಸುತ್ತದೆ. ಮನೆಗೆ ಸಮೀಪಿಸಿ ಕರೆಗಂಟೆ ಬಾರಿಸುತ್ತಾನೆ. ಬಾಗಿಲು ತೆರೆಯಲಿಲ್ಲ. ಪುನಃ ಪ್ರಯತ್ನಿಸುತ್ತಾನೆ. ಬಾಗಿಲು ತಟ್ಟುತ್ತಾನೆ. ಆದರೂ ಫಲಿತಾಂಶ ಶೂನ್ಯ. ಆತ ಪ್ರಯತ್ನ ನಿಲ್ಲಿಸುವುದಿಲ್ಲ. ಕೊನೆಗೆ ಬಾಗಿಲು ಮೆಲ್ಲನೆ ತೆರೆಯುತ್ತದೆ. ಒಳಗೆ ಓರ್ವ ವೃದ್ಧೆ ಕಾಣಿಸುತ್ತಾಳೆ. ಹುಡುಗ ಉತ್ಸಾಹದಿಂದ "ಮೇಡಂ, ನನ್ನಿಂದ ನಿಮಗೆ ತೊಂದರೆಯಾಗಿದ್ದರೆ ಕ್ಷಮಿಸಬೇಕು. ಬಾಗಿಲು ತಟ್ಟಿದ್ದೇಕೆಂದರೆ ಅಲ್ಲಾಹನು ನಿಮ್ಮನ್ನು ಬಹಳವಾಗಿ ಪ್ರೀತಿಸುವವನೂ, ಪರಿಪಾಲಿಸುವನೂ ಆಗಿರುತ್ತಾನೆ ಎಂದು ತಿಳಿಸುವುದಕ್ಕೆ. ಈ ಕೃತಿಯನ್ನು ಓದಿದರೆ ನಿಮಗೆ ಇನ್ನಷ್ಟು ಮಾಹಿತಿ ಸಿಗಬಹುದು" ಎಂದು ಹೇಳಿ ತನ್ನ ಕೈಯಲ್ಲಿದ್ದ ಕೃತಿಯನ್ನು ನೀಡಿ, ಹೊರಟು ಹೋಗುತ್ತಾನೆ.

ಮುಂದಿನ ಶುಕ್ರವಾರ ಜುಮಾ ನಮಾಝಿನ ಬಳಿಕ, ಇಮಾಮರು ಭಾಷಣ ಮಾಡುತ್ತಾ, ಯಾರಿಗೆ ಏನಾದರೂ ಹೇಳಲಿಕ್ಕಿದ್ದರೆ ಹೇಳ ಬಹುದು ಎಂದು ಹೇಳುತ್ತಾರೆ. ಆಗ ಒಂದು ಕ್ಷೀಣ ಧ್ವನಿ ಕೇಳುತ್ತದೆ. ಅದು ಓರ್ವ ವೃದ್ಧೆಯದ್ದಾಗಿತ್ತು. ಆ ಮಹಿಳೆ ತನ್ನ ಮಾತಿನ ಪ್ರಾರಂಭದಲ್ಲಿಯೇ, "ಬಹುಶಃ ಇಲ್ಲಿ ನೆರೆದಿರುವ ಜನರಿಗೆ ನನ್ನ ಪರಿಚಯ ಇರಲಿಕ್ಕಿಲ್ಲ. ಅದೇ ರೀತಿ ನನಗೂ ಇಲ್ಲಿ ಯಾರ ಪರಿಚಯವೂ ಇಲ್ಲ. ನಾನು ಇಲ್ಲಿಗೆ ಬಂದಿರುವುದು ಇದೇ ಪ್ರಥಮಬಾರಿ- ಇದೇ ಕಳೆದ ಶುಕ್ರವಾರ ನಾನು ಮುಸ್ಲಿಮಳಾಗಿರಲಿಲ್ಲ. ಆದರೆ ಇಂದು ನಾನು ಇಲ್ಲಿಗೆ ಬಂದಿರುವುದು ಮುಸ್ಲಿಮಳಾಗಿ. ಕೆಲವು ವರ್ಷಗಳ ಹಿಂದೆ ನನ್ನ ಪತಿ ಸತ್ತರು. ಆಗ ನಾನು ಸಂಪೂರ್ಣವಾಗಿ ಏಕಾಂಗಿಯಾದೆ. ನನಗೆ ನನ್ನವರು ಎಂದು ಹೇಳಲು ಈ ಜಗತ್ತಿನಲ್ಲಿ ಯಾರೂ ಇಲ್ಲ. ನಾನು ಸಂಪೂರ್ಣ ನಿರಾಶಳಾದೆ. ನನಗೆ ಜೀವನ ಸಾಗಿಸುವುದೇ ಕಷ್ಟಕರವಾಯಿತು. ಇದೇ ಕಳೆದ ಶುಕ್ರವಾರ ನಾನು ಆತ್ಮಹತ್ಯೆ ಮಾಡಲು ಯೋಚಿಸಿ, ಹಗ್ಗಕ್ಕೆ ಕೊರಳೊಡ್ಡಲು ಮುಂದಾಗುವಷ್ಟರಲ್ಲಿ ಮನೆಯ ಕರೆಗಂಟೆ ಬಾರಿಸಿತು. ಆಗ ನಾನು ವಿಚಲಿತಳಾದೆ. ಬೆಲ್ ಬಾರಿಸಿದವರು ಹೋದ ನಂತರ ನೇಣಿಗೆ ಶರಣಾಗುವ ಎಂದು ಭಾವಿಸಿ ಸ್ವಲ್ಪ ಹೊತ್ತು ಕಾದುನಿಂತೆ. ಬೆಲ್ಲು ಬಾರಿಸುವುದು ನಿಲ್ಲಲಿಲ್ಲ. ಕೊನೆಗೆ ನನ್ನಲ್ಲಿ ಸ್ವಲ್ಪ ಕಸಿವಿಸಿಯುಂಟಾಯಿತು. ನಾನು ಬಾಗಿಲು ತೆರೆಯುತ್ತಿದ್ದಂತೆ ಮನೆಯ ಛಾವಡಿಯಲ್ಲಿ ನಾನು ಇಷ್ಟರ ತನಕ ಕಂಡಿರದ ದೇವಚರನಂತಿರುವ ಓರ್ವ ಬಾಲಕನನ್ನು ಕಂಡೆ. ಆತನ ಮಾತುಗಳು ಸಾಯಲು ಧುಮುಕಿದ ನನ್ನ ಹೃದಯಕ್ಕೆ ಮರುಜೀವ ನೀಡಿತು. ಅದರ ನಂತರ ಇಸ್ಲಾಮೀ ಕೃತಿಯೊಂದನ್ನು ಕೊಟ್ಟ. ಅದೀಗ ನನ್ನ ಕೈಯಲ್ಲಿಯೇ ಇದೆ. ನಂತರ ನನ್ನ ಪಾಲಿನ ಆ ದೇವಚರ, ಬಿರುಗಾಳಿ ಹಾಗೂ ಮಳೆಯ ನಡುವೆ ಮರೆಯಾದ. ಬಳಿಕ ನಾನು ಆ ಕೃತಿ ಓದಿದೆ. (12ನೇ ಪುಟಕ್ಕೆ)

# ಟೆಸ್ಟ್ ಟ್ಯೂಬ್ ಸರಿಯೇ?

❍ ಶಹೀರಾ, ಮಂಗಳೂರು

● ನನ್ನ ಸಂಬಂಧಿಕರೊಬ್ಬರಿಗೆ ಮದುವೆಯಾಗಿ ಒಂದೆರಡು ವರ್ಷಗಳಾದುವು. ಮಕ್ಕಳಾಗಲಿಲ್ಲ. ದಂಪತಿಗಳು ವೈದ್ಯರನ್ನು ಸಂಪರ್ಕಿಸಿದರು. ವೈದ್ಯರು ವಿವಿಧ ಪರೀಕ್ಷೆಗಳನ್ನು ನಡೆಸಿದ ಬಳಿಕ ನಿಮಗೆ ಮಕ್ಕಳಾಗಲಿಕ್ಕಿಲ್ಲವೆಂದು ತೀರ್ಪು ನೀಡಿದರು. ಗರ್ಭಕೋಶದ ನಾಳ ಮುಚ್ಚಿರುವುದೇ ಇದಕ್ಕೆ ಕಾರಣ. ಆದರೆ 'ಟೆಸ್ಟ್ ಟ್ಯೂಬ್ ಬೇಬಿ'ಯ ವಿಧಾನ ಬಳಸಿ ಗರ್ಭಧಾರಣೆ ಮಾಡಬಹುದೆಂದು ವೈದ್ಯರು ತಿಳಿಸಿದರಂತೆ. ಈಗ ನನ್ನ ಪ್ರಶ್ನೆಯೇನೆಂದರೆ ಈ ರೀತಿ ಟೆಸ್ಟ್ ಟ್ಯೂಬ್ (ಪ್ರನಾಳ) ಮೂಲಕ ಗರ್ಭಧಾರಣೆ ನಡೆಸುವುದು ಮತ್ತು ಮಕ್ಕಳನ್ನು ಪಡೆಯುವುದು ಧರ್ಮಸಮ್ಮತವೇ? ದಯವಿಟ್ಟು ಸ್ಪಷ್ಟ ಉತ್ತರ ನೀಡಿರಿ.

**ಕೇಳಿದಿರಾ? ಕೇಳಿ**
**ಮುಜೀಬ್**

❍ ಅಲ್ಲಾಹನು ಸಂತಾನಾಭಿವೃದ್ಧಿಗೆ ನಿಕಾಹ್‌ನ ಧರ್ಮಸಮ್ಮತ ಮಾರ್ಗವನ್ನು ನಿಶ್ಚಯಿಸಿದ್ದಾನೆ. ಪುರುಷ ಮತ್ತು ಸ್ತ್ರೀಯ ಮಧ್ಯೆ ಅದರ ಮೂಲಕ ಒಂದು ವಿಶಿಷ್ಟ ಸಂಬಂಧವುಂಟಾಗುತ್ತದೆ. ಅದರಿಂದ ಮಕ್ಕಳು ಜನಿಸುತ್ತಾರೆ. ಮಕ್ಕಳಾಗಬೇಕೆಂಬ ಅಭಿಲಾಷೆಯು ದಂಪತಿಗಳಲ್ಲಿ ಸ್ವಾಭಾವಿಕವಾಗಿದೆ. ಪವಿತ್ರ ಕುರ್‌ಆನ್ ಹೇಳುತ್ತದೆ, ಜನರಿಗೆ ಇಂದ್ರಿಯಾಸಕ್ತಿಗಳಾದ-ಸ್ತ್ರೀಯರು, ಮಕ್ಕಳು, ಚಿನ್ನ ಬೆಳ್ಳಿಗಳ ರಾಶಿ, ಆಯ್ದ ಕುದುರೆಗಳು, ಜಾನುವಾರುಗಳು ಮತ್ತು ಕೃಷಿ ಭೂಮಿ-ಇವುಗಳನ್ನು ಆತ್ಯಾಕರ್ಷಕವಾಗಿ ಮಾಡಲಾಗಿದೆ. (ಆಲಿ ಇಮ್ರಾನ್: 14) ಅದೇ ರೀತಿ ಸೊತ್ತು-ಸಂತಾನಗಳು ಇಹಲೋಕ ಜೀವನದ ಸೊಬಗೆಂದೂ ಹೇಳಲಾಗಿದೆ. (ಅಲ್ ಕಹ್ಫ್: 46) ಇವೆಲ್ಲ ಅಲ್ಲಾಹನ ಅನುಗ್ರಹವೆಂದು ಇನ್ನೊಂದು ಕಡೆ ಹೇಳಲಾಗಿದೆ. "ನಿಮಗೆ ಸಂಪತ್ತು ಮತ್ತು ಸಂತತಿಗಳಿಂದ ನೆರವಾದೆವು." (ಬನೀ ಇಸ್ರಾಈಲ್: 6)

ಕೆಲವರಲ್ಲಿ ಕೇವಲ ಗಂಡು ಹುಟ್ಟುವುದು, ಕೆಲವರಲ್ಲಿ ಕೇವಲ ಹೆಣ್ಣು ಹುಟ್ಟುವುದು, ಇನ್ನು ಕೆಲವರಲ್ಲಿ ಗಂಡು, ಹೆಣ್ಣು ಎರಡೂ ಹುಟ್ಟುವುದು ಮತ್ತು ಕೆಲವರಿಗೆ ಮಕ್ಕಳೇ ಆಗದಿರುವುದು ಅಲ್ಲಾಹನ ಸೃಷ್ಟಿ ವೈಚಿತ್ರ್ಯಗಳಲ್ಲಿ ಸೇರಿದೆ. "ಅಲ್ಲಾಹನು ಭೂಮಿ-ಆಕಾಶಗಳ ಪ್ರಭುತ್ವದ ಒಡೆಯನು. ತಾನಿಚ್ಛಿಸಿದ್ದನ್ನು ಅವನು ಸೃಷ್ಟಿಸುತ್ತಾನೆ. ತಾನಿಚ್ಛಿಸಿದವರಿಗೆ ಹೆಣ್ಣು ಮಕ್ಕಳನ್ನು ಕೊಡುತ್ತಾನೆ. ತಾನಿಚ್ಛಿಸಿದವರಿಗೆ ಗಂಡು ಮಕ್ಕಳನ್ನು ಕೊಡುತ್ತಾನೆ. ತಾನಿಚ್ಛಿಸಿದವರಿಗೆ ಗಂಡು-ಹೆಣ್ಣುಗಳೆರಡನ್ನೂ ಸೇರಿಸಿ ಕೊಡುತ್ತಾನೆ. ತಾನಿಚ್ಛಿಸಿದವರನ್ನು ಬಂಜೆಯಾಗಿ ಮಾಡುತ್ತಾನೆ. ಅವನು ಸರ್ವಜ್ಞನೂ ಸರ್ವಸಮರ್ಥನೂ ಆಗಿದ್ದಾನೆ." (ಅಶ್ಶೂರಾ: 49-50)

ಗಂಡು-ಹೆಣ್ಣುಗಳ ಅಂಡಾಣು ಬೀಜಾಣುಗಳ ಗರ್ಭಕೋಶಕ್ಕೆ ತಾಗಿರುವ ನಾಳದಲ್ಲಿ ಒಟ್ಟಾಗಿ ಅದು ಅಲ್ಲಿಂದ ಗರ್ಭಕೋಶಕ್ಕೆ ಹೋಗುತ್ತದೆ. ಅದು ಅಲ್ಲಿ ಒಂದು ಕೋಶವಾಗಿ ಬೆಳೆಯತೊಡಗುತ್ತದೆ. ಇದನ್ನೇ ಕುರ್‌ಆನ್ ಹೀಗೆ ಹೇಳುತ್ತದೆ, "ನಾವು ಮಾನವರನ್ನು ಒಂದು ಸಮ್ಮಿಶ್ರ ವೀರ್ಯದಿಂದ ಸೃಷ್ಟಿಸಿದೆವು." (ಅದ್ದಹ್ರ್: 2)

ಈ ಸ್ವಾಭಾವಿಕ ವಿಧಾನದಲ್ಲಿ ಏನಾದರೂ ನ್ಯೂನತೆಯುಂಟಾದರೆ ಅಥವಾ ಎಲ್ಲಾದರೂ ಏನಾದರೂ ಅಡ್ಡಿಯುಂಟಾದರೆ ಗರ್ಭಧಾರಣೆಯಾಗುವುದಿಲ್ಲ. ಇದನ್ನೇ ಬಂಜೆತನವೆನ್ನಲಾಗುತ್ತದೆ. ಇದು ಪುರುಷರಿಗೂ ಅನ್ವಯವಾಗುತ್ತದೆ. ಉದಾ: ಪುರುಷನಲ್ಲಿ ಸಂಭೋಗ ಶಕ್ತಿಯ ಕೊರತೆಯಿಂದಾಗಿ ಸಂಸರ್ಗ ನಡೆಸಲಾಗದಿರುವುದು, ಅವನ ಬೀಜಾಣುವಿನ ಪ್ರಮಾಣ ಕಡಿಮೆಯಿರುವುದು ಮತ್ತು ಅವುಗಳ ಚಲನೆ ದುರ್ಬಲವಾಗಿರುವುದು, ಬೀಜಾಣುಗಳನ್ನು ಹೊರ ತರುವಂತಹ ನಾಳವು ಮುಚ್ಚಿಕೊಂಡಿರುವುದು ಇತ್ಯಾದಿ. ಅದೇ ರೀತಿ ಈ ಬಂಜೆತನವು ಸ್ತ್ರೀಯರಲ್ಲಿಯೂ ಇರುತ್ತದೆ. ಉದಾ: ಗರ್ಭಕೋಶದ ಯಾವುದಾದರೂ ನ್ಯೂನತೆಯಿಂದಾಗಿ ಅಂಡಾಣುಗಳು ಹೊರಡದಿರುವುದು, Fallopion ನಾಳ ಮುಚ್ಚಿಕೊಂಡಿರುವುದು ಅಥವಾ ಯಾವುದಾದರೂ ಕಾಯಿಲೆಯಿಂದಾಗಿ ಗರ್ಭಧಾರಣೆಗೆ ಶಕ್ತಿಯಿಲ್ಲದಿರುವುದು.

ಬಂಜೆತನವು ಒಂದು ರೋಗವಾಗಿದೆ. ಇತರ ರೋಗಗಳಿಗೆ ಚಿಕಿತ್ಸೆ ಮಾಡುವಂತೆ ಅದರ ನಿವಾರಣೆಗಾಗಿಯೂ ಚಿಕಿತ್ಸೆ ನಡೆಸಬಹುದಾಗಿದೆ. ಪ್ರವಾದಿ(ಸ) ಹೇಳಿರುವರು, ಅಲ್ಲಾಹನ ದಾಸರೇ! ರೋಗಕ್ಕೆ ಚಿಕಿತ್ಸೆ ನಡೆಸಿರಿ. ಯಾವುದೇ ರೋಗಕ್ಕೆ ಔಷಧಿಯನ್ನು ಸೃಷ್ಟಿಸದೆ ಇಲ್ಲ. (ಅಬೂದಾವೂದ್, ತಿರ್ಮಿದಿ)

ಸ್ವಾಭಾವಿಕವಾಗಿ ಪತಿ-ಪತ್ನಿಯರ ಸಂಸರ್ಗದಿಂದ ಗರ್ಭಧಾರಣೆಯಾಗುವುದಿಲ್ಲವೆಂದಾದರೆ ಕೃತಕ ವಿಧಾನವನ್ನು ಅಳವಡಿಸುವುದರಲ್ಲಿ ಅಭ್ಯಂತರವಿಲ್ಲ. ಈ ಕ್ರಿಯೆಗೆ ಟೆಸ್ಟ್ ಟ್ಯೂಬ್ ಕೃಷಿ (Invitro Fertilization) ಎನ್ನಲಾಗುತ್ತದೆ. ಅಂದರೆ ಪುರುಷನ ವೀರ್ಯ ಮತ್ತು ಸ್ತ್ರೀಯ ಅಂಡಾಣುಗಳನ್ನು ತೆಗೆದು ಪ್ರಣಾಳದಲ್ಲಿ ಹಾಕಿ ಬೆಳೆಸಲಾಗುತ್ತದೆ. ಈ ಕೃತಕ ವಿಧಾನದಿಂದ ಓರ್ವ ಪುರುಷನ ವೀರ್ಯ ಮತ್ತು ಆತನದೇ ಪತ್ನಿಯ ಅಂಡಾಣುವನ್ನು ಟೆಸ್ಟ್ ಟ್ಯೂಬ್‌ನಲ್ಲಿ ಜೋಡಿಸಿ ಆಕೆಯ ಗರ್ಭದಲ್ಲಿಟ್ಟು ಬೆಳೆಸುವುದಾದರೆ, ಹಾಗೆ ಮಾಡುವುದು ಧರ್ಮಸಮ್ಮತವಾಗಿದೆ. ಶರೀಅತ್ ಪ್ರಕಾರ ಆಕ್ಷೇಪಾರ್ಹವಲ್ಲ.

ಇಂದು ಪಾಶ್ಚಾತ್ಯ ಜಗತ್ತಿನಲ್ಲಿ ಕೃತಕ ಗರ್ಭಧಾರಣೆಯ ಅನೇಕ ವಿಧಾನಗಳು ಜಾರಿಯಲ್ಲಿವೆ. ಪುರುಷನು ಸಂಪೂರ್ಣ ನಪುಂಸಕನಾದರೆ ಅಥವಾ ಆತನ ಸಂತಾನೋತ್ಪತ್ತಿಯ ವೀರ್ಯವು ಶಕ್ತಿ ಕಳಕೊಂಡರೆ, ಇನ್ನೊಬ್ಬನ ವೀರ್ಯದ ಮೂಲಕ ಸ್ತ್ರೀಗೆ ಗರ್ಭ ಧರಿಸುವಂತೆ ಮಾಡಲಾಗುತ್ತದೆ. ಅದಕ್ಕಾಗಿ ವೀರ್ಯ ಶೇಖರಣೆಯ ದೊಡ್ಡ ದೊಡ್ಡ ಕೇಂದ್ರಗಳು ಕೆಲಸ ಮಾಡುತ್ತಿವೆ. ಅದೇ ರೀತಿ ಓರ್ವ ಸ್ತ್ರೀಯ ಗರ್ಭಕೋಶದಿಂದ ಅಂಡಾಣು ಹೊರಡದಿದ್ದರೆ ಇತರ ಸ್ತ್ರೀಯ ಅಂಡಾಣುವನ್ನು ಹೊಗಿಸಲಾಗುತ್ತದೆ. ಓರ್ವ ಪುರುಷನ ವೀರ್ಯ ಸರಿಯಾಗಿದೆ, ಪತ್ನಿಯ ಅಂಡಾಣುವೂ ಹೊರಡುತ್ತದೆ. ಆದರೆ ಗರ್ಭಕೋಶದ ಯಾವುದೋ ಕಾಯಿಲೆಯಿಂದಾಗಿ ಗರ್ಭಧಾರಣೆ ಸಾಧ್ಯವಾಗದಿದ್ದರೆ ಬೇರೊಬ್ಬ ಸ್ತ್ರೀಯ ಗರ್ಭಕೋಶವನ್ನು ಬಾಡಿಗೆಗೆ ಪಡೆಯಲಾಗುತ್ತದೆ. ಇಸ್ಲಾಮಿ ಶರೀಅತ್‌ನ ಪ್ರಕಾರ ಈ ಎಲ್ಲ ವಿಧಾನಗಳು ತಪ್ಪು, ಧರ್ಮಬಾಹಿರ. ಏಕೆಂದರೆ ಇದರಿಂದ ಸಂತಾನ ಪರಂಪರೆಯ ಹಾಗೂ ನಿಕಾಹ್‌ನ ವ್ಯವಸ್ಥೆಯು ಕೆಟ್ಟು ಹೋಗುತ್ತದೆ. ಇಸ್ಲಾಮ್ ಸಂತಾನ ಪರಂಪರೆಯನ್ನು ಕಾಪಾಡಲು ಒತ್ತುಕೊಡುತ್ತದೆ. ಒಬ್ಬ ವ್ಯಕ್ತಿಯ ಸಂತಾನವು ಸಂದೇಹಾಸ್ಪದವಾಗತಕ್ಕ ಎಲ್ಲ ವಿಧಾನಗಳನ್ನು ಇಸ್ಲಾಮ್ ಹರಾಮ್ ಎಂದು ಸಾರುತ್ತದೆ.

ನೀವು ಸನ್ಮಾರ್ಗವನ್ನು ಮೆಚ್ಚಿದರೆ
ಇತರರಿಗೂ ತಿಳಿಸಿ,
ಮೆಚ್ಚದಿದ್ದರೆ ನಮಗೆ ತಿಳಿಸಿ.

# ಕಂತು, ಬಡ್ಡಿಗೆ ಸಮಾನವೇ?

ಅಶೀರುದ್ದೀನ್, ಕಾಸರಗೋಡು

● ಕಂತು ತೆಗೆಯಲು ಇಸ್ಲಾಮ್ ಅನುಮತಿಸುತ್ತದೆಯೇ? ಅದು ಬಡ್ಡಿಗೆ ಸಮಾನವೇ? ತಿಳಿಸಿ.

❍ ಪ್ರಶ್ನೆ ಸ್ಪಷ್ಟವಾಗಿಲ್ಲ. ಕಂತು ತೆಗೆಯುವುದು ಅಂದರೆ ಒಂದು ಸರಕನ್ನು ಒಮ್ಮೆಲೆ ಹಣ ಪಾವತಿಸಿ ಕೊಳ್ಳುವ ಬದಲು ಕಂತುಗಳಲ್ಲಿ ಪಾವತಿಸಿ ಕೊಂಡುಕೊಳ್ಳಬಹುದೇ ಎಂದಾಗಿದ್ದರೆ ಅದಕ್ಕೆ ಇಸ್ಲಾಮ್ ಅನುಮತಿಸುತ್ತದೆ. ಇದರಲ್ಲಿ ಕಂತುಗಳಲ್ಲಿ ಪಾವತಿಸುವಾಗ ಒಮ್ಮೆಲೇ ನಗದಿಗೆ ಖರೀದಿಸುವಾಗ ಇರುವ ದರಕ್ಕಿಂತ ಅಧಿಕ ಪಾವತಿಸಬೇಕಾಗುತ್ತದೆ. ಇದನ್ನೂ ಶರೀಅತ್ ಅನುಮತಿಸುತ್ತದೆ. ಇದರಲ್ಲಿ ಕೊಡಲಾಗುವ ಹೆಚ್ಚುವರಿ ಹಣವು ಬಡ್ಡಿಯಾಗುವುದಿಲ್ಲವೆಂದು ವಿದ್ವಾಂಸರು ಹೇಳುತ್ತಾರೆ.

ಯಾವುದೇ ಸರಕನ್ನು ಸಂಪೂರ್ಣ ನಗದಿಗೆ ಒಮ್ಮೆಲೇ ಖರೀದಿಸಲು ಎಲ್ಲರಿಂದಲೂ ಸಾಧ್ಯವಿಲ್ಲದ ಮಾತು. ಆದುದರಿಂದ ಮಾರುಕಟ್ಟೆಯಲ್ಲಿ ಕಂತಿನಂತೆ ಪಾವತಿಸುವ ಪದ್ಧತಿಯಿದೆ. ಇದರಿಂದ ಮಾರಾಟಗಾರನಿಗೂ ಗ್ರಾಹಕನಿಗೂ ಪ್ರಯೋಜನಗಳಿವೆ. ಮಾರಾಟಗಾರನಿಗೆ ತನ್ನ ಸರಕು ಬಿಕರಿಯಾಗುತ್ತದೆ. ಅದೇ ವೇಳೆ ಖರೀದಿದಾರನಿಗೆ ಪಾವತಿಸಲು ಅವಧಿ ಸಿಗುತ್ತದೆ. ಈ ರೀತಿ ಖರೀದಿಸುವಾಗ ಅದಕ್ಕೆ ಪಾವತಿಸಲಾಗುವ ಹೆಚ್ಚುವರಿ ಹಣವು ಖರೀದಿದಾರನಿಗೆ ಅವಧಿ ಸಿಕ್ಕಿದ್ದಕ್ಕಾಗಿ ಸಿಗುವ ಸೌಲಭ್ಯವಾಗಿದೆ. ಅದೇ ವೇಳೆ ತನ್ನ ಸರಕು ನಗದಿ ಮಾರಾಟ ಮಾಡಿದಾಗ ಮಾರಾಟಗಾರನಿಗೆ ಇನ್ನಷ್ಟು ಸರಕು ಖರೀದಿಸಿ ಮಾರಾಟ ಮಾಡಬಹುದು. ಅದರಿಂದ ಅವನಿಗೆ ಲಾಭವಾಗುತ್ತದಾದರೂ ಹಾಗೆ ಒಮ್ಮೆಲೇ ಖರೀದಿಸುವ ಗಿರಾಕಿಗಳು ಸಿಗುವುದು ಕಷ್ಟ. ಆದ್ದರಿಂದ ಕಂತಿನಲ್ಲಿ ನೀಡುವಾಗ ನಿರ್ದಿಷ್ಟ ಅವಧಿಗಾಗಿ ತನ್ನ ಲಾಭಾಂಶವನ್ನು ಹೆಚ್ಚಿಸುತ್ತಾನೆ. ಇದು ಗ್ರಾಹಕನಿಗೆ ಪ್ರಯೋಜನಕಾರಿಯಾಗಿದೆ. ಮಾರಾಟಗಾರನಿಗೆ ನಗದಿ ವ್ಯಾಪಾರದಿಂದ ಸಿಗುವ ಲಾಭಾಂಶದಷ್ಟೇ ಅಥವಾ ಅದಕ್ಕಿಂತ ಹೆಚ್ಚು ಅಥವಾ ಕಡಿಮೆ ಲಾಭಾಂಶ ಕಂತಿನ ವ್ಯಾಪಾರದಲ್ಲಿ ಸಿಗಬಹುದು.

ಆದ್ದರಿಂದ ಇಂತಹ ವ್ಯವಹಾರವನ್ನು ಉಭಯತ್ರರೂ ಮೊದಲೇ ನಿರ್ಧರಿಸಿಕೊಳ್ಳಬೇಕು. ಯಾವ ಲಾಭಾಂಶವನ್ನಿಟ್ಟು ವ್ಯವಹಾರ ಆರಂಭಿಸಲಾಗುತ್ತದೋ ಅಷ್ಟೇ ಮೊತ್ತದ ಕಂತುಗಳನ್ನು ಕೊನೆಯ ವರೆಗೂ ನೀಡಬೇಕು. ಅನ್ಯಥಾ ಮಧ್ಯದಲ್ಲಿ ಕಂತುಕಟ್ಟಲು ಅನಿವಾರ್ಯವಾಗಿ ವಿಳಂಬವಾದರೆ ಪುನಃ ಸರಕಿಗೆ ದರ ಸೇರಿಸುವುದು ಸರಿಯಲ್ಲ. ಹಾಗೇನಾದರೂ ಹೆಚ್ಚುವರಿ ಹಣ ಪಡೆದರೆ ಅದು ಬಡ್ಡಿಯಾಗುವುದರಲ್ಲಿ ಸಂದೇಹವಿಲ್ಲ. ಅಲ್ಲಾಹನು ಇದನ್ನು ನಿಷೇಧಿಸಿದ್ದಾನೆ. ಪವಿತ್ರ ಕುರ್‌ಆನ್‌ನಲ್ಲಿ ಹೀಗೆ ಹೇಳಲಾಗಿದೆ, "ಸತ್ಯವಿಶ್ವಾಸಿಗಳೇ! ನೀವು ಅವಧಿಯನ್ನು ನಿಶ್ಚಯಿಸಿಕೊಂಡು ಪರಸ್ಪರ ಸಾಲದ ಲೇವಾದೇವಿ ಮಾಡುವಾಗ ಅದನ್ನು ಬರೆದಿಟ್ಟುಕೊಳ್ಳಿರಿ." (2:282) ಅಂದರೆ ಸಾಲದ (ಕಂತಿನ) ವ್ಯವಹಾರವನ್ನು ಮೊದಲೇ ನಿಶ್ಚಯಿಸಿಕೊಳ್ಳಬೇಕು. ಇಂತಹ ವ್ಯವಹಾರಗಳಲ್ಲಿ ಪರಸ್ಪರ ನಂಬಿಕೆಯೂ ಮುಖ್ಯ. ಅನ್ಯಥಾ ಮಾರಾಟಗಾರನಿಗೆ ನಷ್ಟ ಸಂಭವಿಸುವ ಸಾಧ್ಯತೆಯೇ ಹೆಚ್ಚು.

ಇನ್ನು ಕಂತು ಪಾವತಿಸುವವನು ತನ್ನ ಅವಧಿಯೊಳಗೆ ಪಾವತಿಸದಿದ್ದರೆ ಎಂಬ ಪ್ರಶ್ನೆ ಪ್ರಸ್ತುತವಾಗಿದೆ. ಆ ಸಂದರ್ಭದಲ್ಲಿ ವಿಳಂಬವು ಯಾವುದಾದರೂ ಅನಿವಾರ್ಯ ಕಾರಣದಿಂದಾಗಿದೆಯೆಂದು ಮಾರಾಟಗಾರನಿಗೆ ಮನವರಿಕೆಯಾದರೆ ಅವನು ಗ್ರಾಹಕನಿಗೆ ಇನ್ನಷ್ಟು ಅವಧಿಯನ್ನು ನೀಡಬೇಕು. ಆದರೆ ಆ ವಿಳಂಬಕ್ಕೆ ಹೆಚ್ಚುವರಿ ಹಣ ಪಡೆಯಬಾರದು. ಈ ಕುರಿತು ಪವಿತ್ರ ಕುರ್‌ಆನ್‌ನ ಉಪದೇಶ ಹೀಗಿದೆ:

ನಿಮ್ಮ ಸಾಲಗಾರನು ಕಾಸಿಲ್ಲದವನಾದರೆ ಅವನಿಗೆ ಸುಸ್ಥಿತಿಯುಂಟಾಗುವ ತನಕ ಸಮಯಾವಕಾಶ ನೀಡಿರಿ. ಇನ್ನು ನೀವು ದಾನದ ರೂಪದಲ್ಲಿ ಸಾಲವನ್ನೇ ಬಿಟ್ಟುಕೊಟ್ಟರೆ ಅದು ನಿಮ್ಮ ಮಟ್ಟಿಗೆ ಇನ್ನಷ್ಟು ಉತ್ತಮವಾಗಿರುವುದು. ನೀವು ಅರಿತವರೇ ಆಗಿದ್ದರೆ! ನೀವು ಅಲ್ಲಾಹನ ಕಡೆಗೆ ಮರಳಿಸಲ್ಪಡುವ ದಿನದ ಅವಮಾನ ಹಾಗೂ ಕಷ್ಟಗಳಿಂದ ಭಯಪಡಿರಿ. ಅಲ್ಲಿ ಪ್ರತಿಯೊಬ್ಬನಿಗೂ ಅವನು ಗಳಿಸಿದ ಪುಣ್ಯ ಅಥವಾ ಪಾಪಗಳ ಸರ್ವ ಸಂಪೂರ್ಣ ಪ್ರತಿಫಲ ಸಿಗುವುದು ಮತ್ತು ಯಾರ ಮೇಲೂ ಕಿಂಚಿತ್ತೂ ಅನ್ಯಾಯವಾಗಲಾರದು. (2: 280-281)

ಈ ಸೂಕ್ತದಲ್ಲಿ ಉಭಯತ್ರರಿಗೂ ಉಪದೇಶವಿದೆ. ಸಾಲಗಾರನು ಅನಿವಾರ್ಯ ಕಾರಣವಿಲ್ಲದೆ ಸಾಲ ಮರುಪಾವತಿಯಲ್ಲಿ ವಿಳಂಬಿಸಬಾರದು. ಅವನು ಅಲ್ಲಾಹನನ್ನು ಭಯಪಡಬೇಕು. ಅದೇ ರೀತಿ ಸಾಲ ಮರುಪಾವತಿ ಮಾಡಲು ವಿಳಂಬವಾದರೆ ಸಾಲಗಾರನನ್ನು ಮಾರಾಟಗಾರನು (ಅಥವಾ ಸಾಲ ನೀಡಿದವನು) ಸತಾಯಿಸಬಾರದು. ಅವನು ಔದಾರ್ಯ ತೋರಿ ಅವನಿಗೆ ಇನ್ನಷ್ಟು ಕಾಲಾವಕಾಶ ಕೊಡಬೇಕು. ಇದಕ್ಕಿಂತ ಮುಂದುವರಿದು ಈ ಔದಾರ್ಯವು ಗ್ರಾಹಕನ ಪರಿಸ್ಥಿತಿಯನ್ನು ಪರಿಗಣಿಸಿಕೊಂಡು ಸಾಲವನ್ನು ಮನ್ನಾ ಮಾಡುವಷ್ಟರ ವರೆಗೂ ಇರಬೇಕೆಂದು ಹೇಳಲಾಗಿದೆ. ಆಗಲೂ ಅವನು ಅಲ್ಲಾಹನನ್ನು ಭಯಪಡಬೇಕು. ಉಭಯತ್ರರಿಗೂ ಅಲ್ಲಾಹನ ಮುಂದೆ ಒಂದು ದಿನ ಹಾಜರಾಗಲಿಕ್ಕಿದೆ. ಅಲ್ಲಿ ಯಾರು ಯಾವ ನಿಯತ್ತಿನೊಂದಿಗೆ ವ್ಯವಹಾರ ಮಾಡಿದ್ದಾರೆ ಎಂದು ಅನಾವರಣಗೊಳ್ಳಲಿದೆ. ಅಲ್ಲಿ ಪ್ರತಿಯೊಬ್ಬನಿಗೂ ತನ್ನ ಕರ್ಮಗಳಿಗೆ ತಕ್ಕ ಪ್ರತಿಫಲ ಸಿಗಲಿದೆ.

ಇಂತಹ ವ್ಯವಹಾರಗಳು ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲಿಕ್ಕೂ ಉತ್ತಮ ಸಮಾಜದ ನಿರ್ಮಾಣಕ್ಕೂ ಅಗತ್ಯವಾಗಿದೆ. ಅನ್ಯಥಾ ಪ್ರತಿಯೊಬ್ಬನೂ ತನ್ನ ಸ್ವಾರ್ಥವನ್ನು ಸಾಧಿಸುವ ನಿಟ್ಟಿನಲ್ಲೇ ಮುಂದುವರಿದರೆ ಸಮಾಜವು ಕೆಟ್ಟು ಹೋಗುವುದು.

## ಪ್ರಶ್ನೆ ಕೇಳುವವರ ಗಮನಕ್ಕೆ

- ಪ್ರಶ್ನೆ ಸ್ಪಷ್ಟವಾಗಿರಬೇಕು. ಪತ್ರದಲ್ಲಿ *'ಕೇಳಿದಿರಾ ಕೇಳಿ ವಿಭಾಗ'* ಎಂದು ನಮೂದಿಸಿರಬೇಕು.
- ಒಂದೇ ಪತ್ರದಲ್ಲಿ ಬೇರೆ ಬೇರೆ ಹೆಸರುಗಳೊಂದಿಗೆ ಪ್ರಶ್ನೆಗಳನ್ನು ಕೇಳಲಾದರೆ ಒಂದು ಪ್ರಶ್ನೆಗೆ ಮಾತ್ರ ಉತ್ತರಿಸಲಾಗುವುದು.
- 'ಹೆಸರು ಬೇಡ', 'ಊರು ಬೇಡ' ಎಂದು ಬರೆಯುವ ಮತ್ತು ವಿಳಾಸವಿಲ್ಲದ ಪ್ರಶ್ನೆಗಳನ್ನು ಪರಿಗಣಿಸಲಾಗುವುದಿಲ್ಲ.
- ಯಾವುದೇ ಪ್ರಶ್ನೆಗಳಿಗೆ ವೈಯಕ್ತಿಕವಾಗಿ ಪತ್ರ ಮೂಲಕ ಉತ್ತರಿಸಲಾಗುವುದಿಲ್ಲ.
- ಪತ್ರ, ವಾಚಕ ವೇದಿಕೆ ಇತ್ಯಾದಿ ವಿಷಯಗಳೊಂದಿಗೆ ಕೇಳಿದಿರಾ ಕೇಳಿಗೆ ಪ್ರಶ್ನೆಗಳನ್ನು ಸೇರಿಸಿ ಕಳುಹಿಸಬೇಡಿ. ಪ್ರತ್ಯೇಕವಾಗಿಯೇ ಕಳುಹಿಸಿ.

*- ಸಂಪಾದಕ*

# ಕುರ್‌ಆನ್ ಅಧ್ಯಯನ 504

## ಅಧ್ಯಾಯ: 4 ಅನ್ನಿಸಾ

## ವಚನ 58ರ ಟಿಪ್ಪಣಿಯ ಉಳಿದ ಭಾಗ

"ನೀವು ಜನರ ಮಧ್ಯೆ ತೀರ್ಪು ನೀಡುವಾಗ.." ಎಂಬ ವಚನಭಾಗವು; ಜನರನ್ನು ನ್ಯಾಯದಲ್ಲಿ ಮುನ್ನಡೆಸಿ, ಅವರ ಸಮಸ್ಯೆಗಳಲ್ಲಿ ನ್ಯಾಯೋಚಿತ ತೀರ್ಪು ನೀಡುವ ನ್ಯಾಯಾಧೀಶರನ್ನು(ಆಡಳಿತಾಧಿಕಾರಿಯನ್ನು) ನೇಮಿಸುವುದು ಸಾಮಾಜಿಕ ಕರ್ತವ್ಯವೆಂಬ ಸೂಚನೆಯೂ ಇದರಲ್ಲಿ ಸೇರಿದೆಯೆಂದು ಕುರ್‌ಆನ್ ವ್ಯಾಖ್ಯಾನಗಾರರು ಬೊಟ್ಟು ಮಾಡಿದ್ದಾರೆ. ಕರ್ತವ್ಯಗಳನ್ನು 'ನಿಮ್ಮಲ್ಲಿರುವ ಹಕ್ಕುದಾರರಿಗೆ ಸಂದಾಯ ಮಾಡಬೇಕು' ಮತ್ತು 'ನಿಮ್ಮ ಮಧ್ಯೆ ತೀರ್ಪು ನೀಡುವಾಗ' ಎಂದು ಹೇಳದೆ, 'ಅವುಗಳ ಹಕ್ಕುದಾರರಿಗೆ' ಮತ್ತು 'ಜನರ ಮಧ್ಯೆ' ಎಂದು ಹೇಳಿರುವುದರಲ್ಲಿ ಇನ್ನೊಂದು ಪ್ರಧಾನ ತತ್ವ ಅಡಕವಾಗಿದೆಯೆಂದೂ ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ಹಕ್ಕುಗಳ ನೀಡಿಕೆಯಲ್ಲಿ ಮತ್ತು ನ್ಯಾಯಪಾಲನೆಯಲ್ಲಿ ಲಿಂಗ, ಗೋತ್ರ ಮತ್ತು ಧರ್ಮ ತಾರತಮ್ಯ ತೋರಿಸ ಬಾರದು. ಈ ತತ್ವವು, ಆ ಕಾಲದಲ್ಲಿ ಯಹೂದಿಯರು ಪ್ರತಿಪಾದಿಸುತ್ತಿದ್ದವಾದಕ್ಕೆ ವಿರುದ್ಧವಾಗಿದೆ. ದೇವನ ಮಕ್ಕಳಾದ ಯಹೂದಿಯರಿಗೆ ಕೇವಲ ಯಹೂದಿಯರಾಗಿ ಹುಟ್ಟಿದವರೊಡನೆ ಮಾತ್ರ ಹೊಣೆಗಾರಿಕೆಯಿದೆ. ಇತರ ಜಾತಿಯವರೊಡನೆ ಹೇಗೆ ಬೇಕಾದರೂ ವರ್ತಿಸಬಹುದು. ಅವರ ಪ್ರಾಣ, ರಕ್ತಕ್ಕೆ ಬೆಲೆಯಿಲ್ಲ. ಇತರರ ಸೊತ್ತುಗಳನ್ನು ನಾವು ಹೇಗೆ ಬೇಕಾದರೂ ಸ್ವಾಧೀನಪಡಿಸಬಹುದು, ಅವರಿಗೆ ಅನ್ಯಾಯ ಮಾಡಬಹುದು, ಆ ಕುರಿತು ಅಲ್ಲಾಹನು ನಮ್ಮ ವಿಚಾರಣೆ ನಡೆಸುವುದಿಲ್ಲ. ಇದು ಅವರ ಧೋರಣೆಯಾಗಿತ್ತು. ಕುರ್‌ಆನ್ ಈ ಧೋರಣೆಯನ್ನು ಅವರ ಭಾಷೆಯಲ್ಲಿ ಹೀಗೆ ಉದ್ಧರಿಸಿದೆ: ಅವರು ಹೇಳುತ್ತಾರೆ, "ಉಮ್ಮಿಗಳ(ಇಸ್ರಾಈಲಿಯರ) ವಿಷಯದಲ್ಲಿ ನಮಗೆ ಯಾವುದೇ ಹೊಣೆಗಾರಿಕೆಯಿಲ್ಲ." (3:75)



ಯಹೂದಿಯರ ಧೋರಣೆಯು ಇಂದಿಗೂ ಅದೇ ಆಗಿದೆಯೆಂದು ಆಧುನಿಕ ಜಗತ್ತಿನಲ್ಲಿ ಅವರ ವರ್ತನೆಯನ್ನು ಗಮನಿಸಿದರೆ ವ್ಯಕ್ತವಾಗುತ್ತದೆ. ತದ್ವಿರುದ್ಧವಾಗಿ ವಿಶ್ವಾಸಿಗಳಿಗೆ ಎಲ್ಲ ಮಾನವರೊಡನೆಯೂ (ಅವರ ಜಾತಿಮತ ಬೇಧವಿಲ್ಲದೆ) ಹೊಣೆಗಾರಿಕೆಯಿದೆ. ಅವರು ಅದನ್ನು ಯಥಾವತ್ತಾಗಿ ನಿರ್ವಹಿಸಬೇಕು ಮತ್ತು ಎಲ್ಲ ಮಾನವರೊಡನೆಯೂ ನ್ಯಾಯಪಾಲಿಸುವುದು ಅವರ ಪ್ರಾಥಮಿಕ ಕರ್ತವ್ಯವಾಗಿದೆಯೆಂದು ಈ ವಚನ ತಿಳಿಸುತ್ತದೆ. ಆದರೆ ವಿಶ್ವಾಸಿಯ ಈ ಪ್ರಾಥಮಿಕ ಕರ್ತವ್ಯವನ್ನು ಸರಿಯಾಗಿ ಅರ್ಥ ಮಾಡಿ ಕೊಳ್ಳದ ಮೂಢರು ಮುಸ್ಲಿಮ್ ಸಮುದಾಯದಲ್ಲಿ ಇಂದಿಗೂ ಇದ್ದಾರೆಂಬುದು ಒಂದು ವಾಸ್ತವಿಕತೆಯಾಗಿದೆ. ಮುಸ್ಲಿಮೇತರರಿಗೆ ಅನ್ಯಾಯ ಮಾಡಿದರೆ ಅಷ್ಟೇನೂ ದೋಷವಿಲ್ಲ. ಅವರಿಂದ ಬಡ್ಡಿ ಪಡೆಯುವುದು ಅಪರಾಧವಲ್ಲ. ಅವರನ್ನು ವಂಚಿಸಿದರೆ ತಪ್ಪಿಲ್ಲ–ಇದು ಅವರ ವಿಚಾರಧಾರೆಯಾಗಿದೆ. ಇಂಥ ಮೂಢ ಜನರು ಅತ್ಯಲ್ಪ ಸಂಖ್ಯೆಯಲ್ಲಿದ್ದರೂ ನಂಜು ಹೆಚ್ಚು ಬೇಕಾಗಿಲ್ಲವಷ್ಟೇ. ಇಸ್ಲಾಮ್ ಧರ್ಮದ ಮುಖ ವಿಕೃತಗೊಳಿಸಲು ಅಷ್ಟೇ ಸಾಕು. ಶತಮಾನಗಳ ಹಿಂದೆ ಯಹೂದಿಯರು ಮಾಡಿದ ಮಹಾ ತಪ್ಪನ್ನು ಅವರು ಪುನರಾವರ್ತಿಸುತ್ತಿದ್ದಾರೆ.

ಪೂರ್ವಗ್ರಂಥದವರ ತಪ್ಪು ಧೋರಣೆ ಮತ್ತು ನಡವಳಿಕೆಗಳ ಬದಲಿಗೆ ಅತೀ ವಿಶಿಷ್ಟ ಮತ್ತು ಅನುಗ್ರಹೀತ ಧೋರಣೆ ಮತ್ತು ನಡವಳಿಕೆಗಳನ್ನು ಅಲ್ಲಾಹನು ಇಲ್ಲಿ ಉಪದೇಶಿಸಿರುತ್ತಾನೆ. ಮೂಲದಲ್ಲಿರುವ 'ನಿಇಮ್ಮ' ಎಂಬ ಪದದ ನೈಜ ರೂಪವು 'ನಿಅ್‌ಮಮಾ' ಎಂದಾಗಿದೆ. ಹತ್ತಿರದಲ್ಲಿರುವ ಎರಡು 'ಮ'ಕಾರಗಳನ್ನು ಒಂದುಗೂಡಿಸಿದಾಗ 'ನಿಇಮ್ಮ' ಆಯಿತು 'ನಿಇಮ್ಮ ಯಇದುಕುಮ್ ಬಿಹಿ' ಎಂದರೆ. "ಆತನು ನಿಮ್ಮೊಡನೆ ಉಪದೇಶಿಸಿರುವುದೇ ಉತ್ತಮ" ಎಂದರ್ಥ. ಹೊಣೆಗಾರಿಕೆಗಳನ್ನು ಈಡೇರಿಸುವ ಮತ್ತು ನ್ಯಾಯ ಪಾಲಿಸುವ ಕ್ರಮ ಕೈಗೊಳ್ಳಬೇಕೆಂಬುದೇ ಅದರ ಉದ್ದೇಶವಾಗಿದೆ.


*Statement about ownership and other particulars about*

**The newspaper SANMARGA WEEKLY**

**Form IV**

**(See Rule 8)**

| | | |
|---|---|---|
| 1. Place of Publication | : | Beebi Alabi Road, Mangalore- 1 |
| 2. Perodicity of its Publication | : | Weekly |
| 3. Printer's Name | : | M. Sadullah |
| (Whether citizen of India) | : | Indian |
| Address | : | Beebi Alabi Road, Mangalore- 1 |
| 4. Publisher's Name | : | M. Sadullah |
| (Whether citizen of India) | : | Indian |
| Address | : | Beebi Alabi Road, Mangalore- 1 |
| 5. Editor's Name | : | Abdul Khadar Kukkila |
| (Whether citizen of India) | : | Indian |
| Address | : | Beebi Alabi Road, Mangalore-1 |
| 6. Name & Address of Individual who own the newspaper | : | Sanmarga Publication Trust |

I, M. Sadullah on behalf of Sanmarga Publication Trust, hereby declare that the particulars given above are true to the best of my knowledge and belief.

Mangalore
08-03-2010

M. Sadullah
(Publisher)


## ಧನ್ಯ ಸಾಹಿತಿಗಳು

ಸಾಹಿತಿಗಳಿಗೂ
ಮಾಹಿತಿಯಿದೆ
ದೇಶದ ಅಭಿವೃದ್ಧಿಗೆ
ಜನರನ್ನು ಎಡಪಂಥೀಯರಾಗಿ
ಅಥವಾ ಬಲಪಂಥೀಯರಾಗಿ
ಒಂದು ಜನಾಂಗವನ್ನು
ಇನ್ನೊಂದರ ವಿರುದ್ಧ
ಎತ್ತಿ ಕಟ್ಟಿ ಉಳಿಸಿ ಬೆಳೆಸುವ
ಸ್ಪಷ್ಟ ಮಾಹಿತಿಗಳು...?
ಮೂರ್ತರೂಪ ತಾಳಿದೆ ಇಂದು
ಜಗದೆಡೆಯೆಲ್ಲಾ ಜಗಳಗಳಾಗಿ
ಮನುಜ, ಮನುಜರೊಳಗೆ...!
ಮನುಜರೊಡೆಯ ದೇವನೊಬ್ಬನೆ
ಅನ್ನುವ ಮಾಹಿತಿ
ಹಳತಾಗಿರುವುದೇ
ಸಾಹಿತಿಗಳ ಧನ್ಯತೆಗೆ
ತಟ್ಟಿದ ಕಳಂಕ

ಅಬೂ ಅನೀಸ್, ಕಲ್ಲಾಪು

# ಸಹೀಹ್ ಬುಖಾರಿ

ಅನುವಾದ: ಎಂ.ಎಸ್.ಕೆ.

## ನಮಾಝ್

222. ಅನಸ್ ಬಿನ್ ಮಾಲಿಕ್(ರ) ಹೇಳುತ್ತಾರೆ- ಪ್ರವಾದಿ(ಸ) ಹೀಗೆ ಹೇಳಿರುವುದಾಗಿ ಅಬೂದರ್(ರ) ಹೇಳುತ್ತಿದ್ದರು- ನಾನು ಮಕ್ಕಾದಲ್ಲಿದ್ದೆ. ನನ್ನ ಮನೆಯ ಮಾಡು ಒಡೆಯಿತು. ಜಿಬ್ರೀಲ್(ಅ) ಇಳಿದು ಬಂದರು. ನನ್ನ ಎದೆ ಸೀಳಿದರು. ಅದನ್ನು ಝಂ ಝಂ ನೀರಿನಿಂದ ತೊಳೆದರು. ತರುವಾಯ ಈಮಾನ್ ಮತ್ತು ಯುಕ್ತಿ ತುಂಬಿದ ಒಂದು ಚಿನ್ನದ ಹರಿವಾಣವನ್ನು ತಂದರು. ನನ್ನ ಎದೆಯ ಮೇಲೆ ಸುರಿದರು. ಅನಂತರ ಎದೆಯನ್ನು ಸೇರಿಸಿ ಮುಚ್ಚಿದರು. ತರುವಾಯ ನನ್ನ ಕೈ ಹಿಡಿದು ಆಕಾಶ ಲೋಕದತ್ತ ಸಾಗಿದರು. ಅಲ್ಲಿಗೆ ತಲುಪಿದಾಗ ಜಿಬ್ರೀಲರು ಆಕಾಶ ಲೋಕದ ದ್ವಾರಪಾಲಕನೊಡನೆ 'ತೆರೆ' ಎಂದರು. 'ಯಾರದು' ಎಂದು ದ್ವಾರಪಾಲಕ ಕೇಳಿದ. ಅವರು ಹೇಳಿದರು- 'ನಾನು ಜಿಬ್ರೀಲ್! ನನ್ನ ಜೊತೆ ಮುಹಮ್ಮದ್(ಸ) ಇದ್ದಾರೆ.' ದ್ವಾರಪಾಲಕ ಕೇಳಿದ- 'ಅವರೇನು ಪ್ರವಾದಿಯಾಗಿ ಮಾಡಲ್ಪಟ್ಟಿದ್ದಾರೆಯೇ.' ಜಿಬ್ರೀಲ್ ಹೌದೆಂದರು. ಆತ ತೆರೆದ. ನಾವು ಆಕಾಶ ಲೋಕಕ್ಕೆ ಹತ್ತಿದೆವು. ಅಲ್ಲಿ ಒಬ್ಬ ವ್ಯಕ್ತಿ ಕುಳಿತಿದ್ದರು. ಅವರ ಎಡ-ಬಲಗಳಲ್ಲಿ ಆತ್ಮಗಳಿದ್ದುವು. ಅವರು ಬಲಭಾಗವನ್ನು ನೋಡಿದಾಗ ನಗುತ್ತಿದ್ದರು. ಎಡಭಾಗವನ್ನು ನೋಡಿದಾಗ ಅಳುತ್ತಿದ್ದರು. (ನನ್ನನ್ನು ನೋಡಿ) ಆ ವ್ಯಕ್ತಿ 'ಸ್ವಾಗತ, ಓ ಸತ್ಯ ಪ್ರವಾದಿಯೇ, ನನ್ನ ಸಜ್ಜನ ಪುತ್ರನೇ' ಎಂದರು. ನಾನು ಜಿಬ್ರೀಲ್‌ರೊಡನೆ ಇದು ಯಾರು ಎಂದು ಕೇಳಿದೆ. ಅವರು ಹೇಳಿದರು. ಇದು ಆದಮ್(ಅ). ಅವರ ಎಡ ಬಲಭಾಗಗಳಲ್ಲಿ ಆತ್ಮಗಳಾಗಿದ್ದು ಅವು ಅವರ ಸಂತತಿಗಳಾಗಿವೆ. ಬಲಭಾಗದಲ್ಲಿರುವವರು ಸ್ವರ್ಗವಾಸಿಗಳೂ ಎಡಭಾಗದಲ್ಲಿರುವವರು ನರಕವಾಸಿಗಳೂ ಆಗಿದ್ದಾರೆ. ಆದ್ದರಿಂದಲೇ ಬಲಭಾಗವನ್ನು ನೋಡಿ ನಗುತ್ತಾರೆ. ಎಡಭಾಗವನ್ನು ನೋಡಿ ಅಳುತ್ತಾರೆ.

ತರುವಾಯ ನನ್ನನ್ನು ಎರಡನೇ ಆಕಾಶಕ್ಕೆ ಕೊಂಡೊಯ್ದರು. ಅಲ್ಲೂ ಮೊದಲು ಕೇಳಿದಂತೆಯೇ ಕೇಳಿದರು. ದ್ವಾರಪಾಲಕನು ಬಾಗಿಲು ತೆಗೆದನು. ಅನಸ್(ರ) ಹೇಳುತ್ತಾರೆ. ಪ್ರವಾದಿ(ಸ) ಹೇಳಿದರು. ನಾನು ಆಕಾಶಗಳಲ್ಲಿ ಆದಮ್, ಇದ್ರೀಸ್, ಮೂಸಾ, ಈಸಾ ಮತ್ತು ಇಬ್ರಾಹೀಮರನ್ನು ನೋಡಿದೆ. ಆದರೆ ಅವರ ಪದವಿಗಳೇನೆಂದು ಅವರು ತಿಳಿಸಲಿಲ್ಲ. ಆದಮರನ್ನು ಒಂದನೇ ಆಕಾಶದಲ್ಲಿ ಮತ್ತು ಇಬ್ರಾಹೀಮರನ್ನು ನಾಲ್ಕನೇ ಆಕಾಶದಲ್ಲಿ ಕಂಡೆನೆಂದು ಮಾತ್ರ ಹೇಳಿದರು.

ಅನಸ್ ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು. ಜಿಬ್ರೀಲ್ ನನ್ನನ್ನು ಇದ್ರೀಸರ ಬಳಿಗೆ ಕರೆದೊಯ್ದಾಗ ಇದ್ರೀಸ್(ಅ) ಹೇಳಿದರು. 'ಸ್ವಾಗತ, ಸತ್ಯಪ್ರವಾದಿಯೇ, ಸಜ್ಜನ ಸಹೋದರನೇ!' ನಾನು ಇದು ಯಾರೆಂದು ಕೇಳಿದೆ. ನಾನು ಹೇಳಿದೆ- ಇದು ಇದ್ರೀಸ್. ಆ ಬಳಿಕ ಮೂಸಾರ ಬಳಿಗೆ ಹೋದಾಗ ಅವರೂ ಸ್ವಾಗತ ಸತ್ಯಪ್ರವಾದಿಯೇ, ಸಜ್ಜನ ಸಹೋದರನೇ ಎಂದರು. ನಾನು ಕೇಳಿದೆ.ಇದು ಯಾರು. ಅವರು ಹೇಳಿದರು. ಇದು ಮೂಸಾ. ತರುವಾಯ ಈಸಾರ ಬಳಿಗೆ ಹೋದಾಗ, ಅವರೂ 'ಸ್ವಾಗತ ಸತ್ಯ ಪ್ರವಾದಿಯೇ, ಸಜ್ಜನ ಸಹೋದರನೇ' ಎಂದರು. ನಾನು ಇದು ಯಾರೆಂದು ಕೇಳಿದೆ. ಅವರು ಹೇಳಿದರು. ಇದು ಈಸಾ. ತರುವಾಯ ಇಬ್ರಾಹೀಮರ ಬಳಿಗೆ ಹೋದಾಗ ಅವರೂ ಹೇಳಿದರು- ಸ್ವಾಗತ. ಸಜ್ಜನ ಪ್ರವಾದಿಯೇ, ಸಜ್ಜನ ಪುತ್ರನೇ. ನಾನು ಕೇಳಿದೆ- ಇದು ಯಾರು? ಜಿಬ್ರೀಲ್ ಹೇಳಿದರು. ಇದು ಇಬ್ರಾಹೀಮ್(ಅ).

ಇಬ್ನು ಅಬ್ಬಾಸ್ ಮತ್ತು ಅಬೂ ಹುಬ್ಬಃ ಅನ್ಸಾರಿ(ರ) ಹೇಳುತ್ತಿದ್ದರು. ಪ್ರವಾದಿ(ಸ) ಹೇಳಿದರು. ಜಿಬ್ರೀಲ್ ನನ್ನನ್ನು ಮೇಲಕ್ಕೆ ಹತ್ತಿಸಿಕೊಂಡು ಹೋದರು. ನಾವು ಒಂದು ಉನ್ನತ ಸಮತಟ್ಟಾದ ಸ್ಥಳಕ್ಕೆ ತಲುಪಿದೆವು. ಅಲ್ಲಿ ನನಗೆ ಲೇಖನಿಯು ಬರೆಯುವ ಸದ್ದು ಕೇಳುತ್ತಿತ್ತು. ಅನಸ್(ರ) ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು- 'ಅಲ್ಲಾಹನು ನನ್ನ ಸಮುದಾಯಕ್ಕೆ ಐವತ್ತು ಹೊತ್ತಿನ ನಮಾಝ್ ಕಡ್ಡಾಯಗೊಳಿಸಿದ್ದನು.' ಆದರೆ ನಾನು ಮರಳಿ ಬರುವಾಗ ಮೂಸಾರ ಬಳಿ ಹೋದೆ. ಮೂಸಾ ಕೇಳಿದರು- 'ಅಲ್ಲಾಹನು ನಿಮ್ಮ ಸಮುದಾಯಕ್ಕೆ ಏನನ್ನು ಕಡ್ಡಾಯಗೊಳಿಸಿರುವನು.' ನಾನು ಹೇಳಿದೆ. 'ಐವತ್ತು ಹೊತ್ತಿನ ನಮಾಝ್.' ಅವರು ಹೇಳಿದರು- ನಿಮ್ಮ ಪ್ರಭುವಿನ ಬಳಿಗೆ ಹೋಗಿರಿ. ''ನಿಮ್ಮ ಸಮುದಾಯಕ್ಕೆ ಅದರ ಶಕ್ತಿ ಇರಲಾರದು. ನಾನು ಹೋಗಿ ನನ್ನ ಪ್ರಭುವಿನೊಂದಿಗೆ ಕಡಿತಗೊಳಿಸಲು ವಿನಂತಿಸಿದೆ. ಅಲ್ಲಾಹನು ಅರ್ಧ ಕಡಿತಗೊಳಿಸಿದನು.'' ತರುವಾಯ ಮೂಸಾರ ಬಳಿಗೆ ಬಂದಾಗ, ಅರ್ಧ ಕಡಿತ ಮಾಡಲಾಯಿತೆಂದು ಹೇಳಿದೆ. ಆಗ ಅವರು ಹೇಳಿದರು- ''ಪುನಃ ನಿಮ್ಮ ಪ್ರಭುವಿನ ಬಳಿಗೆ ಹೋಗಿರಿ. ನಿಮ್ಮ ಸಮುದಾಯಕ್ಕೆ ಅದೂ ಸಾಧ್ಯವಿಲ್ಲ. ನಾನು ಅಲ್ಲಾಹನಲ್ಲಿ ಇನ್ನಷ್ಟು ಕಡಿಮೆಗೊಳಿಸಲು ವಿನಂತಿಸಿದೆ.'' ಅಲ್ಲಾಹನು ಹೇಳಿದನು. ಐದು ಹೊತ್ತು ಕಡ್ಡಾಯವಾಗಿದೆ. ಅದರ ಪುಣ್ಯ ಐವತ್ತರಷ್ಟಿರುವುದು. ನನ್ನ ಬಳಿ ವಿಧಿ ಬದಲಾಯಿಸಲಾಗುವುದಿಲ್ಲ. ಆ ಬಳಿಕ ಮೂಸಾರ ಬಳಿಗೆ ಮರಳಿ ಬಂದಾಗ ಅವರು ಹೇಳಿದರು- ಪುನಃ ನಿಮ್ಮ ಪ್ರಭುವಿನ ಬಳಿಗೆ ಹೋಗಿರಿ. ನಾನು ಹೇಳಿದೆ- ನನಗೆ ನನ್ನ ಪ್ರಭುವಿನಿಂದ ನಾಚಿಕೆಯಾಗುತ್ತಿದೆ. ಅನಂತರ ಜಿಬ್ರೀಲ್ ನನ್ನನ್ನು (ಇನ್ನಷ್ಟು ಎತ್ತರಕ್ಕೆ) ಕೊಂಡೊಯ್ದರು. ನಾವು ಸಿದ್ರತುಲ್ ಮುಂತಹಾ ಎಂಬಲ್ಲಿಗೆ ತಲುಪಿದೆವು. ಅದು ವಿವಿಧ ಬಣ್ಣಗಳಿಂದ ಅಲಂಕೃತವಾಗಿತ್ತು. ಅದೇನೆಂದು ನನಗೆ ತಿಳಿದಿಲ್ಲ. ಕೊನೆಯಲ್ಲಿ ನನ್ನನ್ನು ಸ್ವರ್ಗಕ್ಕೆ ಪ್ರವೇಶಗೊಳಿಸಲಾಯಿತು. ನಾನು ಅಲ್ಲಿ ಮುತ್ತಿನ ಹಾರ ಮತ್ತು ಕಸ್ತೂರಿಯ ಮಣ್ಣು ನೋಡಿದೆ.

## ಸಂಪತ್ತಿನಲ್ಲಿ ಅಲ್ಲಾಹನ ಹಕ್ಕು- 2

ಮೂಲ: ಸಯ್ಯದ್ ಜಲಾಲುದ್ದೀನ್ ಉಮರಿ
ಅನು: ಹಾಜಿರಾ, ಪಾಣೆಮಂಗಳೂರು



# ದರ್ಪದ ಸಂಪತ್ತು ಉಳಿದೀತೆ?

**ಬಂಧುಗಳಿಗೆ ಕೊಡುವ ಹಕ್ಕು ಸ್ವೀಕಾರಾರ್ಹವಾಗಿದೆ:**

ಸಂಪತ್ತಿನ ಕೃತಜ್ಞತೆಯನ್ನು ಸಲ್ಲಿಸುವ ಇನ್ನೊಂದು ವಿಧಾನ ಹೀಗಿದೆ- ಮಾನವನು ಅಲ್ಲಾಹನ ದಾಸರ ಹಕ್ಕನ್ನು ಅರಿಯಬೇಕು ಮತ್ತು ಅದನ್ನು ಕೊಡಲು ಪ್ರಯತ್ನಿಸಬೇಕು. ಈ ಹಕ್ಕನ್ನು ಕೊಟ್ಟು ಆತನು ತನ್ನ ಬುದ್ಧಿವಂತಿಕೆ ಮತ್ತು ಜವಾಬ್ದಾರಿಯನ್ನು ಪೂರೈಸಿದಂತಾಗುವುದು. ಅಲ್ಲದೆ, ತನ್ನ ಸಂಪತ್ತನ್ನು ವಿನಾಶದಿಂದ ಕಾಪಾಡುವವನು ಮತ್ತು ಪುಣ್ಯಾರ್ಹವಾದ ಸಂಪತ್ತನ್ನು ಸಂಪಾದಿಸುವವನು. ಮಾನವನು ಅಲ್ಲಾಹನ ದಾಸರ ಹಕ್ಕನ್ನು ಕೊಡಲು ವಿಳಂಬ ಮಾಡಿದರೆ ಆತನ ಪುಣ್ಯದ ಮಾರ್ಗವು ಮುಚ್ಚಲ್ಪಡುತ್ತದೆ ಮತ್ತು ಅವನ ಪಾಲಿನ ಸಂಪತ್ತನ್ನು ಕಾಪಾಡುವುದು ಕೂಡಾ ಅಸಾಧ್ಯ. ಇದರ ಪರಿಣಾಮವಾಗಿ ಮಾನವನು ಮಾನವರ ಲಾಭಕ್ಕಾಗಿ, ಮಾನವರಿಗೆ ಕೊಡುವ ಹಕ್ಕುಗಳನ್ನು ತಿಳಿಯದೆ ಬಹಳ ಬೇಗನೇ ಅಲ್ಲಾಹನ ಸಹಾಯ ಮತ್ತು ಕರುಣೆಯಿಂದ ವಂಚಿತನಾಗುತ್ತಾನೆ. ಮಾನವನು ತನ್ನ ಹಕ್ಕು ಕರ್ತವ್ಯಗಳನ್ನು ಪೂರೈಸದೆ ಇಹಲೋಕದ ಸುಖಾನಂದದಲ್ಲಿ ಮುಳುಗಿದ್ದರೆ, ಆತನು ಬಹಳ ಬೇಗನೇ ಅಲ್ಲಾಹನ ಕ್ರೋಧಕ್ಕೆ ಒಳಗಾಗುತ್ತಾನೆ. ಯಾರು ಸಂಪತ್ತನ್ನು ಪಡೆದು ಅಲ್ಲಾಹನ ಮತ್ತು ದಾಸರ ಹಕ್ಕುಗಳನ್ನು ಮರೆತು ಬಿಡುತ್ತಾನೋ ಆತನಿಂದ ಆತನ ಸಂಪತ್ತು ಕಸಿಯಲ್ಪಡುತ್ತದೆ. ಪವಿತ್ರ ಕುರ್‌ಆನಿನಲ್ಲಿ ಇದರ ಬಗ್ಗೆ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಲಾಗಿದೆ.

**ಕೃತಘ್ನತೆ ತೋರುವ ಜನರ ಪರಿಣಾಮ:**

ಬನೀ ಇಸ್ರಾಈಲರು ಬಡತನ, ಶೋಷಣೆ ಮತ್ತು ತುಳಿತಕ್ಕೊಳಪಟ್ಟ ಜನಾಂಗದವರಾಗಿದ್ದರು. ಇದೇ ಜನಾಂಗದಲ್ಲಿ ಕಾರೂನ್ ಎಂಬೋರ್ವನಿದ್ದನು. ಅವನಿಗೆ ಅದೆಷ್ಟು ಭಂಡಾರಗಳನ್ನು ನೀಡಲಾಗಿತ್ತೆಂದರೆ ಅವುಗಳ ಬೀಗದ ಕೈಗಳನ್ನು ಬಲಶಾಲಿಗಳ ಒಂದು ತಂಡವು ಬಹಳ ಕಷ್ಟದಿಂದ ಎತ್ತಬಹುದಾಗಿತ್ತು. ಇಷ್ಟು ದೊಡ್ಡ ಸಂಪತ್ತನ್ನು ಪಡೆದ ಕಾರೂನನು ಅಲ್ಲಾಹನಿಗೆ ಕೃತಜ್ಞತೆಯನ್ನು ತೋರದೆ, ಜನರ ಹಕ್ಕುಗಳ ಬಗ್ಗೆ ಚಿಂತಿಸದೆ ಅಹಂಕಾರದಿಂದ ಮೆರೆದನು. ಧನ ಸಂಪತ್ತಿನ ಅಹಂಕಾರದಿಂದ ಇತರರನ್ನು ತುಚ್ಛವಾಗಿ ಕಂಡನು. ಇದಕ್ಕಾಗಿ ಅವನಿಗೆ ಹೀಗೆ ಉಪದೇಶಿಸಲಾಯಿತು,

"ಅಹಂಕಾರ ಪಡಬೇಡ, ಅಹಂಕಾರ ಪಡುವವರನ್ನು ಅಲ್ಲಾಹನು ಮೆಚ್ಚುವುದಿಲ್ಲ. ಅಲ್ಲಾಹನು ನಿನಗೆ ನೀಡಿರುವ ಸಂಪತ್ತಿನಿಂದ ನೀನು ಪರಲೋಕ ಗೃಹ ನಿರ್ಮಾಣ ಮಾಡುವ ಕುರಿತು ಚಿಂತಿಸು ಮತ್ತು ಇಹಲೋಕದಿಂದಲೂ ನಿನ್ನ ಪಾಲನ್ನು ಮರೆಯಬೇಡ. ಅಲ್ಲಾಹನು ನಿನಗೆ ಉಪಕಾರ ಮಾಡಿದಂತೆಯೇ ನೀನೂ ಪರೋಪಕಾರ ಮಾಡು ಮತ್ತು ಭೂಮಿಯಲ್ಲಿ ಕ್ಷೋಭೆಯನ್ನುಂಟು ಮಾಡಲು ಪ್ರಯತ್ನಿಸಬೇಡ. ಅಲ್ಲಾಹನು ಕ್ಷೋಭೆಯನ್ನುಂಟು ಮಾಡುವವರನ್ನು ಮೆಚ್ಚುವುದಿಲ್ಲ." (28:76-77)

ಕಾರೂನನು ಈ ಅತ್ಯುತ್ತಮ ಉಪದೇಶವನ್ನು ಧಿಕ್ಕರಿಸಿದನು. ಅವನು ಹೀಗೆಂದನು,

"ಇವೆಲ್ಲ ನನಗೆ ಪ್ರಾಪ್ತವಾಗಿರುವ ಜ್ಞಾನದಿಂದಾಗಿ ನನಗೆ ಒದಗಿವೆ." (28:78)

ಅರ್ಥಾತ್ ಧನ ಸಂಪತ್ತು ಮತ್ತು ನೆಮ್ಮದಿಯನ್ನು ನನಗೆ ಯಾರೂ ಕೊಟ್ಟಿಲ್ಲ. ಇದು ನನ್ನ ಪರಿಶ್ರಮ ಮತ್ತು ಸಾಧನೆಗಳ ಫಲವಾಗಿದೆ. ಆದ್ದರಿಂದ ಇದರಲ್ಲಿ ಯಾವೊಬ್ಬನೂ ತನ್ನ ಹಕ್ಕನ್ನು ಕೇಳುವಂತಿಲ್ಲ ಮತ್ತು ಯಾರ ಸೇವೆ ಮಾಡುವುದೂ ನನ್ನ ಪಾಲಿಗೆ ಮುಖ್ಯವಲ್ಲ ಎಂದು ಭಾವಿಸುತ್ತಿದ್ದನು. ವಸ್ತುತಃ ಈ ಉದ್ದೇಶವೇ ಮಾನವನ ವಿನಾಶಕ್ಕೆ ಕಾರಣವಾಗುತ್ತದೆ. ಪವಿತ್ರ ಕುರ್‌ಆನಿನಲ್ಲಿ ಹೀಗಿದೆ,

"ಅಲ್ಲಾಹನು ಇದಕ್ಕಿಂತ ಮುಂಚೆ ಅವನಿಗಿಂತಲೂ ಹೆಚ್ಚು ಶಕ್ತಿ ಹಾಗೂ ಜನಬಲವನ್ನು ಹೊಂದಿದ್ದವರನ್ನು ನಾಶಗೊಳಿಸಿರುವನೆಂಬುದು ಅವನಿಗೆ ತಿಳಿದಿರಲಿಲ್ಲವೇ? ಅಪರಾಧಿಗಳೊಡನೆ ಅವರ ಪಾಪಗಳ ಕುರಿತು ಪ್ರಶ್ನಿಸಲಾಗುವುದಿಲ್ಲ."

ಅರ್ಥಾತ್ ಕಾರೂನನು ಸಂಪತ್ತಿನ ಮದದಿಂದ ಅಹಂಕಾರ ಪಟ್ಟನು. ಇಹಲೋಕದಲ್ಲಿ ಅವನಿಗಿಂತಲೂ ಅಧಿಕ ಬಲಾಢ್ಯರೂ ಧನಾಢ್ಯರೂ ಇದ್ದಾರೆಂಬುದನ್ನು ಮರೆತಿದ್ದನು. ಆದರೆ ಯಾವಾಗ ಅವನು ಅಲ್ಲಾಹ್ ಮತ್ತು ಜನರ ಹಕ್ಕುಗಳನ್ನು ತಿಳಿಯಲಿಲ್ಲವೋ ಅಲ್ಲಾಹನ ಶಿಕ್ಷೆಯು ಅವನ ತಪ್ಪೊಪ್ಪಿಗೆಯನ್ನು ಹೊಂದಿಕೊಂಡಿರುವುದಿಲ್ಲ ಮತ್ತು ಅವನು ನಾಶ ಹೊಂದುತ್ತಾನೆ.

ಒಂದು ದಿನ ಕಾರೂನನು ತನ್ನ ಜನಾಂಗದ ಮುಂದೆ ತನ್ನ ಸಂಪೂರ್ಣ ಠೀವಿಯೊಂದಿಗೆ ಹೊರಟನು. ಆಗ ಲೌಕಿಕ ಜೀವನವನ್ನು ಬಯಸುವವರು ಅವನನ್ನು ಕಂಡು, "ಕಾರೂನನು ಮಹಾ ಅದೃಷ್ಟಶಾಲಿ. ಇವನಿಗೆ ನೀಡಲಾಗಿರುವುದೇ ನಮಗೂ ಸಿಗುತ್ತಿದ್ದರೆ!" ಎನ್ನತೊಡಗಿದರು. ಆದರೆ ಜ್ಞಾನವಿದ್ದವರು, "ಅಯ್ಯೋ ನಿಮ್ಮ ಅವಸ್ಥೆಯೇ! ಸತ್ಯವಿಶ್ವಾಸವನ್ನು ಸ್ವೀಕರಿಸಿ, ಸತ್ಕರ್ಮವೆಸಗಿದವರಿಗೆ ಅಲ್ಲಾಹನ ಪುಣ್ಯಫಲವೇ ಮೇಲು. ಈ ಸಂಪತ್ತು, ಸಹನೆಯುಳ್ಳವರಿಗಲ್ಲದೆ ಬೇರಾರಿಗೂ ಸಿಗುವುದಿಲ್ಲ" ಎಂದು ಹೇಳಿದರು. ಕೊನೆಗೆ ಕಾರೂನನ್ನೂ ಅವನ ಮನೆಯನ್ನೂ ನೆಲದೊಳಕ್ಕೆ ಹುದುಗಿಸಲಾಯಿತು. ಆಗ ಅಲ್ಲಾಹನಿಗೆದುರು ಅವನ ನೆರವಿಗೆ ಬರಲು ಅವನಿಗೆ ಯಾವ ಸಹಾಯಕ ತಂಡವೂ ಇರಲಿಲ್ಲ ಮತ್ತು ಸ್ವತಃ ತನಗೆ ಸಹಾಯ ಮಾಡಿಕೊಳ್ಳಲಿಕ್ಕೂ ಅವನಿಂದಾಗಲಿಲ್ಲ. ಈ ರೀತಿಯಲ್ಲಿ ಅವನ ಸಂಪೂರ್ಣ ಅಹಂಕಾರವು ಇಹಲೋಕದ ಶಿಕ್ಷೆಯಾಯಿತು ಮತ್ತು ಅವನ ಈ ಅವಸ್ಥೆಗೆ ಕಣ್ಣೀರು ಹರಿಸುವವರಾರೂ ಇರಲಿಲ್ಲ.

ಪವಿತ್ರ ಕುರ್‌ಆನಿನ ಸೂರಃ 18 ಅಲ್‌ಕಹ್ಫ್ ಅಧ್ಯಾಯದಲ್ಲಿ ಇಬ್ಬರು ವ್ಯಕ್ತಿಗಳ ಉಪಮೆಯನ್ನು ಕೊಡಲಾಗಿದೆ. ಅವರಲ್ಲೊಬ್ಬನಿಗೆ ದ್ರಾಕ್ಷೆಯ ಎರಡು ಅತ್ಯುತ್ತಮ ತೋಟಗಳಿದ್ದುವು. ಅವುಗಳ ಸುತ್ತಲೂ ಖರ್ಜೂರದ ಮರಗಳಿದ್ದುವು. ಅವುಗಳ ಮಧ್ಯೆ ಕೃಷಿ ಭೂಮಿಯಿತ್ತು. ನೀರಿಗಾಗಿ ಒಂದು ಕಾಲುವೆಯು ಹರಿಯುತ್ತಿದ್ದುದರಿಂದ ಅವನಿಗೆ ತುಂಬಾ ಲಾಭವಾಯಿತು. ಇದನ್ನೆಲ್ಲ ಪಡೆದ ಅವನೊಳಗೆ ಕೃತಜ್ಞತೆಯ ಬದಲು ಅಹಂಕಾರವು ತುಂಬಿಕೊಂಡಿತು. ಅವನು ತನ್ನ ನೆರೆಯವನನ್ನು ತುಚ್ಛವಾಗಿ ಭಾವಿಸುತ್ತಾ ಹೇಳತೊಡಗಿದ, "ನಾನು ನಿನಗಿಂತ ದೊಡ್ಡ ಧನಿಕ ಮತ್ತು ನಿನಗಿಂತಲೂ ಹೆಚ್ಚು ಜನಬಲ ಹೊಂದಿರುತ್ತೇನೆ." (18:34)

ಧನ ಸಂಪತ್ತನ್ನು ಪಡೆದ ಇಂತಹ ವ್ಯಕ್ತಿಯು ಇಹಲೋಕದ ಪ್ರೀತಿಯಲ್ಲಿ ತನ್ನ ನೆಮ್ಮದಿ, ಸಂತೋಷವು ಯಾವತ್ತೂ ಮಾಯವಾಗಲಿಕ್ಕಿಲ್ಲ ಎಂದು ಭಾವಿಸುತ್ತಾನೆ. ಆಗ ನೆರೆಯವನು ಹೀಗೆನ್ನುತ್ತಾನೆ, "ಇಹಲೋಕ ಮಾತ್ರ ಸರ್ವಸ್ವ ಅಲ್ಲ. ಇದು ಒಂದು ದಿನ ಅಂತ್ಯವಾಗಲಿದೆ. ಇದರ ನಂತರ ಪರಲೋಕ ಇದೆ. ಆಗ ಪ್ರತಿಯೊಬ್ಬನಿಗೆ ಅವನವನ ಕರ್ಮಗಳ ಲೆಕ್ಕ ಕೊಡಲಿಕ್ಕಿದೆ." ಅದಕ್ಕವನು ಹೇಳುತ್ತಾನೆ, "ಪರಲೋಕದ ಮೇಲೆ ನನಗೆ ವಿಶ್ವಾಸವಿಲ್ಲ. ಅದನ್ನು ನಾನು ನಂಬುವುದೂ ಇಲ್ಲ. ಹಾಗೇನಾದರೂ ಕಿಯಾಮತ್ ಬಂದು ಬಿಟ್ಟರೆ ಇದಕ್ಕಿಂತಲೂ ಉತ್ತಮವಾದ ಅವಸ್ಥೆಯೇ ನನ್ನದಾಗಿರಬಹುದು ಮತ್ತು ಯಾವುದು ಇವತ್ತು ನನ್ನ ಭಾಗ್ಯದಲ್ಲಿರುವುದೋ ಅದು ನಾಳೆ ನನ್ನಿಂದ ಕಳೆದು ಹೋಗಲು ಸಾಧ್ಯವೇ ಇಲ್ಲ" ಎನ್ನುತ್ತಾನೆ. ಅವನ ನೆರೆಯವನು ಅವನಿಗೆ ಹೀಗೆ ಸಮಜಾಯಿಸುತ್ತಾನೆ, "ನೀನು ಅಲ್ಲಾಹನನ್ನು ಯಾವ ರೀತಿಯಲ್ಲೂ ನಿರಾಕರಿಸುವಂತಿಲ್ಲ. ಇದಕ್ಕೆ ನಿನ್ನ ಇರುವಿಕೆಯೇ ಸಾಕ್ಷಿಯಾಗಿದೆ. ನೀನು ಏನೂ ಆಗಿರಲಿಲ್ಲ. ಅಲ್ಲಾಹನು ನಿನ್ನನ್ನು ಮಾನವನನ್ನಾಗಿ ಸೃಷ್ಟಿಸಿದನು. ನಿನಗೆ ಸಿಕ್ಕಿದ ಧನ-ಸಂಪತ್ತುಗಳೆಲ್ಲವೂ ಅಲ್ಲಾಹನ ಕಡೆಯಿಂದ ದೊರೆತುದುದಾಗಿದೆ. ಇದಕ್ಕಾಗಿ ನೀನು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಬೇಕಾಗಿದೆ." ಆದರೆ ಅವನು ಈ ದಾರಿಯನ್ನು ಬಿಟ್ಟುಬಿಟ್ಟನು ಮತ್ತು ಕೃತಘ್ನತೆ ತೋರುವ ಜನರಲ್ಲಿ ಸೇರಿಕೊಂಡನು. ಪವಿತ್ರ ಕುರ್‌ಆನಿನಲ್ಲಿ ಅವನ ವಿನಾಶದ ಬಗ್ಗೆ ಈ ರೀತಿ ವಿವರಿಸಲಾಗಿದೆ,

"ಕೊನೆಗೆ ಅವನ ಸಂಪೂರ್ಣ ಫಲಗಳು ನಾಶವಾದವು. ಅವನು ತನ್ನ ದ್ರಾಕ್ಷಾ ತೋಟಗಳು ತಡಿಕೆಗಳ ಮೇಲೆ ಮಗುಚಿ ಬಿದ್ದಿರುವುದನ್ನು ಕಂಡು, ತಾನು ಹೂಡಿದ ಬಂಡವಾಳಕ್ಕಾಗಿ ಗೋಳಾಡುತ್ತಾ, 'ಅಕಟಾ! ನಾನು ನನ್ನ ಪ್ರಭುವಿನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿಸದಿರುತ್ತಿದ್ದರೆ! ಎನ್ನತೊಡಗಿದನು. ಅಲ್ಲಾಹನ ಹೊರತು ಅವನಿಗೆ ಸಹಾಯ ಮಾಡತಕ್ಕ ಯಾವ ತಂಡವೂ ಅವನ ಬಳಿ ಇಲ್ಲದಾಯಿತು ಮತ್ತು ಸ್ವತಃ ಅವನೂ ಈ ಆಪತ್ತನ್ನು ಎದುರಿಸಲಾರದಾದನು. ಕಾರ್ಯಸಾಧನೆಯ ಸಕಲ ಅಧಿಕಾರಿಗಳು ಸತ್ಯಪೂರ್ಣನಾದ ಅಲ್ಲಾಹನಿಗೆ ಮಾತ್ರವೆಂದು ಆಗ ತಿಳಿಯಿತು. ಅವನು ನೀಡುವ ಪಾರಿತೋಷಕವೇ ಅತ್ಯುತ್ತಮವಾದುದು. ಅವನು ತೋರುವ ಅಂತಿಮ ಪರಿಣಾಮವೇ ಶುಭಕರವಾದುದು." (18:42-44)

## ಅನ್ಯರದ್ದಕ್ಕೆ ಆಸೆ

ಪ್ರತಿಯೊಬ್ಬ ಮನುಷ್ಯನು ಕೆಲವು ಗುಣಗಳಿಂದಾಗಿ ಇತರ ಮನುಷ್ಯರಿಗಿಂತ ಭಿನ್ನವಾಗಿದ್ದಾನೆ. ಕೆಲವರು ಅತ್ಯಂತ ಶ್ರೀಮಂತರು. ಕೆಲವರು ಮಹಾ ಬುದ್ಧಿವಂತರು, ಇತರ ಕೆಲವರು ಭುಜಬಲವುಳ್ಳವರು. ಮತ್ತೆ ಕೆಲವರು ಕಲೆ ಸಾಹಿತ್ಯದಲ್ಲಿ ನುರಿತರು. ಈ ಗುಣಗಳು ಆಕಸ್ಮಿಕ ಸೃಷ್ಟಿಯಲ್ಲ. ಇವೆಲ್ಲವೂ ಸೃಷ್ಟಿಕರ್ತನ ಅನುಗ್ರಹವಾಗಿದೆ. ಆತನು ಮನುಷ್ಯರಿಗೆ ನೀಡಿರುವ ವಿಭಿನ್ನ ತರದ ಸಿರಿ, ಸಂಪತ್ತು, ಯೋಗ್ಯತಾರ್ಹತೆ ಮತ್ತು ಪ್ರತಿಭೆಗಳು ಅವರ ಸತ್ವಪರೀಕ್ಷೆಗಾಗಿವೆ. ಪವಿತ್ರ ಕುರ್‌ಆನ್ ಹೀಗೆ ಹೇಳುತ್ತದೆ, "ಸೃಷ್ಟಿಕರ್ತನೇ ನಿಮ್ಮನ್ನು ಭೂಮಿಯ ಪ್ರತಿನಿಧಿಗಳಾಗಿ ಮಾಡಿದನು. ನಿಮಗೆ ದಯಪಾಲಿಸಿರುವುದರಲ್ಲಿ ನಿಮ್ಮನ್ನು ಪರೀಕ್ಷಿಸಲಿಕ್ಕಾಗಿ. ನಿಮ್ಮಲ್ಲಿ ಕೆಲವರಿಗೆ ಇನ್ನು ಕೆಲವರಿಗಿಂತ ಉನ್ನತ ಪದವಿಗಳನ್ನು ನೀಡಿದನು.( **6:165**) ಸೃಷ್ಟಿಗಳೆಲ್ಲಾ ಸಮುದ್ರದ ಜಲಕಣಗಳಂತೆ ಒಂದೇ ಗುಣದವರಾಗಿದ್ದರೆ ಅವರ ಮಧ್ಯೆ ಯಾವುದೇ ಸತ್ವ ಪರೀಕ್ಷೆಗೆ ಆಸ್ಪದವಿರಲಿಲ್ಲ. ವಿವಿಧ ಮನುಷ್ಯರಿಂದ ವಿಭಿನ್ನ ಕಾರ್ಯಗಳನ್ನು ಉದ್ದೇಶಿಸಿರುವುದರಿಂದ ಅವರಿಗೆ ವೈವಿಧ್ಯಮಯ ಸಾಮರ್ಥ್ಯ ಮತ್ತು ಅನುಗ್ರಹಗಳನ್ನು ಸೃಷ್ಟಿಕರ್ತನು ದಯ ಪಾಲಿಸಿರುವನು. ವಿಭಿನ್ನ ಅನುಗ್ರಹ ಮತ್ತು ಪ್ರತಿಭೆಗಳಲ್ಲಿ ಕೆಲವು ಬಾಹ್ಯ ನೋಟಕ್ಕೆ ಇತರರಿಗಿಂತ ವಿಶಿಷ್ಟವಾಗಿರುವುದು ಸಹಜ. ಇದುವೇ ಪ್ರಕೃತಿ. ಈ ಪ್ರಕೃತಿಗೆ ನಾವು ಸಂವಾದಿಯಾಗಬೇಕು.

**ಚಿಂತನೆ**



ಇಬ್ರಾಹೀಮ್ ಸಈದ್

ಪ್ರತಿಯೊಬ್ಬ ಮನುಷ್ಯನಿಗೆ ಕಾರ್ಯವೆಸಗಲು ಆದೇಶಿರುವುದು ಅವನಿಗೆ ದೊರೆತಿರುವ ಪ್ರತಿಭೆ ಮತ್ತು ಅನುಗ್ರಹಗಳ ಸೀಮೆಯೊಳಗೆ. ಪ್ರತಿಯೊಬ್ಬರೂ ತಮ್ಮ ಕಾರ್ಯಕ್ಷೇತ್ರದಲ್ಲಿ ಚೆನ್ನಾಗಿ ದುಡಿದರೆ, ಪಂಡಿತ—ಪಾಮರ, ಬಡವ-ಬಲ್ಲಿದ, ರಾಜ-ಪ್ರಜೆಗಳ ಕರ್ಮಗಳಿಗೆಲ್ಲಾ ಸಮಾನ ಮೌಲ್ಯ ಲಭಿಸುವುದು. ಪುರುಷರಂತಹ ದೇಹದಾರ್ಢ್ಯ ಮತ್ತು ದೃಢಚಿತ್ತತೆ ಲಭಿಸಿದ್ದರೆ ಎಂದು ಸ್ತ್ರೀ ಬಯಸಬೇಕೆಂದಿಲ್ಲ. ಸ್ತ್ರೀಯಂತಹ ಸೌಂದರ್ಯ ಮತ್ತು ಮೃದುತ್ವ ಸಿಕ್ಕಿದ್ದರೆ ಎಂದು ಪುರುಷನೂ ಹಂಬಲಿಸಬೇಕಾಗಿಲ್ಲ. ಇಬ್ಬರೂ ತಂತಮ್ಮ ಕ್ಷೇತ್ರದಲ್ಲಿ ಕಾರ್ಯವೆಸಗಿದರೆ ಸಾಕು. ಕರ್ಮವು ನಿಷ್ಕಪಟ ಮತ್ತು ನೀತಿಯುತವಾದಷ್ಟು ಅದರ ಮಹತ್ವವೂ ಫಲವೂ ಹೆಚ್ಚಾಗುವುದು.

ಇತರರ ಅನುಗ್ರಹಗಳು ತನಗೆ ದೊರೆಯಬೇಕೆಂಬ ಆಸೆ ಪ್ರಕೃತಿಗೆ ಒಡ್ಡುವ ಸವಾಲಾಗಿದೆ. ಅಂತಹ ಆಸೆಯನ್ನು ಈಡೇರಿಸುವ ಶ್ರಮವು ಪ್ರಕೃತಿಗೆ ವಿರುದ್ಧವಾಗಿದೆ. ಇತರರ ವಸ್ತುಗಳಿಗೆ ಆಸೆ ಪಟ್ಟರೆ ಮಾನವ ಕುಲದ ಬದುಕು ಸಂಘರ್ಷಮಯವಾಗುತ್ತದೆ. ಶೋಷಣೆ, ಸುಲಿಗೆ, ಯುದ್ಧ, ಕುಲಗೆಟ್ಟ ಅಧಿಕಾರ ಪೈಪೋಟಿಗಳೆಲ್ಲಾ ಹುಟ್ಟುವುದು ಅದರಿಂದ. ಒಬ್ಬನು ಇನ್ನೊಬ್ಬನ ಗಳಿಕೆಯ ಮೇಲೆ ಕಣ್ಣಿಟ್ಟಾಗ ದ್ವೇಷಾಸೂಯೆ ಹುಟ್ಟುತ್ತದೆ. ನನಗೇನು ಬೇಕು ಎಂದು ನಿರ್ಧರಿಸಬೇಕಾದುದು ಇನ್ನೊಬ್ಬನ ಬಳಿ ಇರುವುದನ್ನು ನೋಡಿಯಲ್ಲ. ನನ್ನ ಅಗತ್ಯ ಮತ್ತು ಸನ್ನಿವೇಶವೇ ಅದನ್ನು ನಿರ್ಧರಿಸಬೇಕು. ನನ್ನ ಅಗತ್ಯ ಮತ್ತು ನನ್ನ ಸಾಮರ್ಥ್ಯಕ್ಕೆ ಒಳಪಟ್ಟೇ ನಾನು ಬಯಸಬೇಕು ಮತ್ತು ಗಳಿಸಲು ಯತ್ನಿಸಬೇಕು. ನಾವು ಆಶಿಸಬೇಕಾದುದು ದೇವಾನುಗ್ರಹಗಳನ್ನಲ್ಲದೆ ಅನ್ಯರಿಗೆ ಲಭಿಸಿದ ಅನುಗ್ರಹಗಳನ್ನಲ್ಲ.

ಅಲ್ಲಾಹನು ನಿಮ್ಮಲ್ಲಿ ಕೆಲವರಿಗೆ ಇನ್ನು ಕೆಲವರಿಗಿಂತ ಅಧಿಕವಾಗಿ ನೀಡಿದ್ದರೆ ಅದಕ್ಕಾಗಿ ಆಸೆ ಪಡಬೇಡಿರಿ. ಪುರುಷರು ಗಳಿಸಿದುದಕ್ಕೆ ಅನುಸಾರವಾದ ಪಾಲು ಅವರಿಗಿದೆ. ಸ್ತ್ರೀಯರು ಗಳಿಸಿದುದಕ್ಕೆ ಅನುಗುಣವಾದ ಪಾಲು ಅವರಿಗಿದೆ. ಅಲ್ಲಾಹನಲ್ಲಿ ಅವನ ಅನುಗ್ರಹವನ್ನು ಬೇಡಿರಿ. ಅಲ್ಲಾಹನು ಪ್ರತಿಯೊಂದು ವಿಷಯದ ಬಗ್ಗೆ ಅರಿತವನಾಗಿದ್ದಾನೆ.

**(ಪವಿತ್ರ ಕುರ್‌ಆನ್ 4:32)**

# ಹಕ್ಕಿಗಳು

## ದೇವಾಸ್ತಿತ್ವದ ದೃಷ್ಟಾಂತಗಳು-22

ಇಮಾಮ್ ಗಝ್ಝಾಲಿ



"(ಅಲ್ಲಾಹನಿಗೆ) ವಿಧೇಯವಾಗಿ ಆಕಾಶದಲ್ಲಿ ಹಕ್ಕಿಗಳು ಹಾರುವುದನ್ನು ಅವರು ನೋಡಿಲ್ಲವೇ? ಅಲ್ಲಾಹನ ಹೊರತು ಬೇರೆ ಯಾರೂ ಅದನ್ನು ಆಧರಿಸಿ ನಿಲ್ಲಿಸಿಲ್ಲ." (ಪವಿತ್ರ ಕುರ್‌ಆನ್, 16:79)

ಇವರು ತಮ್ಮ ಮೇಲೆ ರೆಕ್ಕೆಬಿಚ್ಚುತ್ತಾ ಮತ್ತು ಮಡಚುತ್ತಾ ಹಾರಾಡುತ್ತಿರುವ ಹಕ್ಕಿಗಳನ್ನು ನೋಡುತ್ತಿಲ್ಲವೇ? ಕರುಣಾಳುವಾದ ಅಲ್ಲಾಹನ ವಿನಾ ಅವುಗಳನ್ನು ಆಧರಿಸಿರುವವರು ಬೇರೆ ಯಾರೂ ಇಲ್ಲ. ಅವನು ಎಲ್ಲ ವಸ್ತುಗಳನ್ನು ಚೆನ್ನಾಗಿ ವೀಕ್ಷಿಸುವವನಾಗಿದ್ದಾನೆ." (ಪವಿತ್ರ ಕುರ್‌ಆನ್ 67:19)

ಅಲ್ಲಾಹನು ಹಕ್ಕಿಗಳನ್ನು ಸೃಷ್ಟಿಸಿದನು. ಹಾರಲು ಅನುಕೂಲವಾಗುವ ರೀತಿಯಲ್ಲಿ ಅಲ್ಲಾಹನು ಅವುಗಳನ್ನು ರೂಪಿಸಿದನು. ಭಾರವಾದ ಏನನ್ನೂ ಅವುಗಳಲ್ಲಿ ಇರಿಸಿಲ್ಲ. ಆದರೆ ಅಗತ್ಯವಿರುವ ಮತ್ತು ಬದುಕನ್ನು ಸುರಕ್ಷಿತಗೊಳಿಸುವ ಎಲ್ಲವನ್ನೂ ಅವುಗಳಲ್ಲಿ ಸೃಷ್ಟಿಸಿದ್ದಾನೆ. ಅವುಗಳ ಅಂಗಾಂಗಗಳಿಗೆ ಯೋಗ್ಯವಾದ ವಿವಿಧ ರೀತಿಯ ಆಹಾರಗಳನ್ನು ಅದಕ್ಕೆ ಒದಗಿಸುತ್ತಾನೆ. ಹಸಿ, ಒಣ ಮತ್ತು ಅರೆ ಒಣಗಿದ ಆಹಾರವು ಅದರ ದೇಹಕ್ಕೆ ದೊರೆತು ಅಂಗಾಂಗಗಳಿಗೆ ಅವಶ್ಯಕ ಪೋಷಕಗಳಾಗುತ್ತವೆ. ಹಕ್ಕಿಗಳಿಗೆ ಕೈಗಳಿಲ್ಲ. ಕೇವಲ ಎರಡು ಕಾಲುಗಳಿವೆ; ನಿಲ್ಲಲು ಮತ್ತು ನಡೆಯಲಿಕ್ಕಾಗಿ. ಹಾರಲಿಕ್ಕಾಗಿ ಭೂಮಿಯಿಂದ ಮೇಲೇರಲಿಕ್ಕೂ ಕಾಲುಗಳು ನೆರವಾಗುತ್ತವೆ. ಪಾದವು ಅಗಲವಾಗಿದೆ. ಅದರಿಂದಾಗಿ ನೆಲದಲ್ಲಿ ಭದ್ರವಾಗಿ ನಿಲ್ಲಲು ಸಾಧ್ಯವಾಗುತ್ತದೆ. ಮೊಣಕಾಲಿನ ಚರ್ಮವು ಬಹಳ ದಪ್ಪ ಮತ್ತು ದೃಢವಾಗಿದೆ. ಮೊಣಕಾಲುಗಳಿಗೆ ಗರಿಗಳಿಲ್ಲ. ಆದ್ದರಿಂದಲೇ ತಾಪ ಮತ್ತು ಚಳಿಯನ್ನು ತಡೆಯಲಿಕ್ಕಾಗಿ ಅಲ್ಲಿನ ಚರ್ಮವು ದಪ್ಪ ಮತ್ತು ದೃಢವಾಗಿದೆ. ಮೊಣಕಾಲುಗಳಿಗೆ ಗರಿಯಿಲ್ಲ; ಅದರಲ್ಲಿಯೂ ಯುಕ್ತಿಯಿದೆ. ಹಕ್ಕಿಗಳು ಆಹಾರ ಹುಡುಕುವಾಗ ನೀರು ಮತ್ತು ಕೆಸರು ತುಂಬಿದ ಸ್ಥಳಗಳಲ್ಲಿ ನಡೆಯಬೇಕಾಗುತ್ತದೆ. ಮೊಣಕಾಲಿನಲ್ಲಿ ಗರಿಗಳಿದ್ದರೆ ಅದು ಒದ್ದೆಯಾಗಿ ಕೆಸರು ಅಂಟಬಹುದು. ಹಾರಾಟಕ್ಕೆ ಅಡ್ಡಿಯಾಗಬಹುದು. ಆದ್ದರಿಂದ ಸಂಚಾರ ಸುಗಮಗೊಳಿಸಲಿಕ್ಕಾಗಿ ಅಗತ್ಯವಿಲ್ಲದ ಕಡೆಯಲ್ಲಿ ಅಲ್ಲಾಹನು ಅದಕ್ಕೆ ಗರಿಗಳನ್ನು ನೀಡಿಲ್ಲ.

ಕೆಲವು ವರ್ಗದ ಹಕ್ಕಿಗಳ ಕಾಲುಗಳು ಉದ್ದವಾಗಿರುತ್ತವೆ. ಅದರಿಂದ ಆಹಾರ ಹುಡುಕಲು ಸುಲಭವಾಗುತ್ತದೆ. ಅವುಗಳ ಕೊರಳೂ ಉದ್ದವಾಗಿರುತ್ತದೆ. ಭುಜಗಳು ಉದ್ದ ಮತ್ತು ಕೊರಳು ಗಿಡ್ಡವಾಗಿದ್ದರೆ ತೀರ ಅಥವಾ ನೀರಿನಲ್ಲಿ ಮಿಕವನ್ನು ಹಿಡಿಯಲು ಸಾಧ್ಯವಾಗುತ್ತಿರಲಿಲ್ಲ. ಮಿಕವನ್ನು ಹಿಡಿಯಬೇಕಾದರೆ ಹಕ್ಕಿಯು ಎದೆಯನ್ನು ನೆಲಕ್ಕೆ ತಾಗಿಸಬೇಕಿತ್ತು. ಉದ್ದ ಕೊರಳಿನ ಹೆಚ್ಚಿನ ಪಕ್ಷಿಗಳ ಕೊಕ್ಕು ಉದ್ದವಾಗಿರುತ್ತದೆ. ಅದರಿಂದ ಆಹಾರ ಹುಡುಕಾಟಕ್ಕೆ ಅನುಕೂಲವಾಗುತ್ತದೆ. ಕೊರಳು ಉದ್ದ ಮತ್ತು ಭುಜ ಸಣ್ಣದಾಗಿದ್ದರೆ ಕೊರಳು ಹೊರೆಯಾಗಿ, ಆಹಾರ ಸಂಪಾದನೆ ಕಷ್ಟವಾಗುತ್ತಿತ್ತು. ಹಾಗೆಯೇ ಅಲ್ಲಾಹನು ಅವುಗಳಿಗೆ ನಿರಾಯಾಸವಾಗಿ ವಾತಾವರಣವನ್ನು ಸೀಳಲು ಸಾಧ್ಯವಾಗುವಂತೆ ಅರ್ಧವೃತ್ತಾಕಾರದ ಎದೆ ಮತ್ತು ಹಾರಾಟಕ್ಕೆ ಬಹಳಷ್ಟು ಅನುಕೂಲವಾಗುವಂತೆ ವೃತ್ತಾಕಾರದ ರೆಕ್ಕೆ ತುದಿಗಳನ್ನೂ ಒದಗಿಸಿದ್ದಾನೆ.

ಪ್ರತಿಯೊಂದು ವರ್ಗದ ಹಕ್ಕಿಗೂ ಆಹಾರ ಸಂಪಾದನೆಗೆ ಅನುಕೂಲವಾದಂಥ ಕೊಕ್ಕುಗಳಿವೆ. ಕತ್ತರಿಸಲು ಮತ್ತು ಹೆಕ್ಕಿ ತೆಗೆಯಲು ಸೂಕ್ತವಾದ ಕೊಕ್ಕುಗಳಿವೆ. ಕೆಲವು ಹಕ್ಕಿಗಳಿಗೆ ಉಗುರುಗಳಿವೆ. ಮಾಂಸಹಾರಿಗಳಾದ ಬೇಟೆ ಪಕ್ಷಿಗಳ ಪಾದವು, ಅವು ಆಕ್ರಮಿಸುವ ಜಂತುಗಳನ್ನು ಭದ್ರವಾಗಿ ಹಿಡಿಯಬಲ್ಲ ರೀತಿಯಲ್ಲಿ ವಿಶಾಲ ಮತ್ತು ದಳಗಳಂಥ ಉಗುರುಗಳನ್ನು ಹೊಂದಿವೆ. ಅವು ಎಲುಬುಗಳಂತೆ ಬಲಾಢ್ಯ, ಸುದೃಢ ಮತ್ತು ನುಣುಪಾಗಿರುತ್ತವೆ. ಇತರ ಪ್ರಾಣಿಗಳ ಹಲ್ಲಿನ ಬದಲಿಗೆ ಹಕ್ಕಿಗಳು ಕೊಕ್ಕನ್ನು ಸದಾ ಉಪಯೋಗಿಸುವುದರಿಂದ ಅದಕ್ಕೆ ಈ ವೈಶಿಷ್ಟ್ಯವನ್ನು ನೀಡಲಾಗಿದೆ.

ಗರಿಯ ಕಾಂಡಗಳನ್ನು ಅಲ್ಲಾಹನು ಬಲಪಡಿಸಿದ್ದಾನೆ. ಅದನ್ನು ರೆಕ್ಕೆಗಳ ಬಿಗಿ ಚರ್ಮಕ್ಕೆ ಸರಿ ಹೊಂದುವ ರೀತಿಯಲ್ಲಿ ನಿರ್ಮಿಸಲಾಗಿದೆ. ಹಕ್ಕಿಗಳಿಗೆ ಧಾರಾಳವಾಗಿ ಹಾರುತ್ತಾ ರೆಕ್ಕೆ ಬಡಿಯಬೇಕಾಗಿರುವುದರಿಂದ ಗರಿಗಳ ಬುಡವನ್ನು ಭದ್ರ ಮತ್ತು ದೃಢಗೊಳಿಸಲಾಗಿದೆ. ಗರಿಗಳು ತಾಪ ಮತ್ತು ಚಳಿಯಲ್ಲಿ ರಕ್ಷಾ ಕವಚವೂ ಆಗಿದೆ; ಹಾರಲಿಕ್ಕಾಗಿ ಗಾಳಿಯಲ್ಲಿ ಏಳುವ ಉಪಕರಣವೂ ಆಗಿದೆ. ರೆಕ್ಕೆಗಳ ಗರಿಗಳು ಹೆಚ್ಚು ಬಲಿಷ್ಠವಾಗಿವೆ. ಅವುಗಳ ಅಗತ್ಯ ಮತ್ತು ಬಳಕೆಯೂ ಅಧಿಕವಾಗಿದೆಯಷ್ಟೆ. ದೇಹದ ಇತರ ಗರಿಗಳು ಹಕ್ಕಿಯ ಉಡುಪು, ರಕ್ಷಾ ಕವಚ ಮತ್ತು ಅಲಂಕಾರವಾಗಿವೆ. ಎಲ್ಲ ಗರಿಗಳನ್ನೂ ಚರ್ಮದಲ್ಲಿ ದೃಢವಾಗಿ ಜೋಡಿಸ ಲಾಗಿದೆ. ಗರಿಗಳ ರಚನೆಯಲ್ಲಿಯೂ ಅನೇಕ ತಂತ್ರ ಗಳಿವೆ. ಗರಿಯು ಒದ್ದೆಯಾದರೆ ಹಾಳಾಗುವುದಿಲ್ಲ. ಕೊಳೆಯಾದರೆ ಅಂದಗೆಡುವುದಿಲ್ಲ. ನೀರು ತಾಗಿ ದರೆ ಅಥವಾ ಕೊಳೆಯಾದರೆ ಒಮ್ಮೆ ರೆಕ್ಕೆಯನ್ನು ಝಾಡಿಸಿದರಾಯಿತು; ಎಲ್ಲವೂ ನಿವಾರಣೆಯಾಗುತ್ತದೆ. ದೇಹವು ಮೊದಲಿನಂತೆ ಹಗುರವಾಗುತ್ತದೆ. ಹಕ್ಕಿಗಳಿಗೆ ಮೊಟ್ಟೆಯಿರಿಸುವುದಕ್ಕೆ ಮತ್ತು ಮಲ ವಿಸರ್ಜನೆಗೆ ಒಂದೇ ದ್ವಾರವಿದೆ. ಹಕ್ಕಿಗಳ ಬಾಲದ ಸ್ವರೂಪವು ಹಾರುವಾಗ ಗಾಳಿಯಲ್ಲಿ ಸಂತುಲನೆಯನ್ನು ಕಾಯ್ದುಕೊಳ್ಳಲು ನೆರವಾಗುತ್ತವೆ. ಅನ್ಯಥಾ ಹಾರುವಾಗ ಎಡ ಬಲಗಳಿಗೆ ವಾಲಬಹುದು. ಹಕ್ಕಿಗೆ ಅದರ ಬಾಲವು ಹಡಗದಲ್ಲಿ ಅದರ ಸಂತುಲನೆಯನ್ನು ಕಾಯ್ದುಕೊಳ್ಳುವ ದಿಕ್ಕು ನಿಯಂತ್ರಕಕ್ಕೆ ಸಮಾನವಾಗಿದೆ. ಸದಾ ಎಚ್ಚರ ಮತ್ತು ಜಾಗೃತವಾಗಿರುವುದು ಹಕ್ಕಿಯ ಸಹಜ ಸ್ವಭಾವವಾಗಿದೆ. ಅದರ ರಕ್ಷಣೆಗಾಗಿ ಈ ವಿಶೇಷ ಸ್ವಭಾವವನ್ನು ನೀಡಲಾಗಿದೆ. ಹಕ್ಕಿಗಳು ಆಹಾರವನ್ನು ಜಗಿಯುವುದಿಲ್ಲ. ಹಾಗೆಯೇ ನುಂಗಿಬಿಡುತ್ತವೆ. ಆದ್ದರಿಂದ ಕೆಲವು ವರ್ಗದ ಹಕ್ಕಿಗಳಿಗೆ ಬಲಿಷ್ಠ ಮತ್ತು ಹರಿತವಾದ ಕೊಕ್ಕುಗಳಿವೆ. ಅದರಿಂದ ಮಾಂಸವನ್ನೂ ಕತ್ತಿಯ ಹಾಗೆಯೇ ಕತ್ತರಿಸಿ ನುಂಗಬಹುದು. ಉದರದ ವಿಶೇಷ ತಾಪವೂ ಹಕ್ಕಿಗಳಿಗೆ ಅನುಗ್ರಹವಾಗಿದೆ. ಹಲ್ಲಿನ ಹೊರೆ ಅಥವಾ ಅರೆಯುವ ಯಂತ್ರವಿಲ್ಲದೆಯೇ ಪಚನವು ಸುಗಮವಾಗುತ್ತದೆ. ಹಕ್ಕಿ ಹಾಗೂ ಇತರ ಜೀವಿಗಳನ್ನು ಪರಿಶೀಲಿಸಿರಿ. ಇತರ ಜೀವಿಗಳ ವಿಸರ್ಜನೆಗಳಲ್ಲಿ ಪಚನವಾಗಿಲ್ಲದ ವಸ್ತುಗಳು, ಹಕ್ಕಿಗಳ ವಿಸರ್ಜನೆಯಲ್ಲಿ ಪಚನವಾಗಿರುವುದು ಕಾಣಬಹುದು.

# ಹಣಕಾಸಿನ ವಿವಿಧ ಆವಿಷ್ಕಾರಗಳು

## ಇಸ್ಲಾಮೀ ಬ್ಯಾಂಕಿಂಗ್- 32

ಡಾ| ಮುಂದಿರ್ ಕಲಾಹ್

ಇಸ್ಲಾಮೀ ಧನ ವಿನಿಮಯ ಕರಾರುಗಳು ಹಿಂದಿನಿಂದಲೂ ವಿವಿಧ ಜಾತಿ-ಮತಗಳಿಗೆ ಸೇರಿದ ಮಾನವರು ಅನುಸರಿಸುತ್ತಾ ಬಂದಿರುವ ಕರಾರು ಗಳೇ. ಇಸ್ಲಾಮಿಗಿಂತ ಪೂರ್ವದಲ್ಲಿ ಜಾಹಿಲಿಯ್ಯಾ ಕಾಲದಲ್ಲಿ ಇದು ಅಸ್ತಿತ್ವದಲ್ಲಿತ್ತು. ಅದಕ್ಕೆ ರೂಪು ಮತ್ತು ಸ್ಪಷ್ಟತೆಯನ್ನು ನೀಡುವ ಕೆಲಸವನ್ನಷ್ಟೇ ಇಸ್ಲಾಮ್ ಮಾಡಿದೆ.

ಪ್ರತಿಯೊಂದು ಕರಾರುಗಳಲ್ಲಿರುವ ವಿಶಿಷ್ಟತೆಗಳು ಸಾರ್ವತ್ರಿಕ ಗುಣಗಳಿಗೆ ಹೊರತಾಗಿ ಪ್ರತಿಯೊಂದು ಗುಂಪಿಗೂ ಸೇರಿದ ಕರಾರುಗಳಿಗೆ ಅವುಗಳದ್ದಾಗಿರುವ ವಿಶೇಷತೆಗಳಿವೆ. ಪಾಲುದಾರಿಕೆ ವಿನಿಮಯ ಕರಾರಿನಲ್ಲಿರುವ ನಷ್ಟವು ವ್ಯವಸ್ಥಾಪಕನ ಅಥವಾ ಪ್ರಬಂಧಕನ ಬಾಧ್ಯತೆಯಾಗಿರುತ್ತದೆ. ಕರಾರು ವ್ಯವಸ್ಥೆಯ ಉಲ್ಲಂಘನೆ ದುರುಪಯೋಗ, ವಂಚನೆ ಎಂಬ ಸಂದರ್ಭಗಳಲ್ಲಿ ಅದು ಅನ್ವಯವಾಗುತ್ತದೆ. ಆದರೆ ಶೇರು ಕರಾರುಗಳಲ್ಲಿ ವಿತರಣೆಯ ಮಾನದಂಡ ನಿವ್ವಳ ಲಾಭ ಅಥವಾ ಒಟ್ಟು ಲಾಭವೋ, ಇವು ಯಾವುದಾದರೂ ನಷ್ಟವನ್ನು ಹಂಚಿಕೊಳ್ಳಲು ಅನುಮತಿಯಿರುವುದಿಲ್ಲ. ಬದಲಾಗಿ ಶೇರು ಮೌಲ್ಯ ವನ್ನು ಕಡಿತಗೊಳಿಸಲಾಗುವುದು.

ಬಾಡಿಗೆ ವ್ಯವಹಾರದಲ್ಲಿ, ಬಳಕೆ ಪರವೋ, ಹಣಕಾಸು ವಿನಿಮಯದ ಪರವೋ ದ್ವಿಕಕ್ಷಿಗಳಿಗೂ ಶರೀಅತ್ ಕೆಲವು ರಿಯಾಯಿತಿಗಳನ್ನು ನೀಡುತ್ತದೆ. ಬಾಡಿಗೆ ನೀಡುವ ತಾರೀಕು, ವಸ್ತು ನೀಡುವ ಸಮಯ, ಯಾರು ಯಾರಿಗೆ ನೀಡುವುದು ಇತ್ಯಾದಿ.

ಯಾವುದೋ ಕಾಲದಲ್ಲಿ ಆರಂಭವಾದ ಕರಾರಿನ ನಿಬಂಧನೆಗಳನ್ನು ಉಭಯ ಕಕ್ಷಿಗಳ ಒಪ್ಪಿಗೆಯ ಮೂಲಕ ಬದಲಾಯಿಸಬಹುದು. ವ್ಯಾಪಾರದ ಕರಾರುಗಳಲ್ಲಿ ಉಭಯ ಕಕ್ಷಿಗಳ ಸಮ್ಮತಿಯೊಂದಿಗೆ ರಿಯಾಯತಿ ಮಾಡುವುದು ಮತ್ತು ನಿಗದಿತ ಕಾಲವಧಿಯ ವರೆಗೂ ಉಪಯೋಗಿಸುವುದನ್ನು ಉಳಿಸಿಕೊಂಡೇ ಮಾರಾಟ ನಡೆಸಲು ಅನುಮತಿಸುತ್ತದೆ.

**ಹಣಕಾಸು ವಿನಿಮಯ ಇಸ್ಲಾಮೀ ಇತಿಹಾಸದಲ್ಲಿ;** ಇಸ್ಲಾಮೀ ಇತಿಹಾಸದಲ್ಲಿ ಗಲ್ಫ್ ರಾಷ್ಟ್ರಗಳಲ್ಲಿ ಮಾತ್ರವಲ್ಲ ಮಿಡ್ಲ್‌ಈಸ್ಟ್, ಪೂರ್ವದ ರಾಷ್ಟ್ರಗಳು. ಮಿಡ್ಲ್ ಮತ್ತು ಈಸ್ಟ್ (ಮಧ್ಯ ಮತ್ತು ಪಶ್ಚಿಮದ) ಆಫ್ರಿಕಾ ಆಗ್ನೇಯ ಏಷ್ಯಾ ಮುಂತಾದೆಡೆಗಳಲ್ಲಿ ವಿವಿಧ ಇಸ್ಲಾಮೀ ಆರ್ಥಿಕ ರೀತಿಗಳು ಅಸ್ತಿತ್ವದಲ್ಲಿದ್ದವು. ಅರಬ್ ರಾಷ್ಟ್ರಗಳಿಂದ ಸಮುದ್ರ ನಮಗೆ ತಿಳಿದಿರಬಹುದು. ಪಾಶ್ಚಾತ್ಯ ಅಂಧಕಾರದ ಯುಗದಲ್ಲಿ ಮುಸ್ಲಿಮ್ ವ್ಯಾಪಾರಿಗಳು ಪ್ರಕಾಶ ಬೀರಿದರು.

**ಆಧುನಿಕ ಹಣಕಾಸು ವಿನಿಮಯದ ರೀತಿಗಳು;**

ಪರಂಪರಾಗತ ಹಣಕಾಸು ವಿನಿಮಯ ಕರಾರುಗಳ ತತ್ವಗಳನ್ನು ಆಧಾರವಾಗಿಸಿ ಇಸ್ಲಾಮಿಕ್ ಬ್ಯಾಂಕುಗಳ ವಿದ್ವಾಂಸರ ಸಹಕಾರದೊಂದಿಗೆ ಹೊಸ ಉತ್ಪಾದನೆ ಆರ್ಥಿಕ ಪರಿಸ್ಥಿತಿಗೆ ಹೊಂದುವ ಹಣಕಾಸು ವಿನಿಮಯ ಕರಾರುಗಳಿಗೆ ರೂಪು ನೀಡಲಾಗಿದೆ. ಹಣಕಾಸು ಮಧ್ಯವರ್ತಿ(ದಲ್ಲಾಳಿ) ವ್ಯವಹಾರ ಕಳೆದ ಮೂರು ಶತಮಾನಗಳಿಂದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅಭಿವೃದ್ಧಿ ಕಂಡ ಹೊಸ ಕ್ಷೇತ್ರವಾಗಿದೆ. ಓರ್ವ ವ್ಯಾಪಾರಿ ಬಳಕೆದಾರನಿಗೆ ಒಂದು ವಸ್ತು ಸಾಲವಾಗಿ ಮಾರುವುದು ಮತ್ತು ಬಾಡಿಗೆಗೆ ನೀಡುವಾಗ ವ್ಯಾಪಾರಿಗಳೇ ಹಣಕಾಸು ವ್ಯವಹಾರ ನಡೆಸುತ್ತಾರೆ. ಒಂದು ಸಂಸ್ಥೆಯು ಜನರ ಹೂಡಿಕೆಯನ್ನು ಸಂಗ್ರಹಿಸುವುದು ಆವಶ್ಯಕತೆಯಿರುವವರಿಗೆ ಹೂಡಿಕೆಯ ಮೊತ್ತವನ್ನು ಮರಳಿಸುವುದು ಹಣಕಾಸು ಮಧ್ಯವರ್ತಿ(ದಲ್ಲಾಳಿ)ಯ ವ್ಯವಹಾರ ಕೆಲಸವಾಗಿದೆ. ಹಣವಿರುವವರಿಂದ ಸಂಗ್ರಹಿಸಿ ಹಣದ ಅಗತ್ಯವಿರುವ ಉತ್ಪಾದಕನಿಗೋ, ವ್ಯಾಪಾರಿಗೋ ತಲುಪಿಸುವ ಸಂಸ್ಥೆ ಹಣಕಾಸು ಮಧ್ಯವರ್ತಿ ವ್ಯವಹಾರವಾಗಿದೆ. ಇಂದು ಇಸ್ಲಾಮೀ ಬ್ಯಾಂಕ್‌ಗಳು ಈ ಕ್ಷೇತ್ರಕ್ಕೆ ಆದ್ಯತೆ ನೀಡುತ್ತದೆ. ಅದಕ್ಕಾಗಿ ಬೇರೆ ಬೇರೆ ರೀತಿಗಳನ್ನು ಆವಿಷ್ಕರಿಸಲಾಗಿದೆ. ಹೀಗೆ ಅಭಿವೃದ್ಧಿ ಪಡಿಸಿದ ರೀತಿಗಳು ಇಸ್ಲಾಮಿನ ಸಮ್ಮಿಶ್ರ ಹಣಕಾಸು ವಿನಿಮಯದ ವ್ಯವಹಾರಗಳನ್ನು (Islamic hybrid financial contracts) ಎಂದು ಕರೆಯಲಾಗುತ್ತದೆ. ಇದರಲ್ಲಿ ಪ್ರಮುಖವಾದ ಒಂಭತ್ತು ರೀತಿಗಳು ಪ್ರಚಾರದಲ್ಲಿವೆ.

# ಅಲ್ಲ, ಬುರ್ಖಾ ಬಿಸಾಕಿದರೆ ಶೋಷಣೆ ತಪ್ಪುತ್ತಾ?



ಮಹಿಳಾ ವೇದಿಕೆ

ರಹೀನಾ ತೊಕ್ಕೊಟು

(ಮುಖಪುಟದಿಂದ)

'ಪರ್ದಾ ಹೈ ಪರ್ದಾ' ಎಂಬ ಶೀರ್ಷಿಕೆಯಡಿ ಪ್ರಕಟಿಸಿದ ಲೇಖನ ಓದಿ, ಈ ಬರಹವನ್ನು ಬರೆಯಲೇಬೇಕೆಂಬ ನಿರ್ಧಾರಕ್ಕೆ ಬರಬೇಕಾಯಿತು. ಆ ಲೇಖನವನ್ನು ಓದುವಾಗ ನಿಜವಾಗಿಯೂ ಹೃದಯ ರೋದಿಸಿತು. ಕಣ್ಣು ತೇವಗೊಂಡಿತು. ಯಾಕೆಂದ್ರೆ ಇತಿಹಾಸದಲ್ಲಿ ನೈತಿಕತೆಯ, ಕರುಣೆಯ, ಮೃದು ಸ್ವಭಾವದ, ಅತ್ಯುನ್ನತ ಚಾರಿತ್ರ್ಯವಂತ ಎಂಬ ಬಿರುದು ಇರುವ ಪ್ರವಾದಿ ಮುಹಮ್ಮದ್‌ರನ್ನು(ಸ) ನಿಂದಿಸಿ, ಅಪಮಾನಿಸಿ ಲೇಖನ ಪ್ರಕಟಪಡಿಸಲಾಗಿದೆ. ಒಬ್ಬ ನಿಜವಾದ ಮುಸ್ಲಿಮ್ ತನಗೆ ನೋವಾದ್ರೆ, ಅಪಮಾನವಾದರೆ ಸಹಿಸಬಹುದು. ಆದ್ರೆ ಜೀವಕ್ಕಿಂತ ಹೆಚ್ಚಾಗಿ ಪ್ರೀತಿಸುವ ಪ್ರವಾದಿ ಮುಹಮ್ಮದ್‌ರನ್ನು(ಸ) ನಿಂದಿಸಿದರೆ ಖಂಡಿತವಾಗಿಯೂ ಸುಮ್ಮನಿರಲು ಸಾಧ್ಯವಿಲ್ಲ.

ನನ್ನ ಅಭಿಪ್ರಾಯದಂತೆ ಇವರಿಗೆಲ್ಲಾ ನಾವು ಧರಿಸುವ ಕಪ್ಪು ಬಟ್ಟೆಯು ಅಸಹ್ಯವಾಗಿರಬಹುದು. ಆದರೆ ಒಂದು ನೆನಪಿರಲಿ, ನಮಗ್ಯಾರೂ ನೀವು ಕಪ್ಪು ಬಟ್ಟೆಯನ್ನೇ ಧರಿಸಬೇಕೆಂದು ಬಲವಂತ ಮಾಡಲಿಲ್ಲ. ಆ ಬಣ್ಣವನ್ನು ಸ್ತ್ರೀಯರೇ ಇಷ್ಟಪಡುತ್ತಾರೆ. ಧೂಳು, ಕೊಳೆ ಇತರ ಕಲ್ಮಶದ ಗೋಚರದಿಂದ ಪಾರಾಗಲು ಈ ಬಣ್ಣ ಸೂಕ್ತವಾಗಿದೆ. ಒಂದು ವೇಳೆ ಆಕೆ ಮೈಮುಚ್ಚಲು ತಾನು ಧರಿಸಿದ ಸಲ್ವಾರ್, ಸಾರಿಯನ್ನೇ ಬಳಸಿಕೊಂಡರೂ ಆಕೆಯನ್ನು ಯಾರೂ ಅಡ್ಡಿಪಡಿಸುವುದಿಲ್ಲ. ಆದರೆ ಧರಿಸಿದ ಬಟ್ಟೆಯಲ್ಲಿ ದೇಹದ ಸೌಂದರ್ಯ, ಉಬ್ಬು ತಗ್ಗುಗಳು ಇತರರಿಗೆ ಗೋಚರಿಸುವಂತಿರಬಾರದು.

ಬಿಸಿಲಿನ ಧಗೆಗೆ ಹಲವು ಮಂದಿ ಮಹಿಳೆಯರು ತಲೆಗೆ ದುಪ್ಪಟ್ಟಾ, ಶಾಲು, ಟವೆಲ್ ಸುತ್ತಿಕೊಳ್ಳುವುದು, ದ್ವಿಚಕ್ರ ಚಲಾಯಿಸುವಾಗ ಕೈಗಳಿಗೆ ಗ್ಲೌಸ್‌ಗಳನ್ನು ಹಾಕಿಕೊಳ್ಳುವುದು ಇತ್ಯಾದಿಗಳನ್ನು ನಾವು ಕಾಣುತ್ತೇವೆ. ಸಾಮಾನ್ಯವಾಗಿ ಈ ರೀತಿಯ ಸಂರಕ್ಷಣೆಯನ್ನು ಮಹಿಳೆಯರು ಮಾತ್ರ ಮಾಡುತ್ತಾರೆ. ಯಾಕೆಂದ್ರೆ ಆಕೆಗೆ ತನ್ನ ಸೌಂದರ್ಯವನ್ನು ಕಾಪಾಡಬೇಕು ಎಂಬ ಕಾಳಜಿಯಲ್ಲವೇ? ಅತ್ಯಂತ ಹೆಚ್ಚು ಸೌಂದರ್ಯ ವರ್ಧಕ ವಸ್ತುಗಳು ಮಾರಾಟವಾಗುವುದು ಮಹಿಳೆಯರಿಂದ ತಾನೇ? ಮುಖದ ಸೌಂದರ್ಯವನ್ನು ಹೆಚ್ಚಿಸಲು, ತಲೆಕೂದಲನ್ನು ಆಕರ್ಷಕವಾಗಿ ಮಾಡಲು ಹೆಣಗಾಡುವವರು ಸ್ತ್ರೀಯರೇ ತಾನೇ? ಬ್ಲೀಚ್, ಫೇಶಿಯಲ್ ಎಂಬ ಹೆಸರಿನಲ್ಲಿ ಬ್ಯೂಟಿ ಪಾರ್ಲರ್‌ಗಳು ಕೆಲಸ ಮಾಡುತ್ತಿರುವುದೂ ಮಹಿಳೆಯ ಸೌಂದರ್ಯಕ್ಕಾಗಿ ತಾನೇ? ಇದಕ್ಕೆಲ್ಲಾ ಜಾತಿ, ಧರ್ಮ, ದೇಶಗಳ ಗಡುವು ಇಲ್ಲದಿರುವಾಗ, ತನ್ನ ಕೋಮಲ, ದೇಹ ಸೌಂದರ್ಯವನ್ನು ಕಾಪಾಡಲು ಮೈ ಮುಚ್ಚುವ ಬಟ್ಟೆಯನ್ನು ಕಡ್ಡಾಯಗೊಳಿಸಿದುದರಲ್ಲಿ ಒಳಿತನ್ನು ಕಾಣಲು ಸಾಧ್ಯವಿಲ್ಲವೇಕೆ? ಸೃಷ್ಟಿಕರ್ತ ಹೆಣ್ಣಿನ ಸೌಂದರ್ಯ ಸಂರಕ್ಷಣೆಗೋಸ್ಕರ ಸಹಾಯಕವಾಗಲೆಂದು ಮೈಮುಚ್ಚುವ ಉಡುಪು ಕಡ್ಡಾಯ ಮಾಡಿರಬಹುದೆಂದು ನನಗನ್ನಿಸುತ್ತದೆ.

ನಾನು ಇಲ್ಲಿ 'ಪರ್ದಾ ಹೈ ಪರ್ದಾ' ಎಂಬ ಲೇಖನದಲ್ಲಿ ಪ್ರಕಟವಾದ ಕುರ್‌ಆನ್, ಹದೀಸ್‌ಗಳ ಸುಳ್ಳು, ತಪ್ಪಾದ ಅನುವಾದಗಳಿಗೆ ಉತ್ತರಿಸಲು ಹೋಗುವುದಿಲ್ಲ. ಅದಕ್ಕೆ ತಕ್ಕುದಾದ, ಸೂಕ್ತವಾದ ಉತ್ತರ ಕುರ್‌ಆನ್ ಮತ್ತು ಹದೀಸ್‌ಗಳು ನೀಡುತ್ತವೆ. ಆದ್ರೆ ಅದನ್ನು ನಂಬಿದವರನ್ನು, ಅದನ್ನೇ ಜೀವನದ ಆದರ್ಶವನ್ನಾಗಿ ನೆಚ್ಚಿಕೊಂಡವರನ್ನು ಹೀಯಾಳಿಸುವುದನ್ನಾಗಲಿ, ಮೆದುಳನ್ನು ಮುಚ್ಚಿಟ್ಟು ಮತ್ತಷ್ಟು ಮೂಲೆ ಗುಂಪಾಗಿಸುತ್ತಿದ್ದಾರೆ ಎಂದು ನಂಬಿಸುವ ಕೃತ್ಯವನ್ನು ಮಾತ್ರ ಖಂಡಿಸದೆ ಇರಲು ಸಾಧ್ಯವಿಲ್ಲ. ನಮ್ಮ ತಾಯಿಯನ್ನು ಯಾರಾದ್ರೂ ಚೆಂದವಿಲ್ಲ ಎಂದು ಹೇಳಿ ಸುಮ್ಮನಾದ್ರೆ ಸಹಿಸಬಹುದು. ಅದು ಬಿಟ್ಟು ನಿನ್ನ ತಾಯಿಯ ಮೂಗು, ಕಣ್ಣು, ಕಿವಿ, ಕಾಲು, ಬೆರಳು, ಕೂದಲು ಹಾಗೆ ಹೀಗೆ, ನಡತೆ ಸರಿಯಿಲ್ಲ ಎಂದು ಎಲ್ಲವನ್ನು ಹೀಯಾಳಿಸುತ್ತಾ ಹೋದರೆ ಸಹಿಸಲು ಸಾಧ್ಯವೇ? ಅಥವಾ ಅಂತಹವರನ್ನು ಯಾವ ಗುಂಪಿಗೆ ಸೇರಿಸಬಹುದು? ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೂ ಮಿತಿ ಇಲ್ಲವೇ?

ನಿಜವಾಗಿ, ಭಾರತೀಯ ಸಂಸ್ಕೃತಿ ವಿಶಿಷ್ಟವಾದುದು; ಸೌಂದರ್ಯದಿಂದ ಕೂಡಿದ್ದು, ವಿಭಿನ್ನವಾದುದು. ಇಲ್ಲಿನ ಮಣ್ಣಿನ ಮಕ್ಕಳು ಸೌಂದರ್ಯ ಪ್ರಿಯರು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಅಮೇರಿಕಾದ ಅಥವಾ ಪಾಶ್ಚಾತ್ಯ ದೇಶಗಳ ಪ್ರಜೆಗಳಲ್ಲಿ ಹೆಣ್ಣು ಗಂಡನ್ನು ನೋಡಿದರೆ ಗುರುತಿಸುವುದು ಕಷ್ಟ. ಭಾರತೀಯರು ಇದಕ್ಕೆ ವಿರುದ್ಧ. ಸ್ತ್ರೀ ಎಷ್ಟೇ ಮಾಡೆಲ್ ಆಗಲು ಬಯಸಿದರೂ ನಾನು ಹೆಣ್ಣು ಎಂಬುದನ್ನು ತೋರಿಸಲು ಇಷ್ಟಪಡುತ್ತಾಳೆ. ನೋಡಿದ ಕೂಡಲೇ ಗುರುತಿಸಲು ವೇಷ ಭೂಷಣ, ಉಡುಪು ಸಹಾಯಕವಾಗುತ್ತೆ. ಜೀನ್ಸ್ ಪ್ಯಾಂಟ್, ಟೀಶರ್ಟ್ ಧರಿಸಿ ಗಂಡಿನ ಉಡುಪು ಧರಿಸಿದರೂ ಕಣ್ಣು, ತಲೆಗೂದಲು, ತುಟಿ, ಉಗುರುಗಳ ಮೂಲಕ ಹೆಣ್ತನವನ್ನು ಪ್ರದರ್ಶಿಸಲು ಇಷ್ಟಪಡುತ್ತಾಳೆ. ಒಂದು ಮಾತಲ್ಲಿ ಹೇಳಬೇಕಾದ್ರೆ, ಭಾರತೀಯ ನಾರಿಗಿರುವ ಸೌಂದರ್ಯ ಮತ್ತು ಸೌಂದರ್ಯಪ್ರಜ್ಞೆ ಪ್ರಪಂಚದ ಬೇರೆ ಯಾವ ಕಡೆಯಲ್ಲೂ ಇಲ್ಲವೆಂದೇ ಹೇಳಬಹುದು. ಅದರಲ್ಲೂ ಮುಸ್ಲಿಮ್ ಮಹಿಳೆಯರಲ್ಲಿ ಅಪಾರವಾದ ಸೌಂದರ್ಯ, ಕೋಮಲತೆ ಇದೆ ಎಂಬ ಸತ್ಯ ಗೊತ್ತಾಗಿ ಹೇಗಾದ್ರೂ ಆಕೆಯನ್ನು ಈಜುಡುಗೆಯಲ್ಲಿ ನೋಡಿ ಆನಂದಿಸಬೇಕೆಂಬ ಹಠಕ್ಕೆ ಬಿದ್ದು ಇಂತಹ ಅಪವಾದ, ಸುಳ್ಳು ಪ್ರಚಾರ ಮಾಡಿ ನಂಬಿಸಿ ಪರ್ದಾವನ್ನು ಕಿತ್ತೆಸೆಯುವಂತೆ ಮಾಡುವುದೇ ಆಗಿರಬಹುದು. ಗೋಬೆಲ್ಸ್ ನೀತಿಯನ್ನು ಇದರಲ್ಲಿ ಅಳವಡಿಸಿದ ತಂತ್ರವೂ ನಮಗೆ ಕಾಣ್ಸುತ್ತೆ. ಜನ ಯಾವಾಗ ಧಾರ್ಮಿಕ ಭಾವನೆಗಳನ್ನು ಕೆರಳಿಸಲು ಪ್ರಯತ್ನ ಪಡುತ್ತಾರೋ ಆಗಲೆಲ್ಲಾ ಅದನ್ನು ಅರ್ಥ ಮಾಡಿಕೊಳ್ಳುವ, ಅದನ್ನು ಮತ್ತಷ್ಟು ಅನುಸರಿಸುವವರ ಸಂಖ್ಯೆ ಮತ್ತಷ್ಟು ಹೆಚ್ಚಾಗುತ್ತದೆ ಎಂಬುದಕ್ಕೆ ಇತಿಹಾಸವೇ ಸಾಕ್ಷಿ.

ಹೆಣ್ಣಿನ ನೋವು, ದುಃಖ, ಸುಖ ಎಲ್ಲಾ ಕಡೆಯೂ ಒಂದೇ. ಪರ್ದಾ ಬಿಸಾಕಿದ ಕೂಡಲೇ ಶೋಷಣೆ ತಪ್ಪುತ್ತೆ, ಆಕೆ ಪ್ರಗತಿಯ ಉತ್ತುಂಗತೆಗೆ ಏರುತ್ತಾಳೆ ಅಂತಲೋ, ಶೋಷಣೆ (ಕೊನೆಯ ಪುಟಕ್ಕೆ)

# ಕೆಲವು ಕೌಟುಂಬಿಕ ಆರೋಪಗಳು



## ಕುಟುಂಬ ಒಂದು ಅಧ್ಯಯನ-18

ಸಯ್ಯದ್ ಜಲಾಲುದ್ದೀನ್

ಸಮಾಜವು ಮಾನ-ಸಮ್ಮಾನದ ಕೆಲವು ಮೇರೆಗಳನ್ನು ಸೃಷ್ಟಿಸಿದೆಯೆಂದು ಹೇಳಲಾಗುತ್ತದೆ. ಅದರಂತೆ ಪತಿಯ ಮುಷ್ಟಿಯಿಂದ ಬಿಡುಗಡೆ ಹೊಂದುವುದು ತುಂಬ ಕೆಟ್ಟ ವಿಚಾರವೆಂದು ತಿಳಿಯಲಾಗುತ್ತದೆ. ಆದ್ದರಿಂದ ಮಹಿಳೆ ಹಲವು ತರದ ಕಷ್ಟ ಕೋಟಲೆಗಳನ್ನು ಸಹಿಸಿ ಪತಿಯ ಜತೆ ಜೀವನ ಸವೆಸಬೇಕಾಗುತ್ತದೆ. ಈ ಸಾಮಾಜಿಕ ದೌರ್ಜನ್ಯಕ್ಕೆ ಪ್ರೀತಿ ಮತ್ತು ಇಚ್ಛೆಯೆಂದು ಹೆಸರಿಸುವುದು ದುರಂತವಾಗಿದೆ.

ಅವಳು ಯಾವುದೋ ಅಕ್ರಮಿ ಅಥವಾ ಕ್ರೂರಿಗೆ ತನ್ನ ಹೃದಯದಲ್ಲಿ ಸ್ಥಾನವನ್ನು ನೀಡಿ ಪ್ರೇಮಿಸಬೇಕೆಂಬುದು ಮನೋ ವೈಜ್ಞಾನಿಕವಾಗಿಯೂ ತಪ್ಪೆಂದೇ ಸಾಬೀತಾಗಿದೆ. ಮನುಷ್ಯ ಯಾವುದೇ ಇಷ್ಟವಾಗದ ವ್ಯಕ್ತಿಯನ್ನು ಸಹಿಸಿಕೊಳ್ಳಬಹುದು. ಆದರೆ ಅವನನ್ನು ಪ್ರೇಮಿಸುವುದು ಮಾತ್ರ ಸಾಧ್ಯವಿಲ್ಲ. ಪತಿ ಪತ್ನಿಯರ ನಡುವೆ ಪ್ರೇಮ ಸಂಬಂಧದಲ್ಲಿ ಸಮಾಜದ ಒತ್ತಡ ಖಂಡಿತಾ ಇರಬಾರದೆಂದು ಎನ್ನಲಾಗುತ್ತದೆ. ಸ್ವಾಭಾವಿಕ ಪ್ರೇಮವಾಗಿ ಹೆಣ್ಣು ಗಂಡಿನ ನಡುವೆ ವೈವಾಹಿಕ ಸಂಬಂಧದ ಆಧಾರದಲ್ಲಿ ನೆಲೆಯಾಗುವುದು ಎಂಬುದನ್ನು ನಾವು ಮರೆಯಬಾರದು. ಕುಟುಂಬ ವ್ಯವಸ್ಥೆಯು ಆ ಪ್ರೇಮಕ್ಕೆ ಆತ್ಮೀಯತೆಯನ್ನು ಸ್ಥಿರಗೊಳಿಸುತ್ತದೆ. ಅವರ ನಡುವೆ ಸ್ವಭಾವಿಕ ಆಕರ್ಷಣೆಯ ಮಿಲನದ ಕಾರಣವಾಗಿರುವುದಿಲ್ಲ. ಶಾಸ್ತ್ರ ಮತ್ತು ಜೀವನ ಸಂಗಾತಿಯೆಂಬ ನಿಟ್ಟಿಂದ ಅವರು ಒಂದುಗೂಡುತ್ತಾರೆ. ಕುಟುಂಬವು ಅವರ ಮುಂದೆ ನಿಲ್ಲಿಸುವ ಉದ್ದೇಶ ಗುರಿಗಳಿಗಾಗಿ ತಮ್ಮ ಪೂರ್ತಿ ಜೀವನವನ್ನು ಸವೆಸಬೇಕಾಗಿರುತ್ತದೆ. ದಿನದನ್ನದ ಸಾವಿರ ಕಷ್ಟಗಳನ್ನು ಮೀರಿಯೂ ಅವರು ಯೋಚಿಸುವಂತೆ ಅದು ಪ್ರೇರೇಪಿಸುತ್ತದೆ.

ಕುಟುಂಬ ಸಂಬಂಧದ ಆಧಾರದಲ್ಲಿ ಧನ ಸಂಪಾದನೆ; ಮಾನವರು ಪ್ರಾಣಿಗಳಿಗಿಂತ ಭಿನ್ನವಾಗಿದ್ದಾರೆ. ಪ್ರಾಣಿಗಳ ಮರಿಗಳು ಭಾರೀ ಬೇಗನೆ ತನ್ನ ಕಾಲಿನಲ್ಲಿ ನಿಂತುಕೊಳ್ಳುತ್ತದೆ. ತನ್ನ ಜೀವನವನ್ನು ಪ್ರಾಕೃತಿಕ ಮಾರ್ಗ ದರ್ಶನದಂತೆ ಆರಂಭಿಸಿ ಬಿಡುತ್ತದೆ. ಆದರೆ ಮಾನವರ ಪೀಳಿಗೆ ಸುದೀರ್ಘ ಅವಧಿಯವರೆಗೂ ಇತರರ ಪ್ರೇಮ, ಸಹಾನುಭೂತಿ ಮತ್ತು ಅವಲಂಬನೆಯನ್ನು ಬಯಸುತ್ತದೆ. ಈ ಅವಧಿಯಲ್ಲಿ ಸ್ವಲ್ಪ ನಿರ್ಲಕ್ಷ್ಯ ಸಂಭವಿಸಿದರೂ ಕಡಿಮೆಯಾದರೂ ಅದರ ದುಷ್ಪರಿಣಾಮ ಗೋಚರಿಸುತ್ತದೆ. ಕೌಟುಂಬಿಕ ವ್ಯವಸ್ಥೆಯಲ್ಲಿ ಸಸಂತೋಷವಾಗಿ ತಂದೆ ತಾಯಿಯರು ಈ ಹೊಣೆಯನ್ನು ನಿಭಾಯಿಸುತ್ತಾರೆ. ಅವರು ಅವರ ಸುರಕ್ಷೆ-ಲಾಲನೆ-ಪಾಲನೆ ಮತ್ತು ಶಿಕ್ಷಣ-ದೀಕ್ಷೆಗಳಲ್ಲಿ ತಮ್ಮ ಸಂಪೂರ್ಣ ಶ್ರಮವನ್ನು ಹಾಕುತ್ತಾರೆ. ಕುಟುಂಬದ ಇತರರು ಕೂಡಾ ನೆರವಾಗುತ್ತಾರೆ.

ಇದರ ಹಿಂದೆಯೂ ಕೂಡಾ ಆರ್ಥಿಕ ಕಾರಣಗಳು ಕೆಲಸ ಮಾಡುತ್ತವೆ ಎಂದು ಹೇಳಲಾಗುತ್ತದೆ. ತಂದೆ ತಾಯಂದಿರು ತಮ್ಮ ಮಕ್ಕಳನ್ನು ಹೀಗೆ ನೋಡಿಕೊಳ್ಳುವುದು ಮುದಿತನದಲ್ಲಿ ನೆರವಾಗಲೆಂದು. ಅವರ ಶರೀರದ ಶಕ್ತಿ ಕ್ಷೀಣಿಸಿದಾಗ, ಅವರು ಏನೂ ಮಾಡಲು ಸಾಧ್ಯವಿಲ್ಲದ ಸ್ಥಿತಿಯಾದಾಗ ಅವರ ಸಂತಾನಗಳು ಅವರ ಆರ್ಥಿಕ ಹೊರೆಯನ್ನು ವಹಿಸುವಂತಿರಬೇಕು. ಅಂದರೆ ಪುಟ್ಟ ಪುಟಾಣಿ ಕಾಲದಲ್ಲಿ ಅವರು ಹೇಗೆ ವಿದ್ಯಾಬುದ್ಧಿ ನೀಡಿ ಸಲಹಿದರೋ ತಂದೆ ತಾಯಿಯರ ಈ ಸ್ಥಿತಿಯಲ್ಲಿ ಮಕ್ಕಳು ಕೂಡಾ ಸಲಹಬೇಕೆಂಬುದರಲ್ಲಿ ಸ್ವಾರ್ಥವಿದೆ ಎನ್ನಲಾಗುತ್ತದೆ. ಅಂದರೆ ಇದು ಆರ್ಥಿಕ ಗ್ಯಾರಂಟಿಯ ಒಂದು ರೂಪವಾಗಿದ್ದು ವ್ಯವಹಾರದಂತಿದೆ ಎಂದು ಸೂಚಿಸಲಾಗುತ್ತಿದೆ.

ಆದರೆ ಈ ವಾದವು ಮಾನವ ಪ್ರಕೃತಿಯೊಂದಿಗೆ ಸಂಘರ್ಷಿಸುವಂತಹದ್ದಾಗಿದೆ. ಮಾನವನ ಪವಿತ್ರ ಭಾವನೆ ಮತ್ತು ವಿಶ್ವಾಸಕ್ಕೆ ವಿರುದ್ಧವಾಗಿದೆ. ಕೌಟುಂಬಿಕ ಹಿನ್ನಲೆಯನ್ನು ಸ್ವಾರ್ಥದ ದೃಷ್ಟಿಯಿಂದ ಮಾತ್ರ ಅಳೆಯುವುದು, ವ್ಯಾವಹಾರಿಕವೆಂದು ಸಂಬೋಧಿಸುವುದು ಸತ್ಯಕೆ ದೂರವಾದ ವಿಚಾರಗಳಾಗಿವೆ.

**ಬಾಲ**



✍ ವಫಾಹನೀನಾ,
ಮೂಡಬಿದ್ರೆ

# ಪ್ರಾಮಾಣಿಕತೆ

ಹಲೀಮ್ ಅಬಿಸೀನಿಯಾದ ಬಡ ಕೃಷಿಕನಾಗಿದ್ದ. ಅವನ ನೆರೆಕರೆಯವನಾದ ಅಝುರ್, ಧನಿಕನೂ ಬೇಟೆಗಾರನೂ ಆಗಿದ್ದನು. ಒಮ್ಮೆ ಹಲೀಮನ ಕೃಷಿಯನ್ನು ಅಝುರ್‌ನ ಬೇಟೆ ನಾಯಿಯು ನಾಶ ಮಾಡಿತು.

ಹಲೀಮನು ಈ ವಿಷಯವನ್ನು ಅಝುರ್‌ಗೆ ತಿಳಿಸಿದ. ಉದಾರಮತಿಯಾದ ಅಝುರ್ ಹೀಗೆಂದ. "ಪ್ರೀತಿಯ ಸಹೋದರಾ, ನಿಮ್ಮ ದುಃಖವು ನನಗರ್ಥವಾಯಿತು. ನಾನು ಅದಕ್ಕೆ ಪ್ರತಿಯಾಗಿ ಪರಿಹಾರ ನೀಡುವೆನು." ಹೀಗೆ ನಷ್ಟ ಪರಿಹಾರವನ್ನು ನೀಡಿದ.

ತಿಂಗಳ ಬಳಿಕ ಕೊಯ್ಲಿನ ಸಂದರ್ಭದಲ್ಲಿ ಕೃಷಿಕನಿಗೆ ಬೇಟೆ ನಾಯಿಗಳು ನಾಶ ಮಾಡಿದ ಸ್ಥಳದಲ್ಲಿ ಹೆಚ್ಚು ಬೆಳೆಯಾಯಿತು. ಸಂತುಷ್ಟನಾದ ಕೃಷಿಕ ಧನಿಕನೊಡನೆ ಹೇಳಿದ, "ಸಹೋದರಾ ನಿಮ್ಮ ಬೇಟೆ ನಾಯಿಯು ತಿಂದ ಸ್ಥಳದಲ್ಲಿ ಹೆಚ್ಚು ಫಸಲು ಲಭಿಸಿದೆ. ಆದ್ದರಿಂದ ನೀವು ಕೊಟ್ಟ ಪರಿಹಾರವನ್ನು ಮರಳಿ ನೀಡಲು ನಾನು ಬಂದಿರುವೆನು." ಕೂಡಲೇ ಅಝುರ್ ಹೇಳಿದ, "ನಿಜವಾಗಿಯೂ ಇಂತಹ ಪ್ರಾಮಾಣಿಕತೆ ಮಾನವರ ಮಧ್ಯೆ ಬೇಕು." ಬಳಿಕ ಆತ ತನ್ನ



ಕೊಠಡಿಯಿಂದ ಮುಂಚೆ ನೀಡಿದ ಪರಿಹಾರಕ್ಕಿಂತ ಐದು ಪಟ್ಟು ಹಣವನ್ನು ಕೃಷಿಕನಿಗೆ ನೀಡುತ್ತಾ ಹೇಳಿದ. ಇದು ನಿನ್ನ ಪ್ರಾಮಾಣಿಕತೆಯನ್ನು ಮೆಚ್ಚಿ ನೀಡುವ ಪಾರಿತೋಷಕವಾಗಿದೆ. ನಿನ್ನ ಮಗನಿಗೆ ಪ್ರಾಯವಾದಾಗ ಉಳಿಯುವ ಹಕ್ಕು ನೀಡಬೇಕು. ಆ ಹಣದ ವಾರೀಸುದಾರನಾಗಿ ಮಾಡಬೇಕು.

**ನೀತಿ: ಪ್ರಾಮಾಣಿಕತೆಗೆ ಬೆಲೆಯಿದೆ**

| ಲೋಕೋಕ್ತಿ | ಇಸ್ಲಾಮಿನ ಸಂದೇಶ – 3 |
|---|---|
| 1. A penny saved is a penny earned (English) ಒಂದು ನಾಣ್ಯದ ಉಳಿತಾಯ ಒಂದು ನಾಣ್ಯದ ಆದಾಯ (ಸಂಪಾದನೆ) | ದುಂದುವೆಚ್ಚ ಮಾಡದಿರಿ. (ಕುರ್‌ಆನ್ 17:26) ದಾನಶೀಲರು ದೇವನ, ಜನರ ಸ್ವರ್ಗದ ಸಾಮಿಪ್ಯ ಮತ್ತು ನರಕದಿಂದ ದೂರವಿರುತ್ತಾರೆ. ಜಿಪುಣರು ದೇವನಿಂದ, ಜನರಿಂದ, ಸ್ವರ್ಗದಿಂದ ದೂರವಿರುತ್ತಾರೆ ಮತ್ತು ನರಕದ ಸಾಮಿಪ್ಯವಿರುತ್ತಾರೆ. ನಿಸ್ಸಂದೇಹವಾಗಿಯೂ ಅಲ್ಲಾಹನಿಗೆ ಜಿಪುಣ ಆರಾಧಕನಿಗಿಂತ ದಾನಶೀಲ ಆರಾಧಕ ಅಧಿಕ ಪ್ರಿಯನಾಗಿರುವನು. (ಹದೀಸ್–ತಿರ್ಮಿದಿ) |
| 2. other men's they will seemless (spanish) ಇತರರ ದುಃಖಗಳನ್ನು ತುಲನೆ ಮಾಡಿ ನೋಡಿದರೆ ತನ್ನ ದುಃಖ ಕಡಿಮೆಯಾಗಿ ಕಾಣುತ್ತದೆ. | ಪ್ರವಾದಿ(ಸ) ಹೇಳಿದರು– ತನಗಿಂತ ಉತ್ತಮ ಸ್ಥಿತಿಯಲ್ಲಿರುವವರನ್ನು ನೋಡದಿರು. ಬದಲಾಗಿ ತನಗಿಂತ ಕೆಳಸ್ತರದಲ್ಲಿರುವವರನ್ನು ನೋಡು. ಇದರಿಂದ ಮನುಷ್ಯನಿಗೆ ದೇವನ ಅನುಕಂಪದ ಅರಿವಾಗುತ್ತದೆ. ಆತ ಅದನ್ನು ಗೌರವಿಸುವನು ಮತ್ತು ಪ್ರಾಪ್ತವಸ್ತುಗಳನ್ನು ತುಚ್ಛವಾಗಿ ಕಾಣಲಾರ. (ಹದೀಸ್–ಮುಸ್ಲಿಮ್) |
| 3. The fear of Lord is the beginning of knowledge (English) ದೇವಭಯವೇ ಜ್ಞಾನದ ಆರಂಭ. | ಅಲ್ಲಾಹನ ದಾಸರಲ್ಲಿ ಜ್ಞಾನವುಳ್ಳವರು ಮಾತ್ರ ಭಯಪಡುತ್ತಾರೆ. (ಕುರ್‌ಆನ್ 35:38) |
| 4. The gem can't be polished without friction nor the man polished without trials (chinese) ಮುತ್ತನ್ನು ತಿಕ್ಕದೆ ಹೊಳಪು ಬರದು. ಪರೀಕ್ಷೆಗೊಡ್ಡದೆ ಮನುಷ್ಯ ಉತ್ಕೃಷ್ಟನಾಗಲಾರ. | ನಾವು ನಿಮ್ಮನ್ನು ಭಯಾಶಂಕೆ, ಹಸಿವು, ಧನಹಾನಿ ಮತ್ತು ಉತ್ಪನ್ನಗಳ ನಾಶಗಳಿಗೊಳಪಡಿಸಿ ಅವಶ್ಯವಾಗಿಯೂ ಪರೀಕ್ಷಿಸುವೆವು. ಇಂತಹ ಸನ್ನಿವೇಶಗಳಲ್ಲಿ ತಾಳ್ಮೆ ವಹಿಸಿದವರಿಗೆ ಸುವಾರ್ತೆ ನೀಡಿರಿ. (ಕುರ್‌ಆನ್: 2:155) ಒಳಿತು ಮತ್ತು ಕೆಡುಕು ಸರಿಸಮಾನವಲ್ಲ. ನೀವು ಕೆಡುಕನ್ನು ಅತ್ಯುತ್ತಮ ಒಳಿತಿನ ಮೂಲಕ ದೂರೀಕರಿಸಿರಿ. ನಿಮ್ಮೊಂದಿಗೆ ಹಗೆತನ ಕಟ್ಟಿಕೊಂಡವನೂ ನಿಮ್ಮ ಆಪ್ತಮಿತ್ರನಾಗಿ ಬಿಡುವುದನ್ನು ನೀವು ಕಾಣುವಿರಿ. (ಕುರ್‌ಆನ್: 41:34) |
| 5. Identify your weak link and act now. (English) ನಿನ್ನ ದೌರ್ಬಲ್ಯ ಗುರುತಿಸಿ ಕಾರ್ಯ ಪ್ರವೃತ್ತನಾಗು. | ಪ್ರತಿಯೊಬ್ಬನೂ ತಾನು ನಾಳೆಗಾಗಿ ಏನನ್ನು ಸಿದ್ಧಪಡಿಸಿಟ್ಟಿರುವೆನೆಂಬುದನ್ನು ನೋಡಿಕೊಳ್ಳಲಿ. (ಕುರ್‌ಆನ್ 59:18) |

# ಕಪ್ಪೆಯನ್ನು ಕೊಲ್ಲದೆ ಬಿಟ್ಟ ಮಕ್ಕಳು

✍ ಅಲಿಶಾ ಅನಮ್, ನೆಕ್ಕಿಲಾಡಿ



ಒಂದು ಕೊಳದಲ್ಲಿ ಕೆಲವು ಕಪ್ಪೆಗಳು ವಾಸಿಸುತ್ತಿದ್ದವು. ಕೊಳದ ಬದಿಯಲ್ಲಿದ್ದ ಕ್ರಿಮಿ ಕೀಟಗಳನ್ನು ತಿನ್ನುತ್ತಿತ್ತು. ಆದ್ದರಿಂದ ಕೊಳವು ಬಹಳ ಶುದ್ಧವಾಗಿತ್ತು.

ತೀರಕ್ಕೆ ಬರಲು ಸೊಳ್ಳೆಗಳು ಹೆದರುತ್ತಿದ್ದವು. ಯಾಕೆಂದರೆ ಕಪ್ಪೆಗಳಿಗೆ ಅವು ಆಹಾರವಾಗುತ್ತಿದ್ದವು.

ಒಮ್ಮೆ ಕೊಳದ ದಡದಲ್ಲಿ ಹುಲ್ಲಿನ ಮೇಲೆ ಹಾರುತ್ತಿದ್ದ ಸೊಳ್ಳೆಗಳನ್ನು ಕಪ್ಪೆಯು ತಿನ್ನುತ್ತಿತ್ತು. ಸಂಜೆಯ ವೇಳೆ ಆಟವಾಡಿ ಬಂದ ಕೆಲವು ಮಕ್ಕಳು ಕೈ,ಕಾಲು ಮುಖ ತೊಳೆಯಲು ಅಲ್ಲಿಗೆ ಬಂದರು. ಅವರಲ್ಲೋರ್ವ ಹುಡುಗನಿಗೆ ಕಪ್ಪೆಯು ಕಣ್ಣಿಗೆ ಬಿತ್ತು. ಅದನ್ನು ಕೊಲ್ಲಬೇಕೆಂದು ತೀರ್ಮಾನಿಸಿದ.

ಆತ ಇತರ ಸ್ನೇಹಿತರಿಗೆ ಕಪ್ಪೆಯನ್ನು ತೋರಿಸಿ ಕೊಟ್ಟ. ಎಲ್ಲರೂ ಕಲ್ಲನ್ನು ಹೆಕ್ಕಿ ಕಪ್ಪೆಯನ್ನು ಕೊಲ್ಲಲು ತಯಾರಾದರು. ಅವರು ಕಲ್ಲನ್ನು ಬಿಸಾಡುವುದರಲ್ಲಿದ್ದರು. ಅಷ್ಟರಲ್ಲಿ ಆ ಕಪ್ಪೆಗಳು ಮಾತಾಡಲು ತೊಡಗಿದವು.

ದಯವಿಟ್ಟು ನಮ್ಮನ್ನು ಕೊಲ್ಲಬಾರದು. ಸೊಳ್ಳೆಗಳನ್ನು ತಿನ್ನಲು ನಾವು ತೀರಕ್ಕೆ ಬಂದಿದ್ದೇವೆ. ನಾವು ನಿಮಗೆ ಏನೂ ಉಪದ್ರವಿಸಲಿಲ್ಲ. ಸೊಳ್ಳೆಯನ್ನು ತಿನ್ನುವುದರಿಂದ ಪ್ರಯೋಜನವಷ್ಟೇ ಇದೆ. ರೋಗ ಹರಡುವ ಸೊಳ್ಳೆಗಳನ್ನು ನಾವು ನಾಶ ಮಾಡಿದ್ದೇವೆ. ಹಗಲು ನಾವು ಇಲ್ಲಿರುವ ಕ್ರಿಮಿ ಕೀಟಗಳನ್ನು ತಿನ್ನುತ್ತೇವೆ. ಜಲಾಶಯಗಳನ್ನು ಶುಚಿಗೊಳಿಸುವುದು ನಾವು ಮಾಡುವ ಉಪಕಾರವಲ್ಲವೇ? ಆದ್ದರಿಂದ ನಮ್ಮನ್ನು ಕೊಲ್ಲಬಾರದು, ನಮ್ಮನ್ನು ಹಾಗೆಯೇ ಬಿಡಿರಿ ಎಂದಿತು. ಕಪ್ಪೆಯ ಮಾತುಗಳನ್ನು ಕೇಳಿದ ಆ ಹುಡುಗರು ತಮ್ಮ ಕೈಯಲ್ಲಿದ್ದ ಕಲ್ಲುಗಳನ್ನು ಕೆಳಗೆ ಹಾಕಿದರು.

ನೀತಿ: ಯಾರಿಗೂ ಅನ್ಯಾಯ ಮಾಡಬಾರದು ಇತರ ಜೀವಿಗಳನ್ನು ಉಪದ್ರವಿಸಬಾರದು.

## ಅಪ್ಪಾ; ದೇವನಿಂದ ಮಳೆ ನಮ್ಮನ್ನು ರಕ್ಷಿಸೀತೆ?

(6ನೇ ಪುಟದಿಂದ)

ಓದಿದ ನಂತರ ನಾನು ಮಾಡಿದ ಮೊದಲ ಕೆಲಸ, ಆತ್ಮಹತ್ಯೆ ಮಾಡಲು ನೇತಾಡಿಸಿದ್ದ ಹಗ್ಗವನ್ನು ಬಿಚ್ಚಿ ಇನ್ನು ಆತ್ಮಹತ್ಯೆಯ ಅಗತ್ಯ ಬರಲಿಕ್ಕಿಲ್ಲ ಎಂಬ ಹೊಸ ಸ್ಫೂರ್ತಿಯೊಂದಿಗೆ ಒಂದು ಹೊಳೆಗೆ ಎಸೆದೆ.

ನನ್ನ ಕೈಯಲ್ಲಿರುವ ಈ ಪುಸ್ತಕದ ಹಿಂದುಗಡೆ ಇಲ್ಲಿನ ವಿಳಾಸ ಹಾಗೂ ಇಂದಿನ ಕಾರ್ಯಕ್ರಮದ ವಿವರ ಇದ್ದುದರಿಂದ ನನಗೆ ಇಲ್ಲಿಗೆ ಬರಲು ಸಾಧ್ಯವಾಯಿತು. ನನ್ನ ಕೊರಳು ನರಕದ ಕಡೆಗೆ ವಾಲುತ್ತಿರುವಾಗ ಬಂದು ರಕ್ಷಿಸಿದ ಆ ಪುಟ್ಟ ದೇವಚರನಿಗೆ ನಾನು ಪ್ರತ್ಯೇಕ ಧನ್ಯವಾದ ಸೂಚಿಸುತ್ತೇನೆ."

ಮಹಿಳೆಯ ಈ ಮಾತುಗಳಿಂದಾಗಿ ಆ ಮಸೀದಿಯಲ್ಲಿ ಒದ್ದೆಯಾಗದ ಕಣ್ಣುಗಳಿರಲಿಲ್ಲ. ಮಸೀದಿ ತುಂಬಾ ಹರ್ಷೋದ್ಗಾರದಿಂದ 'ಅಲ್ಲಾಹು ಅಕ್ಬರ್' ಎಂಬ ತಕ್ಬೀರ್ ಧ್ವನಿ ಮೊಳಗಿದುವು.

"ನಿಮ್ಮ ಪೈಕಿ ಸತ್ಯವಿಶ್ವಾಸವಿರಿಸಿ ಸತ್ಕರ್ಮವೆಸಗಿದವರೊಡನೆ ಅಲ್ಲಾಹನು ಅವರಿಗಿಂತ ಮುಂಚಿನವರನ್ನು ಭೂಮಿಯಲ್ಲಿ ಪ್ರತಿನಿಧಿಯಾಗಿ ಮಾಡಿದಂತೆಯೇ ಅವರನ್ನು ಮಾಡುವನೆಂದು ವಾಗ್ದಾನ ಮಾಡಿರುವನು. ತಾನು ಅವರಿಗಾಗಿ ಮೆಚ್ಚಿರುವ ಅವರ ಧರ್ಮವನ್ನು ಸುಭದ್ರ ಬುನಾದಿಗಳಲ್ಲಿ ಸ್ಥಾಪಿಸುವನು ಮತ್ತು ಅವರ (ಪ್ರಚಲಿತ) ಭಯಾವಸ್ಥೆಯನ್ನು ಶಾಂತಿಯಾಗಿ ಮಾರ್ಪಡಿಸಿ ಬಿಡುವನು. ಅವರು ನನ್ನ ದಾಸ್ಯಾರಾಧನೆ ಮಾತ್ರ ಮಾಡಲಿ ಮತ್ತು ನನ್ನೊಂದಿಗೆ ಯಾರನ್ನೂ ಸಹಭಾಗಿಗಳಾಗಿ ಮಾಡದಿರಲಿ." (ಪವಿತ್ರ ಕುರ್‌ಆನ್: 24:55)

ಕಥೆ

# ಮಾಟದ ಕುಂಬಳ ಕಾಯಿ

✍ ಮರ್ಯಮ್ ಇಸ್ಮಾಈಲ್, ಉಳ್ಳಾಲಬೈಲ್

**ಬಾ**ಗಿಲಿಗೆ ಜಡಿದಿದ್ದ ಬೀಗವನ್ನು ಜಗ್ಗುತ್ತಾ ಕೋಪವನ್ನು ಪ್ರಕಟಿಸುತ್ತಿದ್ದ ಪತ್ನಿಯೆಡೆಗೆ ಕನಿಕರದೊಂದಿಗೆ ದಿಟ್ಟಿಸಿ ಮೌನವೇ ಮೂರ್ತಿವೆತ್ತಂತೆ ಹಸನಾಕನವರು ನಿಂತಿದ್ದರು.

ಮದುವೆ, ಮುಂಜಿ ಎಲ್ಲಿಗೇ ಹೋಗಿ ಬರಲಿ. ಪತ್ನಿ ಹಫ್ಸಾಳದು ಇದೇ ಗೋಳು. "ನನಗೊಂದು ಸರಿಯಾದ ಸೀರೆ ಅಥವಾ ಒಂದಿಷ್ಟು ಆಭರಣವಾದರೂ ನೀವು ಮಾಡಿಸಿದ್ದೀರಾ? ಅಲ್ಲಿರುವ ಹೆಂಗಳೆಯರ ಮೈಮೇಲೆ ಅದೆಷ್ಟೊಂದು ಒಡವೆಗಳು. ಕೈಕಾಲು ಕತ್ತುಗಳೆಲ್ಲಾ ಚಿನ್ನದಿಂದಲೇ ಕೆತ್ತಲ್ಪಟ್ಟಂತೆ ಗೋಚರಿಸುತ್ತಿದೆ. ಅದಕ್ಕೆ ತಕ್ಕಂತೆ ಮಿರ ಮಿರನೆ ಮಿಂಚುವ ತರ ತರಾವಳಿಯ ಸೀರೆಗಳು ಓಹ್... ನಾನು ಅದನ್ನು ಕಣ್ಣಿನಲ್ಲಷ್ಟೇ ನೋಡಿ ಆನಂದಿಸಬೇಕು. ನನಗಂತೂ ಈ ಜನ್ಮದಲ್ಲಿ ಅಂತಹ ಸೀರೆ, ಒಡವೆ ಹಾಕುವ ಭಾಗ್ಯವಿಲ್ಲ. ಎಂಥಾ ಅದೃಷ್ಟ ಹೀನೆ ನಾನು" ಎಂದು ಹಲುಬುತ್ತಿರುವ ಪತ್ನಿಯನ್ನು ಹೇಗೆ ಸಮಾಧಾನಪಡಿಸುವುದು ಎಂದರಿಯದೆ ಮೌನವಾಗಿರುವುದೇ ಹಸನಬ್ಬನವರ ಜಾಯಮಾನವಾಗಿತ್ತು.

ಪತ್ನಿಯ ಬಯಕೆ ಪೂರೈಸಲು ತನ್ನಿಂದ ಸಾಧ್ಯವಿಲ್ಲ ಎಂಬ ಕೊರಗೇ ಅವರನ್ನು ಮೌನವ್ರತವನ್ನಾಚರಿಸುವಂತೆ ಮಾಡಿತ್ತು.

ಬಾಗಿಲು ತೆರೆದುಕೊಳ್ಳುತ್ತಿರುವಂತೆ ತನ್ನ ದಢೂತಿ ದೇಹದ ಭಾರವನ್ನು ಸೋಪಾಕ್ಕೆ ವರ್ಗಾಯಿಸಿ ಬಿಟ್ಟರು. ಹಳೆಯದಾಗಿದ್ದ ಸೋಪಾ ಕಿರ್‌ಕಿರ್ ಎನ್ನುವ ಶಬ್ದ ಪ್ರಕಟಿಸಿ ತನ್ನ ನೋವನ್ನು ವ್ಯಕ್ತಪಡಿಸುವಂತ್ತಿತ್ತು.

ಕರೆಂಟ್ ಇಲ್ಲದೆ ಫ್ಯಾನ್ ತಿರುಗುತ್ತಿಲ್ಲವಾದ್ದರಿಂದ ಸೆರಗಿನ ತುದಿಯನ್ನೇ ಅಡ್ಡಡ್ಡಲಾಗಿ ಬೀಸುತ್ತಾ ಈ ಹಾಳಾದ ಕರೆಂಟ್ ಎಲ್ಲಿ ಸತ್ತು ಹೋಗಿದೆ. ಅದಕ್ಕೆ ಯಾವ ವೇಳೆ ಎಂಬುದು ಇಲ್ಲ ಸನ್ನಿ ಹಿಡಿದ ಕರೆಂಟ್.

"ಲೇ... ಶಾಪ ಹಾಕಬಾರದಂತೆ ಕಣೆ. ಗುರುಗಳು ಶುಕ್ರವಾರ ಮತಪ್ರಸಂಗದಲ್ಲಿ ಹೇಳಿದ್ದರು..." ಮೌನ ಮುರಿಯುತ್ತಾ ಹಸನಾಕ ಪತ್ನಿಗೆ ಉಪದೇಶಿಸತೊಡಗಿದರು.

ಈಗ ನಿಮಗೆ ಬಾಯಿ ಬಂತಾ. ನಾನು ಅವಾಗಿನಿಂದ ಮಾತಾಡ್ತಾ ಇದ್ದೇನೆ. ಒಂದು ಸಾ... ಸು... ನಿಮ್ಮ ಬಾಯಿಯಿಂದ ಬರಲು ಇಷ್ಟು ಸಮಯ ಬೇಕಾಯಿತಾ? ನಾನು ಸೀರೆ ಒಡವೆ ಬಗ್ಗೆ ಮಾತಾಡ್ತಿದ್ದರೆ ನೀವು ಬೆರ್ಚಪ್ಪನಂತೆ ಇರ್ತೀರಿ. ಅಲ್ಲಿ ಮದುವೆ ಮನೆಯಲ್ಲಿ ನನಗೆಷ್ಟು ಅವಮಾನ ಆಗ್ತಿದೆ ಗೊತ್ತಾ. ಈ ಹಳೇ ಮಾಡೆಲ್‌ನ ಸೀರೆ ಉಟ್ಟು ಹೋದರೆ ಎಲ್ಲರೂ ನನ್ನನ್ನು ವಿಚಿತ್ರ ಜೀವಿಯೆಂಬಂತೆ ನೋಡುತ್ತಿರುತ್ತಾರೆ. ನಿಮಗೆಲ್ಲಿ ಅರ್ಥವಾಗಬೇಕು ನನ್ನ ಕಷ್ಟ?" ಎಂದೆನ್ನುತ್ತಿರುವಂತೆ ಕಣ್ಣುಗಳೆರಡು ನದಿಗಳಾಗಿ ಉಕ್ಕಿ ಹರಿಯತೊಡಗಿತು.

ಕೋ... ಕ್ಕೊ... ಕ್ಕೊ... ಎಂಬ ಕೋಳಿಯ ಅರಚಾಟ ಕೇಳಿ... ಕೋಳಿ ಮರಿಯನ್ನು ಗಿಡುಗ ಕೊಂಡೋಯ್ತಾ....ಏನೋ... ಎಂದೆನ್ನುತ್ತಾ ಹರಿಯುತ್ತಿದ್ದ ಕಣ್ಣೀರನ್ನು ಮರೆತು ಆಕೆ ದಿಗ್ಗನೆದ್ದು ತನ್ನ ಹೊರಲಾರದ ದೇಹವನ್ನು ಹಿತ್ತಲ ಕಡೆಗೆ ಹೊರಳಿಸಿ ಕುಲು ಕುಲು ಓಡತೊಡಗಿದರು.

ಪತ್ನಿಯ ಬಾಯಿಗೆ ಬ್ರೇಕ್ ಬಿತ್ತಲ್ಲ ಎಂಬ ಸಮಾಧಾನದೊಂದಿಗೆ ಹಸನಾಕನವರು ಬಟ್ಟೆ ಬದಲಿಸಲು ಕೋಣೆಯೊಳಗಡಿಯಿಟ್ಟರು. ರೀ... ಇಲ್ಲಿ ಬನ್ರೀ... ಎಂಬ ಪತ್ನಿಯ ಕೂಗಿಗೆ ಬೆಚ್ಚಿಬಿದ್ದರಾದರೂ ಆ ಕರೆಯಲ್ಲಿ ಭೀತಿ ಅಡಗಿರುವಂತೆ ಭಾಸವಾಗಿ ಏನಾದರೂ ಹಾವು-ಗೀವು ಬಂತಾ... ಎಂಬ ದಾವಂತದಿಂದ... ಒಳ ಉಡುಪಿನಲ್ಲಿದ್ದವರು ಕೈಗೆ ಸಿಕ್ಕಿದ ಲುಂಗಿಯೊಂದನ್ನು ಸುತ್ತಿಕೊಳ್ಳುತ್ತಾ... ಹಿತ್ತಲ ಕಡೆಗೆ ದೌಡಾಯಿಸಿದರು.

ಅಲ್ಲಿ ನೋಡ್ರೀ! ಎಂಬ ಪತ್ನಿಯ ನಡುಗುವ ಧ್ವನಿಗೆ ಬೆದರಿದಂತಾದರೂ ಆಕೆ ಕೈ ತೋರಿಸಿದತ್ತ ನೋಡತೊಡಗಿದರು.

ಅಲ್ಲಿ ದೊಡ್ಡದೊಂದು ಕುಂಬಳ ಕಾಯಿ ಕಪ್ಪು ಬಣ್ಣದ ಕಣ್ಣು, ಮೂಗು, ಬಾಯಿಯ ಚಿತ್ರದೊಂದಿಗೆ ಬೆರ್ಚಪ್ಪನಂತೆ ಕುಳಿತಿತ್ತು. ಅವರಿಗೆ ನಗು ತಡೆಯಲಾಗಲಿಲ್ಲ. ಅಲ್ವೇ ನಿನ್ನ ನಾಲಗೆಯ ಪವರ್ ನೋಡು. ಆಗ ನನ್ನನ್ನು ಬೆರ್ಚಪ್ಪ ಅಂದಿಯಲ್ಲ. ಅದಕ್ಕೇ ಈಗ ಪ್ರತ್ಯಕ್ಷವಾಗಿ ಇಲ್ಲಿ ಕುಳಿತದ್ದು ಎಂದರು ಛೇಡಿಸುವ ಧ್ವನಿಯಲ್ಲಿ.

ಸಾಕು... ನಿಲ್ಲಿಸಿ ನಿಮ್ಮ ತಲೆ ಹರಟೆಯನ್ನು. ಯಾರೋ ನಮಗಾಗದವರು ಇದನ್ನು ತಂದು ಇಲ್ಲಿ ಇಟ್ಟದ್ದು.

ಹೌದಾ... ಕುಂಬಳಕಾಯಿ ನನ್ನ ಪ್ರೀತಿಯ ತರಕಾರಿ. ಇದನ್ನು ತಂದಿಟ್ಟವರು ನಮಗಾಗದವರು ಹೇಗಾಗ್ತಾರೆ. ಇದನ್ನು ರಾತ್ರಿಯ ಡುಗೆಗೆ ತೊಗರಿ ಬೇಳೆ ಹಾಕಿ ಸೊಗಸಾದ ಪದಾರ್ಥ ಮಾಡು.

ಅಜ್ಜಿಗೆ ಅರಿವೆ ಚಿಂತೆ, ಮೊಮ್ಮಗನಿಗೆ ಆಟದ ಚಿಂತೆ ಎನ್ನುವಂತೆ ನಿಮಗೆ ಯಾವಾಗಲೂ ಬರೀ ಹೊಟ್ಟೆಯ ಚಿಂತೆ ಯಾರೋ ನಮಗಾಗದವರು ಇದನ್ನು ಮಾಟ ಮಾಡಿ ಇಲ್ಲಿ ತಂದಿಟ್ಟದ್ದು. ಮಾಟದ ಫಲದಿಂದಲೇ ಇರಬೇಕು ಕೋಳಿ ಮರಿಯನ್ನು ಗಿಡುಗ ಕೊಂಡು ಹೋದದ್ದು. ನಿನ್ನೆ ಆರು ಮರಿ ಇದ್ದದ್ದು ಈಗ ಬರೀ ಮೂರೇ ಇರುವುದು. ಇದೆಲ್ಲಾ ಆ ಮಾಟದ ಕರಾಮತ್ತೇ ಇರಬೇಕು. ಅದನ್ನು ಕೈಯಿಂದ ಮುಟ್ಟಲು ಹೋಗಬೇಡಿ. ನಮ್ಮ ತಾಯಿ ಮನೆಯ ಪಕ್ಕದ ಕಂಪೌಂಡಿನಲ್ಲಿ ಹೀಗೇ ಯಾರೋ ತಂದಿಟ್ಟ ತೆಂಗಿನ ಕಾಯಿ ತಿಂದು ಅವರಿಗೆಲ್ಲಾ ವಾಂತಿ ಭೇದಿ ಶುರುವಾಗಿ ಆಸ್ಪತ್ರೆ ಸೇರುವಂತಾಗಿತ್ತು. ಅದು ಕೂಡಾ ಯಾರೋ ಮಾಟ ಮಾಡಿದ್ದಂತೆ. ಆ ಮಾಟವನ್ನು ಹೋಗಲಾಡಿಸಿದ ನಂತರ ಅದೆಲ್ಲಾ ಸರಿಯಾದದ್ದಂತೆ.

ಕೈ ಬಾಯಿ ತಿರುಗಿಸುತ್ತಾ ಹೇಳುತ್ತಿದ್ದ ಅಂತೆ ಕಂತೆಯನ್ನು ಹಸನಾಕನವರು ತೆರೆದ ಬಾಯಿಯೊಂದಿಗೆ ಆಲಿಸತೊಡಗಿದರು.

ಈಕೆ ಹೇಳಿದಂತೆ ಯಾರೋ ಮಾಟ ಮಾಡಿ ಇಟ್ಟಿರಬಹುದೇ? ಎಂಬ ಸಂದೇಹದ ಹುಳು ಅವರ ತಲೆಯನ್ನು ಕೊರೆಯತೊಡಗಿತು.

ನನಗನ್ನಿಸುತ್ತೆ ಇದೆಲ್ಲಾ ತಾಟಗಿತ್ತಿಯದೇ ಮಸಲತ್ತು ಎಂದು. ನಿನ್ನೆ ನಮ್ಮ ಕೋಳಿ ಆ ಕಡೆ ಹೋದದ್ದಕ್ಕೆ ಎಷ್ಟೊಂದು ಕಲ್ಲು ಮಣ್ಣು ಎಸೆದು ಈ ಕಡೆಗೆ ಅಟ್ಟಿಸಿ ಬಿಟ್ಟಳು. ಅವಳೇ ಇರಬೇಕು ಮಾಟ ಮಾಡಿಸಿ ತಂದಿಟ್ಟು ಈಗ ಏನೂ ತಿಳಿಯದವಳಂತೆ ಬಾಗಿಲು ಮುಚ್ಚಿ ಕುಳಿತಿದ್ದಾಳೆ ಎಂದು ಎದುರು ಮನೆಯ ಒಡತಿ ಅಲಿಮಮ್ಮನನ್ನು ಗುರಿಯಾಗಿಸಿ ಯದ್ವಾತದ್ವಾ ಮಾತಾಡಲಾರಂಭಿಸಿದರು. ಯಾರ ತಂಟೆಗೂ ಹೋಗದ ನಮ್ಮ ಮೇಲೆ ಯಾಕೆ ಕಣ್ಣು. ನಮಗೆ ಕೇಡಾಗಲೆಂದು ಇದನ್ನು ಇಟ್ಟವರ ಕೈ ಸೇದು ಹೋಗ, ಕಣ್ಣು ಒಡೆದು ಹೋಗ. ಅವರ ವಂಶ ನಿರ್ವಂಶವಾಗ...



ಇವರ ಓತ-ಪ್ರೇತವಾದ ಮಾತಿನ ವೈಖರಿ ತಾರಕಕ್ಕೇರುತ್ತಿದ್ದಂತೆ ಸುತ್ತ-ಮುತ್ತಲಿನ ಮನೆಯವರು ಕಿಟಕಿ ಬಾಗಿಲುಗಳನ್ನೆಲ್ಲಾ ಓರೆಯಾಗಿಸಿ ಇವರ ಮನೆಯತ್ತ ಇಣುಕ ತೊಡಗಿದರು. ಇವರು ಯಾರಿಗೆ ಬಯ್ಯುವುದು. ಯಾಕೆ ಬಯ್ಯುವುದು ಎಂಬ ಅರಿವಾಗದೆ ಕುತೂಹಲದಿಂದ ಒಬ್ಬೊಬ್ಬರೇ ಮನೆಯಿಂದ ಹೊರ ಬರತೊಡಗಿದರು. ಕೆಲವರಂತೂ ಕುತೂಹಲ ತಡೆಯಲಾರದೆ, ಇವರ ಹಿತ್ತಲಿಗೆ ದನ ನುಗ್ಗಿದಂತೆ ನುಗ್ಗಿ ಬಂದರು.

ಗೋಡೆಗಾಣಿಸಿಟ್ಟ ಕುಂಬಳ ಕಾಯಿಯ ಬಗ್ಗೆ ಅವರವರು ಅವರವರಿಗೆ ತೋಚಿದಂತೆ ರೆಕ್ಕೆ ಪುಕ್ಕ ಸೇರಿಸಿ, ಬಣ್ಣ ಹಚ್ಚಿ ಮಾಟದ ವರ್ಣನೆಯನ್ನು ಅದರ ದುಷ್ಪರಿಣಾಮವನ್ನೂ ಭೀತಿ ಹುಟ್ಟಿಸುವಂತೆ ವರ್ಣಿಸತೊಡಗಿದರು.

ಹೋಗಿ ಯಾವುದಾದರೂ ಜೋಯಿಸರನ್ನು ಕರಕೊಂಡ ಬನ್ರಿ ಎಂದು ದುಂಬಾಲು ಬಿದ್ದ ಪತ್ನಿಯನ್ನು ಕಂಡು, ಅದೆಲ್ಲಾ ಸಿರ್ಕ್ ಕಣೇ ಎನ್ನುತ್ತಾ ಬಾಯಿ ತೆರೆದವರನ್ನು ಅಡ್ಡಡ್ಡ ನುಂಗುವಂತೆ ನೋಡುತ್ತಾ, ಸಿರ್ಕ ಆದರೆ ಉಪ್ಪಿನ ಕಾಯಿಗೆ ಸುರಿಯಿರಿ. ಈ ಮಾರಿ ಇಲ್ಲಿಂದ ತೊಲಗಲಿ ಎಂದು ನಾನಿದ್ದರೆ, ಸಿರ್ಕ ಅಂತೆ ಸಿರ್ಕ ಎಂದು ಎಲ್ಲರೆದುರು ಗೊಣಗುಟ್ಟಿದಾಗ ಅವಮಾನವಾದಂತಾದರೂ ತನ್ನ ಗೆಳೆಯನಲ್ಲೇ ಈ ಬಗ್ಗೆ ವಿಚಾರಿಸುವುದು ಸೂಕ್ತವೆಂದು ಗೆಳೆಯನ ಮೊಬೈಲಿಗೆ ಫೋನಾಯಿಸಿ ಇಲ್ಲಿನ ವಾರ್ತೆಯನ್ನೆಲ್ಲಾ ಬಿತ್ತರಿಸತೊಡಗಿದರು.

ನಾನೀಗಲೇ ಒಳ್ಳೆಯ ಮಂತ್ರವಾದಿಯೊಬ್ಬರನ್ನು ಕರೆ ತರುತ್ತೇನೆ ಎಂದ ಗೆಳೆಯನ ಮಾತು ಕೇಳಿ ಮನಸ್ಸು ಹಗುರಗೊಂಡಂತಾಯಿತು.

ಸೋದರತ್ತೆಯ ಹಿತ್ತಲಿನಲ್ಲಿ ಯಾಕಿಷ್ಟು ಜನ ಜಮಾಯಿಸಿದ್ದಾರೆ ಎಂದರಿವಾಗದ ಜಲೀಲ್ ಡವಗುಟ್ಟುವ ಹೃದಯದೊಂದಿಗೆ ಅಂಗಳಕ್ಕೆ ಕಾಲಿರಿಸಿದಾಗ ಪಕ್ಕದಲ್ಲೇ ಕಾರೊಂದು ಬಂದು ನಿಂತಿತು.

ಕಾರಿನಿಂದಿಳಿದ ಜುಬ್ಬಾಧಾರಿಯೊಬ್ಬರು ಬಹಳ ಠೀವಿಯಿಂದ ಹೆಜ್ಜೆ ಹಾಕುತ್ತಿರುವಾಗ ಜನರೆಲ್ಲಾ ಆದರಪೂರ್ವಕವಾಗಿ ಬರಮಾಡಿಕೊಂಡರು.

ಗೋಡೆಗಾನಿಸಿದ್ದ ಕುಂಬಳಕಾಯಿ ಇಲ್ಲಿಯ ಕೇಂದ್ರ ಬಿಂದು ಎಂದರಿವಾಗುವಾಗ ಜಲೀಲ್‌ನ ಮನ ಸಾಂತ್ವನಗೊಂಡಿತು.

ಜುಬ್ಬಾದಾರಿ ಯಾವುದೋ ವಸ್ತುವನ್ನು ಹಿಡಿದು ಲೆಕ್ಕ ಹಾಕುತ್ತಿರುವಂತೆ ಮಾಡುತ್ತಿರುವಾಗ ಎಲ್ಲರೂ ಕುತೂಹಲದ ಮೋರೆಯೊಂದಿಗೆ ಅವರತ್ತಲೇ ದೃಷ್ಟಿ ನೆಟ್ಟಿದ್ದರು.

ಜುಬ್ಬಾಧಾರಿ ತಲೆ ಎತ್ತಿ ಎಲ್ಲರನ್ನೊಮ್ಮೆ ದೀರ್ಘವಾಗಿ ದಿಟ್ಟಿಸಿ ನಿಟ್ಟುಸಿರು ಬಿಡುತ್ತಾ ಹೇಳತೊಡಗಿದರು. ಅದರ ದುಷ್ಪರಿಣಾಮ. ಇದು ಅಂತಿಂಥದ್ದಲ್ಲ ಕೇರಳದವರಿಂದ ಮಾಡಿಸಿದ್ದು ಬಹಳ ಘಾಟಿ. ವಂಶವನ್ನು ಸರ್ವನಾಶ ಮಾಡುವ ಹುನ್ನಾರದಿಂದಲೇ ಇದನ್ನು ಮಾಡಿದ್ದು ಮುಂದಿನ ಏಳು ತಲೆಮಾರಿನ ತನಕ ಇದರ ಪೀಡೆ ಮುಂದುವರಿಯುತ್ತದೆ. ಅದರ ದುಷ್ಪರಿಣಾಮ. ಅಷ್ಟೊಂದು ತೀಕ್ಷ್ಣವಾಗಿದೆ.

ಅಯ್ಯೋ... ದೇವರೇ... ಎಂಬ ಉದ್ಘಾರ ಕೆಲವರಿಂದ ಕೇಳಿ ಬಂದದ್ದೇ ತಡ 'ಯಾ ಅಲ್ಲಾಹ್' ಎನ್ನುತ್ತಾ ಕುಸಿಯುತ್ತಿದ್ದ ಹಫ್ಸಾರಿಗೆ ಯಾರೋ ನೀರು ಚಿಮುಕಿಸಿ ಗಾಳಿ ಹಾಕತೊಡಗಿದರು. ಹಸನಾಕನವರಂತೂ ಸೋತ ಧ್ವನಿಯಲ್ಲಿ ಇದಕ್ಕೆ ಏನಾದರೂ ಪರಿಹಾರ ಇದೆಯಾ ಬಾಬಾ... ಇದನ್ನು ಮಾಡಿಸಿದವರು ಯಾರು ಎಂದು ತಿಳಿಯಬಹುದೇ ಎಂದುಸುರಿದರು.

ಇದಕ್ಕೆ ಪರಿಹಾರ ಮಾಡಬಹುದು. ತುಂಬಾ ಖರ್ಚು ಉಂಟು. ಆದರೂ ನಿಮಗೆ ಸ್ವಲ್ಪ ರಿಯಾಯಿತಿಯಲ್ಲಿ ಮಾಡುವ. ಆದರೆ ಈ ಮಾಟವನ್ನು ಮಾಡಿದವರ್‍ಯಾರು ಎಂದು ತಿಳಿಯುವುದು ಉಚಿತವಲ್ಲ. ಒಟ್ಟಿನಲ್ಲಿ ನಿಮಗೆ ಬಂದ ಕಂಟಕ ನಿವಾರಣೆಯಾಗಬೇಕು. ನಂತರ ಯಾವ ಪೀಡೆಯೂ ಬಾಧಿಸಬಾರದೆಂದು ಭದ್ರವಾದ ತಡೆಯನ್ನೇ ನಿರ್ಮಿಸುತ್ತೇನೆ ಎಂದ ಬಾಬಾರಮಾತು ಕೇಳಿ ಎಲ್ಲರ ಮುಖದಲ್ಲೂ ಸಮಾಧಾನದ ಗೆರೆ ಗೋಚರಿಸಿತು.

ಹಸನಾಕರ ಗೆಳೆಯನಂತೂ ಒಂದು ಕೋಲು ಉದ್ದ ಬಿಟ್ಟಂತಾಗಿದ್ದರು. ನಾನು ಇವರನ್ನು ಕರಕೊಂಡು ಬರದಿದ್ದರೆ ಬಹಳ ಅನಾಹುತ ನಡೆಯುತ್ತಿತ್ತು. ಈ ಬಾಬಾ ಮಂತ್ರ ತಂತ್ರದಲ್ಲಿ ಎತ್ತಿದ ಕೈ. ಅವರು ಹೇಳಿದ್ದು ಈ ವರೆಗೆ ಸುಳ್ಳಾಗಿಲ್ಲ. ಅವರು ಪರಿಹಾರ ಮಾಡುತ್ತೇನೆ ಎಂದದ್ದೇ ನಿಮ್ಮ ಮಹಾ ಭಾಗ್ಯ ಇನ್ನು ಹೆದರುವ ಅವಶ್ಯಕತೆಯೇ ಇಲ್ಲ ಎಂದೆನ್ನುತ್ತಾ ಗೆಳೆಯನನ್ನು ಬದಿಗೆ ಕರೆದು ಧೈರ್ಯ ತುಂಬತೊಡಗಿದರು.

ಹಸನಾಕನವರು ನಡುಗುವ ಸ್ವರದಿಂದಲೇ ಇದಕ್ಕೆಲ್ಲಾ ಖರ್ಚು... ಎನ್ನುತ್ತಾ ಮಾತಿಗೆ ತಡವರಿಸಿದಾಗ ಅಯ್ಯೋ ಪ್ರಾಣಕ್ಕಿಂತ ನಿನಗೆ ದುಡ್ಡೇ ಮುಖ್ಯವಾ... ಈಗ ಸಾಲ-ಸೋಲ ಮಾಡಿ ಇದರ ಪರಿಹಾರ ಕಾರ್ಯ ಮಾಡಿಸು. ನಂತರ ಫೈನಾನ್ಸ್‌ನಿಂದಾದರೂ ಸಾಲ ಪಡೆದು ನಿಧಾನಕ್ಕೆ ತೀರಿಸು.

ಗೆಳೆಯ ಹೇಳುವುದು ಸರಿ ಎಂದೆನಿಸಿತು **(14ನೇ ಪುಟಕ್ಕೆ)**

## ತಂತಾವಿ ನಿಧನ



**ಕೈರೋ:** ಈಜಿಪ್ಟ್‌ನ ಪ್ರಸಿದ್ಧ ಇಸ್ಲಾಮಿಕ್ ಅಧ್ಯಯನ ಕೇಂದ್ರ ಅಲ್ ಅಝ್ಹರ್‌ನ ಮುಖ್ಯ ಇಮಾಮರಾದ ಶೇಖ್ ಮುಹಮ್ಮದ್ ಸೈಯದ್ ತಂತಾವಿ ಕಳೆದ ವಾರ ಸೌದಿ ಅರೇಬಿಯಾದ ರಿಯಾದ್‌ನಲ್ಲಿ ಹೃದಯಾಘಾತದಿಂದ ನಿಧನರಾದರು.

82ರ ಹರೆಯದ ತಂತಾವಿಯವರು 1986ರಲ್ಲಿ ಪ್ರಧಾನ ಮುಫ್ತಿಯಾಗಿ ನೇಮಕಗೊಂಡಿದ್ದರು. ಬಳಿಕ 1996ರಲ್ಲಿ ಅವರು ಅಲ್ ಅಝ್ಹರ್ ಮಸೀದಿ ಹಾಗೂ ವಿಶ್ವವಿದ್ಯಾನಿಲಯದ ಮುಖ್ಯ ಶೇಖ್ ಆಗಿ ನೇಮಕಗೊಳ್ಳುವ ವರೆಗೆ ಸುಮಾರು ಹತ್ತು ವರ್ಷಗಳವರೆಗೆ ಅದೇ ಹುದ್ದೆಯಲ್ಲಿದ್ದರು. ಕಿಂಗ್ ಫೈಸಲ್ ಅಂತಾರಾಷ್ಟ್ರೀಯ ಪುರಸ್ಕಾರ ಪ್ರದಾನ ಸಮಾರಂಭದಲ್ಲಿ ಪಾಲ್ಗೊಳ್ಳಲು ತಂತಾವಿ ರಿಯಾದ್‌ಗೆ ಆಗಮಿಸಿದ್ದ ಸಂದರ್ಭದಲ್ಲಿ ನಿಧನರಾದರು.

## ಚೀನಾ: ಸರಕಾರೇತರ ಸಂಘಟನೆಗಳಿಗೆ ಕಠಿಣ ಕಾನೂನು

**ಬೀಜಿಂಗ್:** ಸ್ವಯಂ ಸೇವಾ ಸಂಘಟನೆಗಳ ಮೇಲೆ ಹೇರಿದ್ದ ನಿಯಂತ್ರಣಗಳನ್ನು ಚೀನಾ ಇನ್ನಷ್ಟು ಕಠಿಣಗೊಳಿಸಿದೆ. ಕಠಿಣ ವಿಧಿ ವಿಧಾನಗಳನ್ನು ಪಾಲಿಸಿದರೆ ಮಾತ್ರವೇ ಸರಕಾರೇತರ ಸಂಘಟನೆಗಳು ವಿದೇಶದಿಂದ ಧನ ಸಹಾಯವನ್ನು ಸ್ವೀಕರಿಸಬಹುದಾಗಿದೆ. ಧಾರ್ಮಿಕ ಸಂಘಟನೆಗಳು ವಿದೇಶದಿಂದ ಹಣಕಾಸಿನ ಹಣವನ್ನು ಪಡೆಯುವಾಗ ಸರಕಾರದಿಂದ ಪೂರ್ವಾನುಮತಿಯನ್ನು ಪಡೆಯಬೇಕು.

ಈ ತಿಂಗಳಿನಿಂದ ಜಾರಿಗೆ ಬಂದಿರುವ ಈ ವಿಧಿಗಳ ವಿರುದ್ಧ ಸರಕಾರೇತರ ಸಂಘಟನೆಗಳು ಪ್ರತಿಭಟನೆಗಿಳಿದಿವೆ. ಚೀನಾದ ವಿವಿಧ ಕ್ಷೇತ್ರಗಳಲ್ಲಿ 2,30,000 ಸಂಘಟನೆಗಳು ಕಾರ್ಯ ಪ್ರವೃತ್ತವಾಗಿವೆ. ಇವುಗಳಲ್ಲಿ ಕೆಲವು ಸಂಘಟನೆಗಳಿಗೆ ಚೀನಾ ಸರಕಾರ ಧನ ಸಹಾಯವನ್ನು ನೀಡುತ್ತಿದೆ. ಹೆಚ್ಚಿನ ಸಂಘಟನೆಗಳು ವಿದೇಶಿ ಹಣಕಾಸು ನೆರವನ್ನು ಪಡೆಯುತ್ತಿವೆ. ಈ ಹಣವನ್ನು ಸರಕಾರಿ ವಿರೋಧಿ ಚಟುವಟಿಕೆಗಳಿಗೆ ಬಳಸಲಾಗುತ್ತಿದೆಯೆಂಬುದು ಸರಕಾರದ ಸಂದೇಹವಾಗಿದೆ. ಆದುದರಿಂದ ಸಂಘಟನೆಗಳ ಮೇಲೆ ತೀವ್ರ ನಿಯಂತ್ರಣಕ್ಕೆ ಚೀನಾ ಸರಕಾರ ಸಿದ್ಧವಾಗಿದೆ.

## ಪುಟಾಣಿ ನಡೆಯುತ್ತಿದ್ದಾನೆ

**ಲಂಡನ್:** ಆರು ತಿಂಗಳ ಪ್ರಾಯದ ಸೇವಿಯರ್ ಕಿಂಗ್ ಎಂಬ ಶಿಶು ನಡೆಯಲು ಆರಂಭಿಸಿದೆ. ಸಾಮಾನ್ಯವಾಗಿ ಚಿಕ್ಕಮಕ್ಕಳು ನಡೆಯುವ ವಯಸ್ಸಿಗಿಂತ ಕೆಲವು ತಿಂಗಳುಗಳ ಮೊದಲೇ ನಡೆಯುತ್ತಿರುವುದು ಸೇವಿಯರ್‌ನ ವಿಶೇಷತೆಯಾಗಿದೆ. ಆರು ಅಡಿ ದೂರದ ವರೆಗೆ ಅವನು ನಡೆಯಬಲ್ಲನೆಂದು ಅವನ ತಂದೆ ತಾಯಿಯರು ತಿಳಿಸಿದ್ದಾರೆ.

## ಬ್ರಿಟನ್: ಜ್ಯೂಸ್‌ನಲ್ಲಿ ವಿಷ

**ಲಂಡನ್:** ಬ್ರಿಟನ್‌ನಲ್ಲಿ ಪ್ರಮುಖ ಹದಿಮೂರು ಕಂಪೆನಿಗಳು ಮಾರುಕಟ್ಟೆಗೆ ಬಿಡುಗಡೆಗೊಳಿಸುವ ಫ್ರುಟ್ ಜ್ಯೂಸ್ ಮತ್ತು ಸ್ಕ್ವಾಶ್‌ಗಳಲ್ಲಿ ಕ್ಯಾನ್ಸರ್‌ನಂತಹ ರೋಗಗಳಿಗೆ ಕಾರಣವಾಗುವ ಮಾರಕ ವಿಷವಿರುವುದು ಪತ್ತೆಯಾಗಿದೆ. ರೋಯಲ್ ಸೊಸೈಟಿ ಆಫ್ ಕೆಮಿಸ್ಟ್ರಿಯ ವಿಜ್ಞಾನಿಗಳು ನಡೆಸಿದ ಪರೀಕ್ಷೆಯಲ್ಲಿ ವಿಷಾಂಶಗಳಿರುವುದು ಪತ್ತೆಯಾಗಿದೆ. ಪ್ಲಾಸ್ಟಿಕ್ ಬಾಟ್ಲಿಗಳನ್ನು ನಿರ್ಮಿಸಲು ಬಳಸುವ ರಾಸಾಯನಿಕ ವಸ್ತುಗಳು ಹೆಚ್ಚಿನ ಪ್ರಮಾಣದಲ್ಲಿ ಜ್ಯೂಸ್‌ನಲ್ಲಿದೆ. ಅದನ್ನು ಸೇವಿಸುವ ಲಕ್ಷಾಂತರ ಮಂದಿಯ ಬದುಕು ಆತಂಕಕ್ಕೊಳಗಾಗಿದೆ. ಆದರೆ ಯಾವ ಕಂಪೆನಿಗಳ ಉತ್ಪನ್ನಗಳೆಂಬುದನ್ನು ವಿಜ್ಞಾನಿಗಳು ಬಹಿರಂಗಗೊಳಿಸಿಲ್ಲ.

## ಮಾಟದ ಕುಂಬಳ ಕಾಯಿ (13ನೇ ಪುಟದಿಂದ)

ಹಸನಾಕನವರಿಗೆ. ಮಾಟ ಪರಿಹಾರಕ್ಕಾಗುವ ಖರ್ಚು ವೆಚ್ಚದ ಅಂದಾಜು ಲೆಕ್ಕ ಇಂತಿದೆ ಎನ್ನುತ್ತಾ ನೀಡಿದ ಉದ್ದದ ಪಟ್ಟಿಯನ್ನು ನೋಡಿ ಹಸನಾಕನವರಿಗೆ ತಲೆ ತಿರುಗಿದಂತಾಯ್ತು. ಸಾವರಿಸಿಕೊಂಡು ಮತ್ತೊಮ್ಮೆ ಕಣ್ಣಾಡಿಸಿದರು. ಅಕ್ಕಿ 50ಕೆ.ಜಿ. ಬೆಲ್ಲ 10ಕೆ.ಜಿ., ಮೊಟ್ಟೆ 2 ಡಜನ್, ಕಪ್ಪು ಕೋಳಿ 4, ಬಿಳಿಬಟ್ಟೆ 12 ಮೀಟರ್, ಊದಿನ ಕಡ್ಡಿ 50, ತೆಂಗಿನ ಕಾಯಿ 20, ನಮ್ಮ ಫೀಸು 5000 ಅದನ್ನು ಎತ್ತಿ ಬಿಸಾಡುವವನ ಫೀಸು 1000.

ಕೊನೆಯದು ಅವರಿಗೆ ಅರ್ಥವಾಗಲಿಲ್ಲ. ಇದು ಏನು ಎಂಬಂತೆ ಗೆಳೆಯನಲ್ಲಿ ವಿಚಾರಿಸತೊಡಗಿದರು.

"ಅದನ್ನು ಅಂದರೆ ಮಾಟ ಮಾಡಿಟ್ಟ ಕುಂಬಳ ಕಾಯಿಯನ್ನು ಎತ್ತಿ ಸಮುದ್ರಕ್ಕೆ ಬಿಸಾಡಬೇಕು. ಅದನ್ನು ಮುಟ್ಟಲು ಯಾರೂ ಮುಂದೆ ಬರುವುದಿಲ್ಲ. ಯಾಕೆಂದರೆ ಅದು ಕೊಂಡು ಹೋದವರಿಗೆ ಅದರ ಫಲ ತಟ್ಟುವ ಸಾಧ್ಯತೆ ಇದೆ. ಅದಕ್ಕಾಗಿ ನಮ್ಮ ಕಡೆಯ ಹುಡುಗನೊಬ್ಬನಿಂದ ಆ ಕೆಲಸ ಮಾಡಿಸುವುದು. ಅವನ ಫೀಸ್ 1000" ಎನ್ನುತ್ತಾ ಬಾಬಾ ವಿವರಿಸತೊಡಗಿದರು.

ಎಲ್ಲರ ನೋಟದಲ್ಲಿ ಭಯ ಮಿಶ್ರಿತ ಕುತೂಹಲವಿದ್ದರೆ ಜಲೀಲ್‌ನ ಮುಖದಲ್ಲಿ ತುಂಟತನದ ಕುರುಹಿತ್ತು. ಇಲ್ಲಿನ ಬೆಳವಣಿಗೆ ಕಂಡು ಮೀಸೆಯಡಿಯಲ್ಲಿ ನಗು ಇಣುಕುತ್ತಿತ್ತು. ಕಷ್ಟಪಟ್ಟು ಅದನ್ನು ತಡೆ ಹಿಡಿದಿದ್ದ.

ಹಸನಾಕನವರಂತೂ ಇಷ್ಟು ದುಡ್ಡನ್ನು ಈಗ ಎಲ್ಲಿಂದ ಹೊಂದಿಸಲಿ ಎಂದು ತಲೆ ಕೆರೆಯುತ್ತಾ... ಚಿಂತಿಸುತ್ತಿದ್ದರು.

ಇನ್ನು ತಾನು ಸುಮ್ಮನಿದ್ದರೆ ಪರಿಸ್ಥಿತಿ ಹದಗೆಡಬಹುದೆಂದರಿತ ಜಲೀಲ್ ಮುಂದೆ ಬಂದವನೇ... "ಆ ಕುಂಬಳ ಕಾಯಿಯನ್ನು ನಾನು ಅಲ್ಲಿಂದ ಎತ್ತುತ್ತೇನೆ. ನನಗೆ ಕೊಡಿ ಒಂದು ಸಾವಿರ"ವೆಂದಾಗ ಎಲ್ಲರೂ ದಿಙ್ಮೂಢರಾದರು.

ಒಂದು ಸಾವಿರಕ್ಕೋಸ್ಕರ ಇಲ್ಲದ ಆಪತ್ತನ್ನು ಮೈಮೇಲೆ ಎಳೆದುಕೊಳ್ಳುವುದು ಯಾಕೆಂದು ಅಲ್ಲಿದ್ದವರು ಬುದ್ಧಿವಾದ ಹೇಳ ಹೊರಟರು. ಹಸನಾಕನವರಂತೂ ತಮ್ಮ ಸೋದರಳಿಯನಿಗೆ ಮಮತೆಯಿಂದ ಗದರಿಸತೊಡಗಿದರು. ಅದೆಲ್ಲಾ ಮಕ್ಕಳಾಟಿಕೆಯಲ್ಲ. ಏನಾದರೂ ಎಡವಟ್ಟಾದರೆ ಏನು ಗತಿ ಎಂಬಂತೆ ಭೀತಿಯಿಂದ ಅವನು ಮುಂದಡಿಯಿಡದಂತೆ ತಡೆದರು.

ಜಲೀಲ್ ನಗುತ್ತಾ... ಮಾವಾ... ಈ ಕುಂಬಳ ಕಾಯಿಯನ್ನು ತಂದವನು ನಾನೇ... ಅಲ್ಲಿಟ್ಟವನೂ ನಾನೇ... ಎಂದಾಗ ಯಾರೂ ಅವನ ಮಾತನ್ನು ನಂಬುವ ಪರಿಸ್ಥಿತಿಯಲ್ಲಿರಲಿಲ್ಲ.

ನಮ್ಮ ಹಿತ್ತಲಿನಲ್ಲಿ ಬೆಳೆದ ಮೊದಲ ಕುಂಬಳ ಕಾಯಿಯದು. ಮಾವನಿಗೆ ಕುಂಬಳ ಕಾಯಿ ಎಂದರೆ ಪ್ರಾಣ. ಅವರಿಗೆ ಇದನ್ನು ತಲುಪಿಸು ಎಂದು ಅಮ್ಮ ನನಗೆ ದಂಬಾಲು ಬಿದ್ದಾಗ ಹೊರಲಾಗದೆ ಹೊತ್ತುಕೊಂಡು ಬಂದೆ. ಇಲ್ಲಿ ಬರುವಾಗ ಬಾಗಿಲಿಗೆ ಬೀಗ. ಇದನ್ನು ಹೊತ್ತುಕೊಂಡು ಎಲ್ಲಿಗೆ ತಿರುಗಲಿ ಎಂದು ಅಲ್ಲಿ ಗೋಡೆಗಾಣಿಸಿ ಇಟ್ಟೆ. ಯಾರಾದರೂ ಕದ್ದುಕೊಂಡು ಹೋಗುವುದು ಬೇಡವೆಂದು ಅಲ್ಲೇ ಒಲೆಯಲ್ಲಿದ್ದ ಇದ್ದಿಲಿನ ತುಂಡಿನಿಂದ ಚಿತ್ರ ಬಿಡಿಸಿ ನಾನು ಪೇಟೆ ಕಡೆಗೆ ಹೋಗಿ ಬಂದೆ. ಇಲ್ಲಿ ಬರುವಾಗ ಸನ್ನಿವೇಶ ಬದಲಾಗಿತ್ತು ಎಂದು ಮಾತು ನಿಲ್ಲಿಸಿ ಅಲ್ಲಿದ್ದವರತ್ತ ದಿಟ್ಟಿಸ ತೊಡಗಿದ.

ಕುತೂಹಲಕರವಾಗಿದ್ದ ಪ್ರಸಂಗ ಈ ರೀತಿ ಮುಕ್ತಾಯವಾದದ್ದು ಕೆಲವರಿಗೆ ಪಥ್ಯವಾಗಲಿಲ್ಲ. ಒಡೆದ ಬಲೂನಿನಂತೆ ಟುಸ್ಸಾದ ಮುಖದೊಂದಿಗೆ ಯಾವುದು ಸುಳ್ಳೋ, ಯಾವುದು ನಿಜವೋ... ಬಲ್ಲವನು ಒಬ್ಬನೇ... ಎನ್ನುತ್ತಾ ತಮ್ಮ ತಮ್ಮೊಳಗೆ ಮಾತಾಡಿಕೊಂಡು ಜನರು ಜಾಗ ಖಾಲಿ ಮಾಡ ತೊಡಗಿದರು.

ಮನೆಯೊಳಗಡೆಯಿದ್ದ ಫೋನ್ ಟ್ರಿನ್ ಗುಟ್ಟಿದಾಗ ಹಪ್ಪಾ ರಿಸೀವರ್ ಎತ್ತಿ ಕಿವಿಗಾನಿಸಿದರು. ಅತ್ತ ಕಡೆಯಿಂದ ನಾದಿನಿಯ ಸ್ವರ ಕೇಳಿ ಬರ ತೊಡಗಿತು.

ಅತ್ತಿಗೆ... ಅಣ್ಣನಿಗೆ ಕುಂಬಳ ಕಾಯಿ ಇಷ್ಟವೆಂದು ಇದ್ದದ್ದರಲ್ಲಿ ದೊಡ್ಡದಾಗಿದ್ದ ಕುಂಬಳ ಕಾಯಿಯನ್ನು ಕೊಟ್ಟು ಕಳುಹಿಸಿದ್ದೇನೆ. ಪದಾರ್ಥ ಮಾಡಿದ್ದೀರಾ? ಅರ್ಧವನ್ನು ನಿಮ್ಮಿಷ್ಟದ ಕಾಷ್ ಹಲ್ವ ಮಾಡಿ ಸವಿಯಿರಿ ಅತ್ತಿಗೆ ಎನ್ನುತ್ತಾ ಎಗ್ಗಿಲ್ಲದೆ ಮಾತಾಡ್ತಾ ಇದ್ದರೂ ಹಪ್ಪಾರಿಗೆ ಬರೀ... ಹೂಂ ಎಂದಷ್ಟೇ ಉತ್ತರಿಸಲು ಸಾಧ್ಯವಾಗಿತ್ತು.

## ಪುರುಷರಿಗೆ ನಿರೋಧಕ ಇಂಜೆಕ್ಷನ್

**ವಾಷಿಂಗ್ಟನ್:** ಗರ್ಭಧಾರಣೆಯನ್ನು ತಡೆಹಿಡಿಯುವ ಪುರುಷರಿಗೆ ಇಂಜೆಕ್ಷನ್ ಬರಲಿದೆ. ಬ್ರಿಟನ್ಸ್ ಮ್ಯಾಂಚೆಸ್ಟರ್ ಎಡಿನ್‌ಬರ್ಗ್‌ನಲ್ಲಿ 26 ದಂಪತಿಗಳ ಮೇಲೆ ಇದರ ಪ್ರಯೋಗ ಆರಂಭಗೊಂಡಿದೆ. ಬೀಜೋತ್ಪಾದನೆಯನ್ನು ತಡೆಯುವುದಕ್ಕೆ ಎರಡು ತಿಂಗಳಲ್ಲಿ ಎರಡು ಇಂಜೆಕ್ಷನ್ ಪುರುಷರಿಗೆ ನೀಡಲಾಗಿದೆ. ಪುರುಷರ ಲೈಂಗಿಕ ಹಾರ್ಮೋನಾದ ಟೆಸ್ಟೋಸ್ಟಿರೋನ್ ಮಹಿಳಾ ಲೈಂಗಿಕ ಹರ್ಮೋನಾದ ಪೋಜಸ್ಟಿರೋನ್‌ನ ನಕಲಿ ಪ್ರತಿಯನ್ನು ಇಂಜೆಕ್ಷನ್ ಮೂಲಕ ನೀಡಲಾಗುತ್ತದೆ. ಮೆದುಳು ಇದನ್ನು ಗುರುತಿಸಿದಂತೆ ಬೀಜೋತ್ಪಾದನೆ ನಡೆಸುವ ಹಾರ್ಮೋನು ಕಡಿಮೆಯಾಗುವುದೆಂದು ಸಂಶೋಧಕರು ಹೇಳಿದ್ದಾರೆ. ಇಂಜೆಕ್ಷನ್ ಪಡೆಯುವುದನ್ನು ನಿಲ್ಲಿಸಿದರೆ ಪುರುಷರಲ್ಲಿ ಬೀಜೋತ್ಪಾದನೆ ಸಾಮರ್ಥ್ಯ ಪುನರಾರಂಭವಾಗುವುದೆಂದು ಅವರು ತಿಳಿಸಿದ್ದಾರೆ.

## ಇರಾಕ್: ಹಿಂಸೆಗೆ ಕಡಿವಾಣವಿಲ್ಲ

**ಬಾಗ್ದಾದ್:** ಇರಾಕ್‌ನಲ್ಲಿ ಬ್ರಿಟಿಷ್ ಸೈನಿಕರು ಸೆರೆಯಾಳುಗಳಿಗೆ ನೀಡಿದ ಹಿಂಸೆಯ ಕುರಿತು ಹೊಸ ಸಾಕ್ಷ್ಯಗಳು ಲಭ್ಯವಾಗಿವೆ. ಕಣ್ಣಿಗೆ ಬಟ್ಟೆ ಕಟ್ಟಿ ಇರಾಕಿ ಕೈದಿಗಳು ತಲೆಯ ಕೂದಲನ್ನು ಹಿಡಿದೆಳೆಯುವ ಭಾವಚಿತ್ರ ಮತ್ತು ವಿಡಿಯೋ ದೃಶ್ಯಗಳು ಬಹಿರಂಗಗೊಂಡಿದೆ. ಇರಾಕಿ ಕೈದಿ ಬಹಾಮೂಸ್ ಬ್ರಿಟಿಷ್ ಸೆರೆಯಲ್ಲಿ ಕೊಲ್ಲಲ್ಪಟ್ಟಿರುವ ಘಟನೆಯ ಕುರಿತು ತನಿಖೆ ನಡೆಸುತ್ತಿರುವ ತನಿಖಾ ಸಮಿತಿ ಈ ಹೊಸ ಸಾಕ್ಷ್ಯಗಳನ್ನು ಬಹಿರಂಗಗೊಳಿಸಿದೆ. ಬಹಾಮೂಸ್ ಕೊಲೆ ಕೇಸಿನಲ್ಲಿ ಕರ್ನಲ್ ಜಾರ್ಜ್ ಮೆಂಡೋನ್ಕಾ ಮುಖ್ಯ ಆರೋಪಿಯಾಗಿದ್ದು, ಆತನನ್ನು ಪ್ರಶ್ನಿಸುತ್ತಿರುವ ಸಂದರ್ಭದಲ್ಲಿ ಹೊಸ ಹಿಂಸೆಯ ದೃಶ್ಯಗಳು ಬಹಿರಂಗವಾದವು. ಮೆಂಡೋನ್ಕಾರ ನೇತೃತ್ವದಲ್ಲಿರುವ ಬ್ರಿಟನ್ ಸೇನೆ ಬಹಾಮೂಸಾರನ್ನು ಮನೆಯಿಂದ ಕರೆದೊಯ್ದು 36 ಗಂಟೆಯೊಳಗೆ ಅವರ ಹತ್ಯೆ ನಡೆದಿತ್ತು.

## ಅಮೇರಿಕ: ಅಣ್ವಸ್ತ್ರ ಕಡಿತ?

**ವಾಷಿಂಗ್ಟನ್:** ಜಗತ್ತಿನಲ್ಲಿ ಅತ್ಯಧಿಕ ಅಣ್ವಸ್ತ್ರಗಳನ್ನು ಹೊಂದಿರುವ ಅಮೇರಿಕ ಅದರ ಸಂಖ್ಯೆಯನ್ನು ಕಡಿತಗೊಳಿಸಲು ಯೋಚಿಸುತ್ತಿದೆಯೆಂದು ವರದಿಯಾಗಿದೆ. ಬರಾಕ್ ಒಬಾಮಾ ರೂಪಿಸುತ್ತಿರುವ ಹೊಸ ಅಣು ನೀತಿಯಲ್ಲಿ ಈ ಕುರಿತು ಘೋಷಣೆ ಹೊರಡಿಸಲಾಗುವುದೆಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. ಅಮೇರಿಕದ ಬಳಿ 9,960 ಸಜೀವ ಅಣ್ವಸ್ತ್ರಗಳಿವೆ. ಇದರಲ್ಲಿ 5,735 ಅಣ್ವಸ್ತ್ರಗಳನ್ನು ಯಾವ ಸಮಯದಲ್ಲಿಯೂ ಉಪಯೋಗಿಸಲು ಸಾಧ್ಯವಿರುವಂತೆ ಸಜ್ಜೀಕರಿಸಲಾಗಿದೆ.

## ಬುರ್ಖಾದ ಕುರಿತು ಚರ್ಚೆ ನಡೆಸೋಣ

(5ನೇ ಪುಟದಿಂದ)

ತಂದುಕೊಟ್ಟಂತಹ ಪ್ರವಾದಿಯನ್ನೇ ಪರ್ದಾವನ್ನು ಮುಂದಿಟ್ಟು ಶೋಷಕ ಎಂದು ಕರೆದರೆ ಅದನ್ನು ಯಾರಿಂದ ತಾನೇ ವಿವೇಕವೆಂದು ಒಪ್ಪಿಕೊಳ್ಳಲು ಸಾಧ್ಯವಾಗುತ್ತದೆ? ಅದನ್ನು ಅಭಿವ್ಯಕ್ತಿಯೆಂದೋ ಅಭಿಪ್ರಾಯ ಸ್ವಾತಂತ್ರ್ಯವೆಂದೋ ಆರೋಗ್ಯದಾಯಕ ಚರ್ಚೆಯೆಂದೋ ಹೇಳಲು ಹೇಗೆ ಸಾಧ್ಯವಾದೀತು?

ಒಟ್ಟಿನಲ್ಲಿ ಇಂತಹ ಕೆಣಕುಗಳನ್ನೆಲ್ಲ ಆರೋಗ್ಯಪೂರ್ಣವಾಗಿ ನಿಭಾಯಿಸಬೇಕಾದರೆ ಮುಸ್ಲಿಮರಲ್ಲಿ ಸಮರ್ಥ ನಾಯಕತ್ವವಿರುವುದು ಅವಶ್ಯಕವೆಂದು ಸ್ಪಷ್ಟವಾಗುತ್ತದೆ. ಅದು ಇಸ್ಲಾಮಿನ ಮೂಲಭೂತ ಆಶಯದಂತೆ ಜೀವಿಸುವವರ ಕೈಗೆ ಹೋಗಬೇಕು. ಅಂತಹವರಿಂದ ಸಮುದಾಯಕ್ಕೆ ಮಾರ್ಗದರ್ಶನ ಸಿಕ್ಕರೆ ರಾದ್ಧಾಂತಗಳಿಗೆ, ಮಾತ್ರವಲ್ಲ ವಿರೋಧಿಗಳ ಗಂಡಾಂತರಕಾರಿ ಕೃತ್ಯಗಳಿಗೂ ಆಸ್ಪದ ಸಿಗಲಾರದು. ಅಂದರೆ ಸಮುದಾಯಕ್ಕೆ ಮಾರ್ಗದರ್ಶನ ನೀಡುವ ನಾಯಕರು ಮೂಲಭೂತವಾದಿಗಳಾಗುವುದು ಮುಖ್ಯವಾಗಿದೆ. ಅವರಿಂದ ಮಾತ್ರ ಪ್ರತಿಭಟನೆ ಇತ್ಯಾದಿಗಳಿಗೆ ರಚನಾತ್ಮಕ ಸ್ವರೂಪ ನೀಡಲು ಸಾಧ್ಯವಿದೆ.

ಉದಾರವಾದಿಗಳೆಂದರೆ ತಸ್ಲೀಮಾರು ಪ್ರತಿನಿಧಿಸುವ ಮೌಲ್ಯಗಳಲ್ಲ. ಇಸ್ಲಾಮಿನ ಉದಾರತೆಯೆಂದರೆ, ಧರ್ಮದಂತೆ ಜೀವಿಸುವುದು, ಧರ್ಮದ ಹೆಸರೆತ್ತಿ ಇತರರನ್ನು ಸುಮ್ಮ ಸುಮ್ಮನೆ ಕೆಣಕದಿರುವುದಾಗಿದೆ. ಅಷ್ಟಕ್ಕೂ ತಸ್ಲೀಮಾರನ್ನು ಅನುಸರಿಸುವ ಅಥವಾ ಅನುಕರಿಸುವ ಉದಾರತೆಯನ್ನು ಮುಸ್ಲಿಮರು ತೋರಿಸಲಾರರು. ಯಾಕೆಂದರೆ ತಸ್ಲೀಮಾರನ್ನು ಅನುಸರಿಸುವುದೆಂದರೆ ಇಸ್ಲಾಮಿನಿಂದಲೇ ಭ್ರಷ್ಟಗೊಳ್ಳುವುದಕ್ಕೆ ಸಮಾನವಾಗುತ್ತದೆ. ತಸ್ಲೀಮಾರಂತಹವರು ಪರ್ದಾದಿಂದ ಶೋಷಣೆಯಾಗುತ್ತದೆ ಎನ್ನುತ್ತಿದ್ದಾರೆ ತಾನೇ? ಆದರೆ ಅದೇ ಪರ್ದಾ ಧರಿಸಿದ ವೈದ್ಯರು, ಕಂಪ್ಯೂಟರ್ ಇಂಜಿನಿಯರುಗಳು, ಅಧಿಕಾರಿಗಳು ಮುಂತಾದ ಅನೇಕ ವಿದ್ಯಾವಂತರು ಇಂದಿಲ್ಲವೇ? ಅವರಿಗಿನ್ನೂ ಪರ್ದಾ ಶೋಷಕವೆಂದು ಅನ್ನಿಸಿಲ್ಲ. ಅವರು ಅದನ್ನು "ಗೌರವದ ಶ್ರೀರಕ್ಷೆ"ಯೆಂದು ಬಗೆಯದಿರುತ್ತಿದ್ದರೆ ಎಂದೋ ಕಿತ್ತೆಸೆಯುತ್ತಿದ್ದರು. ಯಾಕೆಂದರೆ ಈ ಹೆಣ್ಮಕ್ಕಳೆಲ್ಲ ಆರ್ಥಿಕವಾಗಿ ಸ್ವತಂತ್ರರಾಗಿರುವವರಷ್ಟೇ.

ಭೂಮಿಯಲ್ಲಿರುವುದನ್ನೆಲ್ಲ ನಿಮಗಾಗಿಯೇ ಸೃಷ್ಟಿಸಿದವನು ಆತನೇ. ಬಳಿಕ ಗಗನದೆಡೆ ಗಮನ ಹರಿಸಿ ಸಪ್ತ ಗಗನಗಳಿಗೆ ರೂಪುಕೊಟ್ಟನು. ಆತನು ಸಕಲ ವಿಷಯಗಳ ಜ್ಞಾನಿಯಾಗಿರುತ್ತಾನೆ.

(ಕುರ್‌ಆನ್ 2:29)

*Managing Partner*

**RAJA BRICKS & TILE INDUSTRIES**

*P.B. No. 34, Rajanagar, Sira Road,*
*Tumkur - 572 101. Karnataka, India*
*Ph: 0816 - 6531933/44/55, Fax: 0816 - 2211633*

## ಕುರ್‌ಆನ್ ಪ್ರವಚನ ಕಾರ್ಯಕ್ರಮ



**ಬೆಳಗಾವಿ:** ಪವಿತ್ರ ಕುರ್‌ಆನ್ ಕೇವಲ ಮುಸ್ಲಿಮರ ಗ್ರಂಥವಲ್ಲ. ಅದು ಜಗತ್ತಿನಲ್ಲಿರುವ ಪ್ರತಿಯೊಬ್ಬರ ಗ್ರಂಥವಾಗಿದೆ. ಅದರ ಬೋಧನೆಗಳು ಸಾರ್ವಕಾಲಿಕವಾದದ್ದು ಎಂದು ಶಾಂತಿ ಪ್ರಕಾಶನದ ವ್ಯವಸ್ಥಾಪಕರಾದ ಮುಹಮ್ಮದ್ ಕುಂಞ ಹೇಳಿದರು.

ಅವರು ಜಮಾಅತೆ ಇಸ್ಲಾಮಿ ಹಿಂದ್, ಬೆಳಗಾವಿ ಶಾಖೆಯ ವತಿಯಿಂದ ನಡೆದ ಪವಿತ್ರ ಕುರ್‌ಆನ್ ಪ್ರವಚನ ಕಾರ್ಯಕ್ರಮದಲ್ಲಿ 'ಮಾನವ ಹಕ್ಕುಗಳು' ಎಂಬ ವಿಷಯದಲ್ಲಿ ಪ್ರವಚನ ನೀಡುತ್ತಿದ್ದರು.

ಸೃಷ್ಟಿಕರ್ತನಿಂದ ಅವತೀರ್ಣವಾದ ಪವಿತ್ರ ಕುರ್‌ಆನ್ ಮನುಷ್ಯನಿಗೆ ಬದುಕುವ ಹಕ್ಕು, ಸಮಾನತೆಯ ಹಕ್ಕು, ಆರ್ಥಿಕ ಸಮಾನತೆ, ನ್ಯಾಯ, ಸ್ವಾಭಿಮಾನದ ಹಕ್ಕು, ಧಾರ್ಮಿಕ ಸ್ವಾತಂತ್ರ್ಯ ಇವುಗಳನ್ನೆಲ್ಲಾ ನೀಡಿದೆ. ಕೇವಲ ಲಾಭ ಭಡುಕ ಚಿಂತನೆಗಳಿಂದ ಮುಂದುವರಿಯುತ್ತಿರುವ ಇಂದಿನ ಪೀಳಿಗೆಗೆ ಕುರ್‌ಆನ್ ಪ್ರತಿಪಾದಿಸಿದ ಮೌಲ್ಯಗಳನ್ನು ಅಳವಡಿಸಲು ಕರೆ ನೀಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ನಾಗನೂರು ಮಠದ ಶ್ರೀ ಸಿದ್ಧರಾಮ ಸ್ವಾಮಿಗಳು, ಕುರ್‌ಆನನ್ನು ಸರಿಯಾಗಿ ಅರಿತವರಿಂದ ಪ್ರವಚನವನ್ನು ಆಲಿಸಿದರೆ, ಇತರರು ಅದರ ಬಗ್ಗೆ ಹರಡುವ ತಪ್ಪು ಕಲ್ಪನೆಗಳನ್ನು ದೂರೀಕರಿಸಬಹುದು. ದೇವನು ಸೃಷ್ಟಿಸಿದ ಈ ಭೌತಿಕ ಜಗತ್ತಿನಲ್ಲಿ ಎಲ್ಲರೂ ಸಮಾನವಾಗಿ ಬದುಕಬೇಕಾಗಿದೆ. ನಮಗೆ ನೀಡಿರುವ ಹಕ್ಕನ್ನು ಇತರರಿಗೆ ತೊಂದರೆಯಾಗದಂತೆ ಬಳಸಬೇಕು. ಪರಸ್ಪರರನ್ನು ಅರಿತು ಬದುಕುವುದೇ ಧರ್ಮ ಎಂದರು.

ಎರಡನೇ ದಿನ 'ಮಹಿಳೆಯರ ಹಕ್ಕುಗಳು' ಎಂಬ ವಿಷಯದಲ್ಲಿ ಮುಹಮ್ಮದ್ ಕುಂಞ ಪ್ರವಚನ ನೀಡಿದರು. ಮುಖ್ಯ ಅತಿಥಿಯಾಗಿ ಐ.ಎ.ಎಸ್. ಅಧಿಕಾರಿ ಶ್ರೀ ಸಿ.ಎಂ. ಶಿರೋಳ (ಪ್ರಾದೇಶಿಕ ಆಯುಕ್ತರು ಬೆಳಗಾವಿ) ವಿಭಾಗ ಮಾತನಾಡಿ, ಮಹಿಳೆಯರಿಗೆ ಗೌರವ ಕೊಡುವ ಜನಾಂಗವು ಉತ್ತಮ ಜನಾಂಗವಾಗುತ್ತದೆ. ಇತಿಹಾಸದಲ್ಲಿ ಮಹಿಳೆಯ ಪಾತ್ರ ಬಹಳ ದೊಡ್ಡದು. ಮಹಿಳೆಗೆ ಉತ್ತಮ ಶಿಕ್ಷಣ ಕೊಟ್ಟು ಅವಳನ್ನು ಶೋಷಣೆಯಿಂದ ಮುಕ್ತಗೊಳಿಸಬೇಕು ಎಂದರು.

ಬೆಳಗಾವಿ ಜಮಾಅತೆ ಇಸ್ಲಾಮಿ ಹಿಂದ್ ಅಧ್ಯಕ್ಷ ಶಾಹಿದ್ ಮೆಮನ್ ಪ್ರಾಸ್ತಾವಿಕವಾಗಿ ಮಾತನಾಡಿ ಅತಿಥಿಗಳನ್ನು ಸ್ವಾಗತಿಸಿದರು.

## ಸಾರ್ವಜನಿಕ ಸಭೆ




**ತೊಕ್ಕೊಟ್ಟು:** ಯೂತ್‌ವಿಂಗ್ ಜಮಾಅತೆ ಇಸ್ಲಾಮಿ ಹಿಂದ್ ದ.ಕ. ಜಿಲ್ಲಾ ವತಿಯಿಂದ ಮಾರ್ಚ್ 1ರಿಂದ ಏಪ್ರಿಲ್ 30ರ ವರೆಗೆ ಹಮ್ಮಿಕೊಂಡ 'ಪ್ರತಿಯೊಬ್ಬನಿಗೆ ಮರಣವನ್ನು ಸವಿಯಲಿಕ್ಕಿದೆ' ಎಂಬ ಅಭಿಯಾನದ ಅಂಗವಾಗಿ ಉಳ್ಳಾಲ ಯೂತ್‌ವಿಂಗ್ ವತಿಯಿಂದ ಇಲ್ಲಿನ ಅಳೇಕಲದ ಆರ್.ಎಸ್. ಕಂಪೌಂಡ್‌ನಲ್ಲಿ ಅಭಿಯಾನದ ಸಂಚಾಲಕರಾದ ಸಿದ್ದೀಕ್ ಜಕ್ರಿಬೆಟ್ಟು ಪ್ರವಚನ ನೀಡಿದರು. ಮುಖ್ಯ ಅತಿಥಿಗಳಾಗಿ ಉಳ್ಳಾಲ ಪುರಸಭೆಯ ಕೌನ್ಸಿಲರ್‌ಗಳಾದ ಜ| ಇಬ್ರಾಹೀಮ್ ಮತ್ತು ಜ| ಫತ್ತಾಕ್ ಭಾಗವಹಿಸಿ ತಮ್ಮ ಅನಿಸಿಕೆಗಳನ್ನು ಮಂಡಿಸಿದರು. ಸ್ಥಾನೀಯ ಸಮಾಜ ಸೇವಾ ಘಟಕದ ಸಂಚಾಲಕರಾದ ಜ| ಇಲ್ಯಾಸ್ ಇಸ್ಮಾಈಲ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಸ್ಥಾನೀಯ ಯೂತ್‌ವಿಂಗ್ ಸಂಚಾಲಕ ಅಬ್ದುರ್ರಹೀಮ್ ಧನ್ಯವಾದವಿತ್ತರು.

## ಮುಸ್ಲಿಮ್ ಮೀಸಲಾತಿಗೆ ಒತ್ತಾಯ

**ಮಂಗಳೂರು:** "ಪ್ರಜಾಪ್ರಭುತ್ವವೆಂದರೆ ನಿರಂಕುಶ ಆಡಳಿತವಲ್ಲ. ಅದು ಪ್ರಜೆಗಳ ಆಡಳಿತವಾಗಿದೆ. ಆದರೆ ಇವತ್ತು ಪ್ರಜಾತಂತ್ರದ ಕೊಲೆ ನಡೆಯುತ್ತಿದ್ದರೂ ಧ್ವನಿಯೆತ್ತುವವರು ಇಲ್ಲವಾಗಿದ್ದಾರೆ" ಎಂದು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ರಾಷ್ಟ್ರೀಯ ಕಾರ್ಯದರ್ಶಿ ಕೆ.ಎಂ. ಶರೀಫ್ ಹೇಳಿದರು.

ಮುಸ್ಲಿಮ್ ಮೀಸಲಾತಿಗಾಗಿ ಇಲ್ಲಿನ ನೆಹರೂ ಮೈದಾನದಲ್ಲಿ ಮಾರ್ಚ್ 13ರಂದು ಪಿ.ಎಫ್.ಐ. ಆಯೋಜಿಸಿದ್ದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಅವರು ಮಾತನಾಡುತ್ತಿದ್ದರು.

ಸೋಷಿಯಲ್ ಡೆಮೊಕ್ರೆಟಿಕ್ ಪಾರ್ಟಿಯ ರಾಷ್ಟ್ರಾಧ್ಯಕ್ಷ ಇ. ಅಬೂಬಕರ್ ಮಾತನಾಡುತ್ತಾ, "ಮಹಿಳಾ ಮೀಸಲಾತಿ ಪರ ಮಾತನಾಡುವ ರಾಜಕೀಯ ಪಕ್ಷಗಳು ತಮ್ಮ ಪಕ್ಷದಲ್ಲಿ ಅದನ್ನು ಎಷ್ಟಂಶ ಪಾಲಿಸಿವೆ? ಇದು ಸವರ್ಣೀಯರ ನಿಗೂಢ ತಂತ್ರವಾಗಿದೆ. ಇಲ್ಲಿನ ಅನೇಕ ಆಯೋಗಗಳು ಮುಸ್ಲಿಮರು ಹಿಂದುಳಿದಿದ್ದಾರೆ ಎಂದು ಹೇಳಿವೆ. ಆದರೂ ಅದನ್ನು ನಿರ್ಲಕ್ಷಿಸಲಾಗುತ್ತಿದೆ" ಎಂದು ಹೇಳಿದರು.

ಪರಿವರ್ತನ ಸಮಾಜದ ಡೀಕಯ್ಯನವರು ಮಾತನಾಡಿ, "ಮೀಸಲಾತಿಯಿಂದ ತುಳಿತಕ್ಕೊಳಗಾದ ಜನಾಂಗ ಮುಂದೆ ಬರಬಹುದು ಎಂಬುದು ಕೇವಲ ಭ್ರಮೆ" ಎಂದರು. ಉದ್ಯಾವರ ಚರ್ಚ್‌ನ ವಿಲಿಯಂ ಮಾರ್ಟಿಸ್ ಸಂದರ್ಭೋಚಿತವಾಗಿ ಮಾತನಾಡಿದರು. ಕಾರ್ಯಕ್ರಮವನ್ನು ಅನ್ವರ್ ಸಾದಾತ್ ಉದ್ಘಾಟಿಸಿದರು. ಇಲ್ಯಾಸ್ ತುಂಬೆ ಅಧ್ಯಕ್ಷತೆ ವಹಿಸಿದ್ದರು.

## ಮಾರ್ಚ್ 21: ರಕ್ತದಾನ ಶಿಬಿರ

**ಕಲ್ಲಡ್ಕ:** ಯೂತ್‌ವಿಂಗ್ ಜಮಾಅತೆ ಇಸ್ಲಾಮಿ ಹಿಂದ್ ಬಂಟ್ವಾಳ ಹಾಗೂ ಕೆಂ.ಎಂ.ಸಿ. ಮಂಗಳೂರು ಇದರ ಜಂಟಿ ಆಶ್ರಯದಲ್ಲಿ ಮಾರ್ಚ್ 21ರಂದು ಆದಿತ್ಯವಾರ ಬೆಳಿಗ್ಗೆ 9:00ರಿಂದ 1:00ರ ವರೆಗೆ ಕಲ್ಲಡ್ಕ ಪದ್ಮಾವತಿ ಕಲ್ಯಾಣ ಮಂಟಪದಲ್ಲಿ ರಕ್ತದಾನ ಶಿಬಿರ ನಡೆಯಲಿದೆ. ಉಕ್ಕುಡ ಮೆಸ್ಕಾಮ್‌ನ ಹಿರಿಯ ಅಭ್ಯಂತರರಾದ ಆನಂದರವರು ರಕ್ತದಾನ ನೀಡುವ ಮೂಲಕ ಶಿಬಿರ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಜಾಜ್ ಗ್ರೂಪ್ ಆಫ್ ಇಂಡಸ್ಟ್ರೀಸ್‌ನ ಹಾಜಿ ಅಬ್ದುಲ್ ಕಾದರ್, ಕೆ.ಎಂ.ಸಿ. ಬ್ಲಡ್ ಬ್ಯಾಂಕ್‌ನ ವೈದ್ಯಾಧಿಕಾರಿ ಡಾ| ಶ್ರೀಜಿತ್ ಮತ್ತು ಯೂತ್‌ವಿಂಗ್ ಜಿಲ್ಲಾ ಕಾರ್ಯದರ್ಶಿ ಮುಬೀನ್ ಉಳ್ಳಾಲ ಭಾಗವಹಿಸಲಿದ್ದು, ಜಮಾಅತೆ ಇಸ್ಲಾಮಿ ಹಿಂದ್ ದ.ಕ. ಜಿಲ್ಲಾ ಸಂಚಾಲಕರಾದ ಅಬ್ದುಸ್ಸಲಾಮ್ ಉಪ್ಪಿನಂಗಡಿ ಅಧ್ಯಕ್ಷತೆ ವಹಿಸಲಿದ್ದಾರೆಂದು ಶಿಬಿರದ ಸಂಚಾಲಕ ಫಾರೂಕ್ ಅಪೋಲೋ ಪತ್ರಿಕಾ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

## ಮಾರ್ಚ್ 24: ಆರೋಗ್ಯ ಸಂವಾದ

**ಮಂಗಳೂರು:** ಹೆಚ್.ಆರ್.ಎಸ್. ಮಂಗಳೂರು ಮಹಿಳಾ ಘಟಕದ ವತಿಯಿಂದ ಮಾರ್ಚ್ 24ರಂದು ಬೆಳಿಗ್ಗೆ 11ರಿಂದ 12:30ರ ವರೆಗೆ ಇಲ್ಲಿನ ಹಿದಾಯತ್ ಸೆಂಟರ್‌ನಲ್ಲಿ ಮಹಿಳೆಯ ಮಾನಸಿಕ ಒತ್ತಡ ಮತ್ತು ಪರಿಹಾರ ಎಂಬ ವಿಷಯದಲ್ಲಿ ಡಾ| ರೈಹಾನ್ ಅವರಿಂದ ಆರೋಗ್ಯ ಸಂವಾದ ಕಾರ್ಯಕ್ರಮ ನಡೆಯಲಿದೆ. ಪ್ರಶ್ನೋತ್ತರಕ್ಕೂ ಅವಕಾಶವಿದೆ. ಮಹಿಳೆಯರೆಲ್ಲರೂ ಕಾರ್ಯಕ್ರಮದ ಪ್ರಯೋಜನ ಪಡೆಯಬೇಕೆಂದು ಪ್ರಕಟನೆಯಲ್ಲಿ ತಿಳಿಸಲಾಗಿದೆ.

**WANTED BRIDE**

Having studied in English Medium upto PUC and passed in Islamic course. Suitable height and personality needed. Groom is working in Gulf as a manager in reputed business firm is 6'height with good personality.

**Contact- 9449103445**

## ವಿದ್ಯಾರ್ಥಿ ಸ್ನೇಹ ಮಿಲನ




**ಕಸ್ಬಾ ಬೆಂಗರೆ:** ಇಲ್ಲಿನ ಎಸ್.ಐ.ಓ. ವರ್ತುಲದ ವತಿಯಿಂದ ಮಾರ್ಚ್ 13ರಂದು ಸಂಜೆ 5 ಗಂಟೆಗೆ 'ನ್ಯಾಯಯುತ ಜಗತ್ತಿಗಾಗಿ ವಿದ್ಯಾರ್ಥಿ ಧ್ವನಿ' ಎಂಬ ವಿಷಯದಲ್ಲಿ 'ವಿದ್ಯಾರ್ಥಿ ಸ್ನೇಹ ಮಿಲನ'ವನ್ನು ಹಮ್ಮಿಕೊಳ್ಳಲಾಯಿತು. ಮುಖ್ಯ ಭಾಷಣಗಾರರಾಗಿ ನಿಸಾರ್ ಅಹ್ಮದ್, ಶಾಹಿದ್ ಯು. ಭಾಗವಹಿಸಿದ್ದರು. ಇಬ್ರಾಹೀಮ್ ಸಈದ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಿಸ್‌ಅಬ್ ಕಾರ್ಯಕ್ರಮ ನಿರೂಪಿಸಿದರು. ಫೈರುಝ್ ಧನ್ಯವಾದವಿತ್ತರು.

## ನಿಧನ

- ಹಿರಿಯ ಪತ್ರಕರ್ತರೂ ಉರ್ದು ತ್ರೈದಿನ ಪತ್ರಿಕೆಯ ಮಾಜಿ ಸಂಪಾದಕರೂ ಆದ ಮಹ್‌ಫೂಝುರ್ರಹ್ಮಾನ್ ಇತ್ತೀಚೆಗೆ ನಿಧನರಾದರು. 1970ರಿಂದ 73ರ ವರೆಗೆ ದಅ್‌ವತ್ ಪತ್ರಿಕೆಯಲ್ಲಿ ಉಪಸಂಪಾದಕರಾಗಿದ್ದರು. ಕೆಲವು ಕಾಲ ಅಲ್ಲಿಂದ ಬಿಟ್ಟು ಮತ್ತೆ 1981ರಲ್ಲಿ ಪುನಃ ದಅ್‌ವತಿನಲ್ಲಿ ಕೆಲಸ ಮಾಡಿದರು. ಅಂದಿನ ಸಂಪಾದಕರಾದ ಮುಹಮ್ಮದ್ ಮುಸ್ಲಿಮ್‌ರವರು ಮೃತಪಟ್ಟಾಗ 1982ರಲ್ಲಿ ಸಂಪಾದಕರಾಗಿ ನೇಮಕಗೊಂಡರು.

ಇವರ ನಿಧನಕ್ಕೆ ಜಮಾಅತೆ ಇಸ್ಲಾಮಿ ಹಿಂದ್ ಅಖಿಲ ಭಾರತ ಅಧ್ಯಕ್ಷ ಸಯ್ಯದ್ ಜಲಾಲುದ್ದೀನ್ ಉಮರಿ, ಶಾಹಿ ಇಮಾಮ್ ಸಯ್ಯದ್ ಅಹ್ಮದ್ ಬುಖಾರಿ, ಮುಸ್ಲಿಮ್ ಪರ್ಸನಲ್'ಲಾ' ಉಪಾಧ್ಯಕ್ಷ ಮುಹಮ್ಮದ್ ಸಲೀಮ್ ಖಾಸಿಮಿ, ದಅ್‌ವತ್ ಸಂಪಾದಕ ಪರ್ವಾಝ್ ರಹ್ಮಾನಿ ಮುಂತಾದವರು ಸಂತಾಪ ವ್ಯಕ್ತಪಡಿಸಿದ್ದಾರೆ.

- **ಬಾಳೆಹೊನ್ನೂರು:** ಇಲ್ಲಿನ ದಿ| ಮಹ್‌ಫೂಝ್ ಸಾಹೇಬರ ಪತ್ನಿ ನುಸ್ರತ್ ಬೇಗಮ್ (60) ಅವರು ಅಲ್ಪಕಾಲದ ಅಸ್ವಾಸ್ಥ್ಯದ ಬಳಿಕ ಮಾರ್ಚ್ 12ರಂದು ನಿಧನರಾದರು. ಜ.ಇ. ಕೇಂದ್ರ ಕಾರ್ಯದರ್ಶಿ ರಫೀಕ್ ಅಹ್ಮದ್ ಸೋದರ ಪುತ್ರಿ ಜ.ಇ. ಕರ್ನಾಟಕ ಗೋವಾದ ಕಾರ್ಯದರ್ಶಿ ಅತ್ಹರುಲ್ಲಾ ಶರೀಫ್, ಎಂ.ಪಿ. ಬಶೀರ್ ಅಹ್ಮದ್ ಮತ್ತು ಲಿಯಾಕತ್ ಮುಲ್ಲಾರವರ ನಾದಿನಿ ಹಾಗೂ ಮೌ| ಅಸ್ರಾರ್ ಅಹ್ಮದ್‌ರವರ ಸೋದರಿಯಾಗಿದ್ದ ಮೃತರು, ನಾಲ್ವರು ಗಂಡು ಮತ್ತು ಮೂವರು ಹೆಣ್ಮಕ್ಕಳನ್ನು ಅಗಲಿದ್ದಾರೆ. ಅವರ ಪತಿ ನಾಲ್ಕೈದು ತಿಂಗಳ ಹಿಂದೆಯಷ್ಟೇ ಮೃತರಾಗಿದ್ದರು.

ಅಲ್ಲಾಹನು ಮೃತರೀರ್ವರಿಗೂ ಮಗ್‌ಫಿರತ್ ಮತ್ತು ಮರ್‌ಹಮತ್ ನೀಡಿ ಅನುಗ್ರಹಿಸಲಿ.

**ಕನ್ನಡದಲ್ಲಿ ಸಾರ್ವಜನಿಕ ಕುರ್‌ಆನ್ ಪ್ರವಚನ ಕಾರ್ಯಕ್ರಮ**

ಸಮಯ : ಪ್ರತಿ ದಿನ ರಾತ್ರಿ 7-00 ಗಂಟೆಗೆ
ಸ್ಥಳ : T.A.P.C.M.S. ಆವರಣ ಮಾನವಿ.

**ದಿನಾಂಕ 19-3-2010 ಶುಕ್ರವಾರ**
ಉದ್ಘಾಟನ ಭಾಷಣ :
ಶ್ರೀ ಷ|| ಬ್ರ|| ಶಾಂತಮಲ್ಲ ಶಿವಾಚಾರ್ಯ ಸ್ವಾಮಿಗಳು
ವಿಷಯ : ಮಾನವ ಹಕ್ಕುಗಳು
ಪ್ರವಚನಕಾರರು : ಜ|| ಮುಹಮ್ಮದ್ ಇಸ್ಹಾಕ್ ಪುತ್ತೂರು.

**ದಿನಾಂಕ 20-3-2010 ಶನಿವಾರ**
ವಿಷಯ : ನೈತಿಕತೆ
ಪ್ರವಚನಕಾರರು : ಜ|| ಮುಹಮ್ಮದ್ ಇಸ್ಹಾಕ್ ಪುತ್ತೂರು.

**ದಿನಾಂಕ 21-3-2010 ರವಿವಾರ**
ವಿಷಯ : ಮಹಿಳೆಯ ಹಕ್ಕುಗಳು
ಪ್ರವಚನಕಾರರು : ಡಾ|| ಫೌಝಿಯಾ ಸುಲ್ತಾನ

ಸರ್ವರಿಗೂ ಆದರದ ಸುಸ್ವಾಗತ

ಮಹಿಳೆಯರಿಗೆ ಪ್ರತ್ಯೇಕ ಆಸನದ ವ್ಯವಸ್ಥೆ ಇದೆ.

ಅನ್ವರ್ ಪಾಶಾ ಉಬ್ರಿ
ಅಧ್ಯಕ್ಷರು, ಜ.ಇ.ಹಿಂದ್, ಮಾನವಿ.
ಸೆಲ್ 9449762076

**ಜಮಾಅತೆ ಇಸ್ಲಾಮಿ ಹಿಂದ್ ಮಾನವಿ.**





To.______________________


SANMARGA KANNADA WEEKLY

Post Box No. 16, Hidayath Centre, Mangalore - 575 001 ☎: 2422786

2010 ಮಾರ್ಚ್ 21 – 27 / 1431 ರಬೀಉಲ್ ಆಖರ್ 03 – 09








'Registered' R.No. KA/SK/MNG/129/2009-11 Licenced to post without pre payment L No. SK/MNG/WPP-10/09-11 Posted at R.M.S. Mangalore on 16-03-2010 (Tuesday) & 18-03-2010 (Thursday)


## 'ಸ್ಮಾರ್ಟ್ ಕ್ಲಾಸ್'ಗೆ ಚಾಲನೆ




**ಬಬ್ಬುಕಟ್ಟೆ:** "ಸಮಾಜವು ಶಾಂತಿ ಎಂಬ ಕಾನ್ಸೆಪ್ಟ್ ಹಾಗೂ ಅರ್ಥಭಾವದಿಂದ ದೂರ ಸರಿಯುತ್ತಿರುವ ಇಂದಿನ ದಿನಗಳಲ್ಲಿ 'ಶಾಂತಿ ಎಜುಕೇಶನಲ್ ಟ್ರಸ್ಟ್' ಶಾಂತಿ ಎಂಬ ಕಾನ್ಸೆಪ್ಟನ್ನೇ ಆಯ್ದುಕೊಂಡು ಶೈಕ್ಷಣಿಕ ರಂಗದಲ್ಲಿ ಮಾಡುತ್ತಿರುವ ಕೆಲಸ ಶ್ಲಾಘನಾರ್ಹ. ಸಾಮಾಜಿಕವಾಗಿ ಇವತ್ತು ಧರ್ಮದ ಕುರಿತಂತೆ ಅರೆಜ್ಞಾನವಿದೆ. ಆ ಕಾರಣದಿಂದಲೇ ಈ ಶಿಕ್ಷಣ ಸಂಸ್ಥೆಯಲ್ಲಿ ಕಲಿಸುತ್ತಿರುವ ಮೌಲ್ಯಾಧಾರಿತ ಶಿಕ್ಷಣ ಹೆಚ್ಚು ಸಕಾಲಿಕ ಅನ್ನಿಸಿಕೊಳ್ಳುವುದು. ಜ್ಞಾನದ ಸ್ಫೋಟವಾಗುತ್ತಿರುವ ಇವತ್ತಿನ ದಿನಗಳಲ್ಲಿ 'ಸ್ಮಾರ್ಟ್ ಕ್ಲಾಸ್'ನ ಬಳಕೆ, ವಿದ್ಯಾರ್ಥಿಗಳ ಪಾಲಿಗೆ ಬಹು ಉಪಯೋಗಕಾರಿಯಾದದ್ದು" ಎಂದು ದ.ಕ. ಪಿ.ಯು. ಶಿಕ್ಷಣ ಮಂಡಳಿಯ ಉಪನಿರ್ದೇಶಕ ಕೆ. ರಮೇಶ್ ಅಭಿಪ್ರಾಯಪಟ್ಟರು.

'ಶಾಂತಿ ಎಜುಕೇಶನಲ್ ಟ್ರಸ್ಟ್'ನ ವತಿಯಿಂದ ಶಿಕ್ಷಣ ಸಂಸ್ಥೆಯ ದಶಮಾನೋತ್ಸವದ ಅಂಗವಾಗಿ ಅವರು ಇಲ್ಲಿನ ಹಿರಾ ಗರ್ಲ್ಸ್ ಹೈಸ್ಕೂಲ್ ಮತ್ತು ವಿಮೆನ್ಸ್ ಇಸ್ಲಾಮಿಕ್ ಪಿ.ಯು. ಕಾಲೇಜಿನಲ್ಲಿ ಹೊಸದಾಗಿ ಅಳವಡಿಸಲಾದ 'ಸ್ಮಾರ್ಟ್ ಕ್ಲಾಸ್' ಕಲಿಕಾ ಪದ್ಧತಿಗೆ ಚಾಲನೆ ಕೊಟ್ಟು ಮಾತಾಡುತ್ತಿದ್ದರು.

ಡಿ.ಟಿ.ಪಿ.ಐ. ಮತ್ತು ಡಿ.ಐ.ಇ.ಟಿ. ದ.ಕ.ದ ಪ್ರಾಂಶುಪಾಲರಾಗಿರುವ ಫಿಲೋಮಿನಾ ಪ್ರಭು ಮಾತನಾಡಿ, "ಕಚೇರಿಯಿಂದ ಹಿಡಿದು ಉಪನ್ಯಾಸಕರ ವರೆಗೆ ಎಲ್ಲವನ್ನೂ ಮಹಿಳೆಯರೇ ನಿರ್ವಹಿಸಿಕೊಂಡು ಬರುತ್ತಿರುವ ಈ ಶಿಕ್ಷಣ ಸಂಸ್ಥೆಯನ್ನು ನೋಡಿ ಅಪಾರ ಖುಷಿಯಾಗುತ್ತಿದೆ. ಮುಸ್ಲಿಮ್ ಸಮುದಾಯದ ಹೆಣ್ಣು ಮಕ್ಕಳ ಶಿಕ್ಷಣದ ದೃಷ್ಟಿಯಿಂದ ಶಾಂತಿ ಎಜುಕೇಶನಲ್ ಟ್ರಸ್ಟ್‌ನ ಸಾಧನೆ ಕ್ರಾಂತಿಕಾರಿಯಾದದ್ದು. ಹಾಗೆಯೇ 'ಸ್ಮಾರ್ಟ್ ಕ್ಲಾಸ್'ನಿಂದ ಶಿಕ್ಷಕಿಯರ ಜವಾಬ್ದಾರಿ ಹೆಚ್ಚುತ್ತದೆ. ಅವರು ಹೆಚ್ಚೆಚ್ಚು ತಿಳಿದವರಾಗಬೇಕಾಗುತ್ತದೆ. ಇಲ್ಲದಿದ್ದರೆ ಮಾಹಿತಿಗಳ ಕಣಜವಾಗಿರುವ ಕಂಪ್ಯೂಟರಿನ ಸಹಾಯದಿಂದ ವಿದ್ಯಾರ್ಥಿಗಳು ಶಿಕ್ಷಕಿಯರನ್ನೇ ಹಿಂದೆ ಹಾಕಿಯಾರು" ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಶಾಂತಿ ಎಜುಕೇಶನಲ್ ಟ್ರಸ್ಟ್‌ನ ಉಪಾಧ್ಯಕ್ಷರಾದ ಅಬ್ದುರ್ರಹ್ಮಾನ್ ಮಾತಾಡಿ, "ಇವತ್ತು ಜನರು ಆಧುನಿಕ ಸಂಶೋಧನೆಗಳ ಪ್ರಯೋಜನ ಪಡೆಯಲು ಸ್ಪರ್ಧಿಸುತ್ತಿದ್ದಾರೆ. ಹಾಗಿರುವಾಗ ಅದೇ ಕರಿ ಹಲಗೆ, ಚಾಕ್ ಪೀಸು, ಅದೇ ಧ್ವನಿಯನ್ನು ವಿದ್ಯಾರ್ಥಿಗಳು ಹೇಗೆ ಸಹಿಸಿಯಾರು? 10-20 ಕೆ.ಜಿ.ಯ ಭಾರದ ಬ್ಯಾಗಿನಿಂದ ಶಿಕ್ಷಣವು ಪೆನ್‌ಡ್ರೈವ್‌ನ ಕಡೆಗೆ ಹೊರಳುತ್ತಿರುವ ಇಂದಿನ ದಿನಗಳಲ್ಲಿ ಆಧುನಿಕ ಟೆಕ್ನಾಲಜಿಯ ಬಳಕೆಯಲ್ಲಿ ನಾವು ಹಿಂದೆ ಬೀಳಬಾರದು. 2011-12ರ ಅವಧಿಯಲ್ಲಿ ಪಿ.ಯು. ವಿಜ್ಞಾನ ವಿಭಾಗ ಪ್ರಾರಂಭಿಸುವ ಯೋಜನೆಯನ್ನು ಟ್ರಸ್ಟ್ ಹಾಕಿಕೊಂಡಿದೆ. ಹಾಗೆಯೇ ಭವಿಷ್ಯದಲ್ಲಿ ನರ್ಸರಿಯಿಂದ ಉನ್ನತ ಶಿಕ್ಷಣದ ವರೆಗೆ ಮತ್ತು ಸಂಪೂರ್ಣ ಬಾಲಕರಿಗಾಗಿಯೇ ಪ್ರೌಢ ಮತ್ತು ಉನ್ನತ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸುವ ಗುರಿಯಿದೆ. ಅದಕ್ಕೆ ಕೋಟೆಕಾರಿನಲ್ಲಿ 6 ಎಕರೆ ಭೂಮಿಯನ್ನು ಈಗಾಗಲೇ ಖರೀದಿಸಿದ್ದೇವೆ" ಎಂದು ವಿವರಿಸಿದರು. ಹಾಜಿ ಎಸ್.ಎಂ. ರಶೀದ್ ಸಂದರ್ಭೋಚಿತವಾಗಿ ಮಾತಾಡಿದರು.

ಆರಂಭದಲ್ಲಿ ಹಿರಾ ಗರ್ಲ್ಸ್ ಹೈಸ್ಕೂಲ್ ವಿದ್ಯಾರ್ಥಿನಿಯರು ಸ್ತುತಿಗಾನಗೈದರು. ಹೈಸ್ಕೂಲ್‌ನ ಮುಖ್ಯೋಪಾಧ್ಯಾಯಿನಿ ಸುಮಯ್ಯ ಸ್ವಾಗತಿಸಿದರು. ಟ್ರಸ್ಟ್‌ನ ಕಾರ್ಯದರ್ಶಿ ಕೆ. ಮುಹಮ್ಮದ್ ದಿಕ್ಸೂಚಿ ಭಾಷಣ ಮಾಡಿದರು. ಪಿ.ಯು. ವಿದ್ಯಾರ್ಥಿನಿಯರು ತರಾನಾ ಹಾಡಿದರು. ಪಿ.ಯು. ಕಾಲೇಜಿನ ಪ್ರಾಂಶುಪಾಲೆ ವಿಜಯಲಕ್ಷ್ಮಿ ಧನ್ಯವಾದವಿತ್ತರು.

## ವಿದ್ಯಾರ್ಥಿ ಕಾರ್ಯಾಗಾರ

**ಮಂಗಳೂರು:** ಎಸ್.ಐ.ಓ. ಮಂಗಳೂರು ನಗರ ಶಾಖೆಯ ವತಿಯಿಂದ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಹಾಗೂ ಪದವೀಧರ ವಿದ್ಯಾರ್ಥಿಗಳಿಗಾಗಿ ಪರೀಕ್ಷೆ ಎದುರಿಸುವುದು ಹೇಗೆ? ಎಂಬ ವಿಷಯದಲ್ಲಿ ಪಿ.ಪಿ.ಟಿ. ಪ್ರೆಸೆಂಟೇಶನ್ ಮೂಲಕ ಮಾರ್ಚ್ 6ರಂದು ಹಿದಾಯತ್ ಸೆಂಟರ್‌ನಲ್ಲಿ ವಿದ್ಯಾರ್ಥಿ ಕಾರ್ಯಾಗಾರ ನಡೆಯಿತು. ಕ್ಯಾರಿಯರ್ ಗೈಡೆನ್ಸ್ ಇನ್‌ಫಾರ್ಮೇಶನ್ ಸೆಂಟರ್ ಮಂಗಳೂರು ಇದರ ನಿರ್ದೇಶಕ ಉಮರ್ ಯು.ಎಚ್. ತರಗತಿ ನಡೆಸಿಕೊಟ್ಟರು.

## ಮುಸ್ಲಿಮ್ ಮೀಸಲಾತಿಗೆ ಉಮರಿ ಆಗ್ರಹ



**ನವದೆಹಲಿ:** ಮಹಿಳಾ ಮೀಸಲಾತಿ ವಿಧೇಯಕವನ್ನು ಪಾರ್ಲಿಮೆಂಟಲ್ಲಿ ಮಂಡಿಸಿರುವುದನ್ನು ಮಹಿಳಾ ಸಬಲೀಕರಣದ ದೃಷ್ಟಿಯಿಂದ ಮತ್ತು ಅವರ ಹಕ್ಕುಗಳ ಕುರಿತಾಗಿರುವ ಜಾಗೃತಿಯ ದೃಷ್ಟಿಯಿಂದ ಶುಭ ಸೂಚನೆಯೆಂದು ಬಣ್ಣಿಸಿರುವ ಜಮಾಅತೆ ಇಸ್ಲಾಮಿ ಹಿಂದ್‌ನ ಅಖಿಲ ಭಾರತೀಯ ಅಧ್ಯಕ್ಷರಾದ ಮೌ। ಜಲಾಲುದ್ದೀನ್ ಉಮರಿಯವರು, "ಆದರೆ ಪ್ರಸ್ತಾವಿತ ಮಸೂದೆಯ ವಿಧಿಗಳು ಶೋಷಿತ ಸಮುದಾಯವನ್ನು ಪುಳಕಗೊಳಿಸುವ ಬದಲು ದಮನಿಸುವ ರೂಪದಲ್ಲಿದೆ" ಎಂದಿದ್ದಾರೆ.

"ಮುಸ್ಲಿಮರು ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಆರ್ಥಿಕವಾಗಿ ತೀರಾ ಹಿಂದುಳಿದಿದ್ದಾರೆ ಎಂದು ರಂಗನಾಥ್ ಮಿಶ್ರಾ ಮತ್ತು ಸಾಚಾರ್ ಸಮಿತಿಗಳು ಹೇಳಿರುವಾಗ, ಕೇಂದ್ರ ಸರಕಾರ ಮುಸ್ಲಿಮ್ ಮೀಸಲಾತಿ ಆಗ್ರಹವನ್ನು ಯಾಕೆ ನಿರ್ಲಕ್ಷಿಸಿತೆಂಬುದು ತನಗೆ ಆಶ್ಚರ್ಯ ತಂದಿದೆ" ಎಂದಿದ್ದಾರೆ. "ಕಾಂಗ್ರೆಸ್ ಮುಸ್ಲಿಮರಿಗೆ ನೀಡಿದ ವಾಗ್ದಾನದಿಂದ ದೂರ ಸರಿದಿದೆ. ಇದು ದುಃಖದ ಸಂಗತಿ" ಎಂದವರು ಅಭಿಪ್ರಾಯ ಪಟ್ಟಿದ್ದಾರೆ.

## ಅಲ್ಲ, ಬುರ್ಖಾ ಬಿಸಾಕಿದರೆ ಶೋಷಣೆ ತಪ್ಪುತ್ತಾ?

(11ನೇ ಪುಟದಿಂದ)

ಇದೆ ಎಂತಲೋ ಅಥವಾ ಪರ್ದಾ ಹಾಕಿದ ಕೂಡಲೇ ಆಕೆ ಮೂಲೆಗುಂಪಾಗುತ್ತಿದ್ದಾಳೆ ಎಂದು ಯಾವ ನ್ಯಾಯಪ್ರಿಯರೂ ಒಪ್ಪಲು ಸಾಧ್ಯವಿಲ್ಲ. ಕೋಪ, ಕ್ರೌರ್ಯ, ಮತ್ಸರ, ದ್ವೇಷ, ಮದ, ಅಹಂಕಾರ ಎಂಬ ಮಾನಸಿಕ ಕಾಯಿಲೆಗೆ ಜಾತಿ ಮತ ಧರ್ಮಗಳ ಬೇಧ ಇಲ್ಲ. ಆಕೆಯನ್ನು ಶೋಷಿಸುವವರು, ದ್ವೇಷಿಸುವವರು ಎಲ್ಲಾ ಕಡೆಯೂ ಇದ್ದಾರೆ. ಆದರೆ ಈ ಕೆಟ್ಟ ಮಾನಸಿಕ ಕಾಯಿಲೆಗೆ ಔಷಧಿ ಎಂದರೆ ಧರ್ಮ ತಿಳಿಸಿದ ನೀತಿ, ನಿಯಮಗಳ ಪಾಲನೆಯಿಂದ ಮಾತ್ರ ಸಾಧ್ಯ.

ಹೆಣ್ಣನ್ನು ಇಸ್ಲಾಮ್ ಧರ್ಮ 'ಮುತ್ತು' ಎಂದು ವರ್ಣಿಸಿದೆ. ಆ ಮುತ್ತು ಎಲ್ಲಿರಬೇಕು, ಹೇಗಿರಬೇಕು ಎಂಬುದನ್ನು ಇಸ್ಲಾಮ್ ಸ್ಪಷ್ಟಪಡಿಸಿದೆ. ಸೃಷ್ಟಿಕರ್ತ ನೀಡಿರುವ ಆ ಆದರ್ಶವನ್ನು ಮುಸ್ಲಿಮ್ ಸ್ತ್ರೀಯು ನಂಬಿರುವ ತನಕ ಆಕೆಯಿಂದ ಈ ಪರ್ದಾವನ್ನು ತಿರಸ್ಕರಿಸಲು ಸಾಧ್ಯವಿಲ್ಲ. ಆಕೆ ಅದನ್ನು ಧರಿಸುವ ಉದ್ದೇಶ ಯಾರನ್ನೋ ಮೆಚ್ಚಿಸಲೋ ತಿರಸ್ಕರಿಸಲೋ, ಮನುಷ್ಯನ ಶೋಷಣೆಯಿಂದ ತಪ್ಪಿಸಲೋ ಅಲ್ಲವೆಂಬ ಸತ್ಯ ಪರ್ದಾ ವಿರೋಧಿಗಳಿಗೆ ತಿಳಿದಿರಲಿ. ಅದು ದೇವ ಸಂಪ್ರೀತಿಗಾಗಿ ಮಾತ್ರ ಎಂಬ ಸತ್ಯ ಅರಿತರೆ ಒಳಿತು. ನಾನು ಪರ್ದಾ ಹಾಕುವುದಿಲ್ಲ ಎಂದು ವಾದಿಸಿ ಬೀದಿಗಿಳಿದರೆ ನನ್ನನ್ನು ಯಾರಿಗೂ ಬಲಾತ್ಕಾರವಾಗಿ ಹಾಕಿಸಲು ಇಸ್ಲಾಮ್ ಧರ್ಮ ಅನುಮತಿ ನೀಡಿಲ್ಲ. ಧರ್ಮದಲ್ಲಿ ಬಲಾತ್ಕಾರವಿಲ್ಲ ಎಂಬ ಸ್ಪಷ್ಟ ನುಡಿ ಕುರ್‌ಆನಿನದ್ದು. ಗಂಡ, ತಂದೆ, ಅಣ್ಣ, ಸಮಾಜದ ಪುರುಷನನ್ನು ಮೆಚ್ಚಿಸಲು ನಾನು ಪರ್ದಾ ಧರಿಸುತ್ತಿಲ್ಲ ಎಂದು ಮುಸ್ಲಿಮ್ ಮಹಿಳೆ ಧೈರ್ಯವಾಗಿ ಹೇಳಬಲ್ಲಳು.

'ಆಯುಷ್ಯ ಇರೋ ತನಕ ಮಜಾ ಮಾಡು. ಇನ್ನೊಂದು ಜೀವನ ಸಿಗುತ್ತಾ ಇಲ್ವಾ ಎಂಬ ಗ್ಯಾರಂಟಿ ಇಲ್ಲ' ಎಂಬ ನಿರಾಶವಾದಿಗೆ ಮಾತ್ರ ಮುಸ್ಲಿಮ್ ಮಹಿಳೆಯ ಮೈ ಮುಚ್ಚುವ ಬಟ್ಟೆ ಮೌಢ್ಯ, ಅಂಧಕಾರದ, ಅಜ್ಞಾನದ ಪರಮಾವಧಿಯಾಗಲು ಸಾಧ್ಯ. ಅನ್ಯಥಾ ಸಾಯುವುದರೊಂದಿಗೆ ನನ್ನ ಶಾಶ್ವತ ಜೀವನ ಆರಂಭವಾಗುತ್ತೆ ಎಂಬ ಸತ್ಯವನ್ನು ಅರಿತ ಮುಸ್ಲಿಮ್ ಮಹಿಳೆಗೆ ಮೈ ಮುಚ್ಚುವ ಬಟ್ಟೆ ಎಂದೂ ಕೂಡಾ ಸಮಸ್ಯೆ ಆಗಿಯೇ ಇಲ್ಲ. ಪಾಶ್ಚಿಮಾತ್ಯರು ಹುಟ್ಟು ಹಾಕಿದ ಸಮೂಹ ಸನ್ನಿ ಎಂಬ ರೋಗಕ್ಕೆ ತುತ್ತಾದ ಕೆಲವು ಭಾರತೀಯ ಪ್ರಜೆಗಳು ಕೂಡ ಮೈಮುಚ್ಚುವ ಬಟ್ಟೆಯನ್ನು ವಿರೋಧಿಸುತ್ತಾ ಇದ್ದಾರೆ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಚಾರ.

ಪತ್ರಿಕೆಯಲ್ಲಿ ಪ್ರಕಟವಾದಂತೆ ತಲೆಯನ್ನು ಮುಚ್ಚುವ ಮೂಲಕ ಮೆದುಳನ್ನು ಉಪಯೋಗಿಸಲು ಮುಸ್ಲಿಮ್ ಮಹಿಳೆಯಿಂದ ಸಾಧ್ಯವಾಗುತ್ತಿಲ್ಲ ಎಂದು ದುಃಖಿಸುವವರ ರೀತಿ ನೋಡುವಾಗ ಛೆ! ಇವರ್‍ಯಾಕೆ ಬಾವಿಯೊಳಗಿನ ಕಪ್ಪೆಯಾಗುತ್ತಿದ್ದಾರೆ ಎಂಬ ಬೇಸರ ಮೂಡುತ್ತದೆ. ಮುಂದುವರಿದ ದೇಶವೆಂದು ಹೆಗ್ಗಳಿಕೆ ಇರುವ ಅಮೇರಿಕ, ಬ್ರಿಟನ್, ಆಸ್ಟ್ರೇಲಿಯಾ ದೇಶದ ಮಹಿಳೆಗಿಂತ ಇರಾನ್ ದೇಶದ ಮುಸ್ಲಿಮ್ ಮಹಿಳೆಯು ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಪಾರ್ಲಿಮೆಂಟ್ ಮತ್ತು ಸರಕಾರಿ ನೌಕರಿಯಲ್ಲಿದ್ದಾಳೆ ಎಂಬ ಅಂಕಿ ಅಂಶ ಇವರಿಗೆ ತಿಳಿಯದೆ ಹೋಯ್ತೇ?

'ಪರ್ದಾ ಹೈ ಪರ್ದಾ' ಎಂಬ ಅಲ್ಪಜ್ಞಾನದ ಬರಹಕ್ಕೆ ಉತ್ತರಿಸುವ ಅಗತ್ಯ ನನಗಿಲ್ಲದಿದ್ದರೂ ಇಂತಹ ಅಜ್ಞಾನಿಗಳಿಗೆ ಬರಹದ ಮೂಲಕ ಮುಸ್ಲಿಮ್ ಮಹಿಳೆಯ ಮೆದುಳು ಯಾವ ರೀತಿ ಕೆಲಸ ಮಾಡುತ್ತೆ, ಅವಳಿಂದ ಏನನ್ನು ನಿರೀಕ್ಷಿಸಬಹುದು ಎಂಬ ಸಣ್ಣ ಸೂಚನೆಯನ್ನು ನೀಡಲು ಬಯಸುತ್ತೇನೆ.

ನಿಜವಾಗಿಯೂ ಹೆಣ್ಣೆಂಬ ಜೀವಿಯು ಪ್ರಕೃತಿದತ್ತವಾಗಿ ಲಜ್ಜೆಯ ಪ್ರತೀಕವಾಗಿದ್ದಾಳೆ ಎಂಬ ಸತ್ಯವನ್ನು ಅಲ್ಲಗಳೆಯಲು ಸಾಧ್ಯವೇ? ಅನುಕರಣೆ, ಅಭ್ಯಾಸಬಲ ಎಂಬ ಸಮೂಹ ಸನ್ನಿಯಿಂದ ಆಕೆ ಲಜ್ಜೆಯೆಂಬ ಅತ್ಯಮೂಲ್ಯ ನೈತಿಕ ಮೇರೆಯನ್ನು ಅಡವಿಡಲು ಹೇಸುವುದಿಲ್ಲ. ಹಾಗೆ ಮೈಯನ್ನು ಹರಾಜಿಗಿಟ್ಟ ಹೆಣ್ಣನ್ನು ಛೀ, ಥೂ ಎಂದರೆ, ಇವಳ್ಯಾವ ಓಬಿರಾಯನ ಕಾಲದವಳು ಎಂಬ ಮೂದಲಿಕೆಯನ್ನು ಎದುರಿಸುವ ಭಯ ಇರುವುದರಿಂದ ಅವಳು ಲಜ್ಜೆಯನ್ನು ಚಿವುಟಿ ಹಾಕುತ್ತಾಳೆ.

ಹೆಣ್ಣಿನ ತೊಡೆಯನ್ನು, ತುಟಿಯನ್ನು, ಮೂಗನ್ನು, ಕತ್ತನ್ನು, ಕೆನ್ನೆಯನ್ನು, ಎದೆಯನ್ನು, ನಡತೆಯನ್ನು ನೋಡಿ ಆನಂದಿಸುವ ಪುರುಷನಿಗೆ, ಬಿಟ್ಟಿಯಾಗಿ ದೊರಕುವ ಈ ಎಲ್ಲಾ ಆಹ್ಲಾದಕರ ದೇಹ ಸೌಂದರ್ಯವನ್ನು ಆಸ್ವಾದಿಸದೆ ಇರಲು ಸಾಧ್ಯವೇ? ಆ ಚಪಲ ಅದು ಸೃಷ್ಟಿಯಲ್ಲಿ ಪ್ರಕೃತಿದತ್ತವಾಗಿಯೇ ಆತನಿಗೆ ದೇವನಿಂದ ಲಭಿಸಿರುವಾಗ, ಇಲ್ಲ ನಾನು ಬೇರೆ ಹೆಣ್ಣನ್ನು ಕಾಣುವಾಗ ಯಾವ ದೃಷ್ಟಿಯಿಂದಲೂ ನೋಡುವುದಿಲ್ಲ ಎಂಬ ಮಾತಿನಷ್ಟು ದೊಡ್ಡ ಸುಳ್ಳು ಬೇರೊಂದಿಲ್ಲ. ಕಾಮದ ಅಮಲಿನಲ್ಲಿ ಆತನಿಗೆ ಹೆಣ್ಣು ಎಂಬ ವಸ್ತು ಮಾತ್ರ ಗೋಚರವಾಗುತ್ತದೆಯೇ ಹೊರತು ಮಗಳು, ತಾಯಿ, ಅಕ್ಕ, ತಂಗಿ ಎಂಬ ವ್ಯತ್ಯಾಸ ಅರಿಯುವುದಿಲ್ಲ ಎಂಬುದಕ್ಕೆ ಹಲವಾರು ಉದಾಹರಣೆಗಳು ನಮ್ಮ ಮುಂದಿವೆ. ಅದಕ್ಕಾಗಿಯೇ ಸ್ತ್ರೀಗೆ ತನ್ನ ದೇಹ ಸೌಂದರ್ಯವನ್ನು ಮುಚ್ಚುವ ಆಜ್ಞೆಯನ್ನು ನೀಡಲಾಗಿದೆ. ಆ ಮೂಲಕ ಪುರುಷನ ಮನಸ್ಸಿಗೆ ಕಡಿವಾಣ ಹಾಕಲು ಬಯಸುತ್ತದೆ.

ಗಂಡು-ಹೆಣ್ಣು ವಿವಾಹವಾಗುವ ಮೂಲಕ ನೀವು ಪರಸ್ಪರ ಉಡುಪಾಗಿದ್ದೀರಿ ಎಂದು ಕುರ್‌ಆನ್ ಪ್ರತಿಪಾದಿಸಿ, ಅವರು ಪರಿಪೂರ್ಣವಾದ ಆನಂದವನ್ನು, ಸುಖವನ್ನು ಗಳಿಸಲು ಪ್ರೇರೇಪಿಸಲಾಗಿದೆ. ಆಕೆಯ ಸಂಪೂರ್ಣ ಸೌಂದರ್ಯದ ಹಕ್ಕುದಾರ ಆಕೆಯ ಪತಿ ಮಾತ್ರ. ಪತಿಯಿಂದ ದೇಹ ಸುಖವನ್ನು ಆಸ್ವಾದಿಸುವ ಹಕ್ಕು ಪತ್ನಿಗೆ ಮಾತ್ರ ಎಂಬ ಸಿದ್ಧಾಂತವನ್ನು ಪ್ರತಿಪಾದಿಸಿ ಆರೋಗ್ಯಕರ ಕುಟುಂಬದ ನಾಂದಿಗೆ ಪ್ರೇರೇಪಿಸಿರುವುದು ತಪ್ಪಾ? ಅಶ್ಲೀಲತೆಯನ್ನು ಹರಡುವ ಸಂಪೂರ್ಣ ಬಾಗಿಲನ್ನು ಈ ಮೂಲಕ ಮುಚ್ಚಲು ಇಸ್ಲಾಮ್ ಧರ್ಮ ಅವಕಾಶ ಮಾಡಿಕೊಟ್ಟಿದೆ ಎಂಬ ಸತ್ಯ ಅರಿತವರಿಗೆ ಖಂಡಿತ ಮೈಮುಚ್ಚುವ ಬಟ್ಟೆ ಎಂದೂ ಸಮಸ್ಯೆಯಾಗುವುದಿಲ್ಲ.


Printed & Published by M. Sadullah on behalf of Sanmarga Publication Trust, Printed at Comprint, Hidayath Centre, Beebi Alabi Road, Mangalore-575001
And Published at Hidayath Centre, Beebi Alabi Road, Mangalore-575001. **Editor: A.K. Kukkila, CHIEF EDITOR: P. NOOR MUHAMMED**
Ph: 2422786. Fax: 91-0824-2426846. E-mail: **sanmargamatter@gmail.com** Website: **www.sanmarga.com** (Regd. with RNI No. 29903/78)